ಐಕ್ಯರಂಗ

ದುಡಿವ ಜನರ ಪ್ರಾಣ ಮಿತ್ರ


ಸಂಪುಟ 25 ಸಂಚಿಕೆ 18
ಮೇ 04, 2003 ಬೆಲೆ ರೂ. 3.00

ಮೇ ದಿನದ


ವಿಶೇಷ ಲೇಖನಗಳು

ಯುದ್ಧ ದಾಹಿ ಸಾಮ್ರಾಜ್ಯಶಾಹಿ

ಕಾಶ್ಮೀರಕ್ಕೆ ಪ್ರಧಾನಿ ಮುಂದೇನು ?



ಮೇ



ಮೇ
ಎಂಬುದು
ಮಿಂಚುಗೊಂಚಲು
ಕತ್ತಲಲ್ಲಿ ಮಿಣಿಮಿಣಿ ಬೆಳಕ
ಚೆಲ್ಲುವ ಮಿಣುಕುಹುಳ
ತಡಕಾಡುವ ನೋವಿಗೆ ಚೈತನ್ಯದ
ಸ್ಪರ್ಶ

ಮೇ
ಮಾವಿಗೆ ತೂಗುವ ಜೊಂಪು
ಕನಸಿಗೆ ಮುತ್ತಿಕ್ಕುವ ಮಾಸ
ಮೇ ಎಂಬುದು ಮಿಂಚುಗಳ
ಗೆಣೆಕಾತಿ ಹಾಡ ಕೊನೆಗೆ
ತೂಗುವ ದೀಪ
ಅರಳುವ ಚಿಮ್ಮುವ ಹಲವು
ಕೆಂಪು ಪಕಳೆಗಳ ಮಧ್ಯೆ
ಇನ್ನಿಲ್ಲವಾದ ಹಾಡು.

ಮೇ
ಅಂದರೆ ಅದೇ
ವಸಂತದ ಹಾಡುಗಳ ಮೊರೆತ
ಕಣ್ಣೊಳಗೆ ಅರಳಿದ ಹೊಸ ನಗೆಯ
ಗುಲ್ ಮೊಹರ್
ಬಾಡಬಕ್ಕದ ಗಿಡದೊಳಗೆ
ಜಿಗಿತು ಬಂದ ಕೆಂಪನೆಯ ಹೂ
ಎದೆಯ ಗೂಡಿಗೆ ಲಗ್ಗೆಯಿಕ್ಕಿದ
ಕುಕಿಲು ನಗೆಗಳ ಪರಪುಟ್ಟ
ಹೊಸತು ಮಾತಿಗೆ ಜೋತು ಬೀಳುವ
ವಾರೆನೋಟದ ಹೊಸದೇ ಹುಡುಗಿಯರು

ಮೇ
ಎಂದರ ಅದೇ
ನನ್ನುಡುಗಿ ಕಣ್ಣಾಲಿ
ಎಳೆಬಾಲ್ಯ ಜೋಕಾಲಿ
ನೆನಪುಗಳ ಒಡಲಲ್ಲಿ ಹೊರಬಂದ
ಪುಟ್ಟ ಮರಿ
ಜೋಡಿ ನೋಟಕೆ ಸೋತ
ಹಸಿ ಹಸುರು ಹುಲ್ಲುಗರಿ
ಎದೆ ಕನಸು ಹೊಸ ಹಾಡು
ಎಲ್ಲಕ್ಕೂ ವಸಂತ ಗರಿ

- ಜಿ.ಎನ್.ಮೋಹನ್
('ಸೋನೆ ಮಳೆಯ ಸಂಜೆ'
ಕವನ ಸಂಕಲನದಿಂದ)


ಮೇ 21,2003

ಕೇಂದ್ರ ಸರಕಾರದ
ಖಾಸಗೀಕರಣ ನೀತಿ, ಆರ್ಥಿಕ
ನೀತಿಗಳ ವಿರುದ್ಧ ಅಖಿಲ
ಭಾರತ ಸಾರ್ವತ್ರಿಕ ಮುಷ್ಕರ

ಯಶಸ್ವಿಗೊಳಿಸಿ

ಬೂಟಾಟಿಕೆ ನಾಯಕರ ಷಡ್ಯಂತ್ರ

ವಿಮೋಚನಾ ಸಮರದಲ್ಲಿ....



ಮೇಜರ್ ಜಯಪಾಲ್ ಸಿಂಗ್

ಆತ್ಮಕಥನ 24



ಹಿಂದಿನ ಸಂಚಿಕೆಯಲ್ಲಿ ಕ್ರಾಂತಿಕಾರಿ ಮನೋಭಾವದ ಬಗ್ಗೆ ಗಾಂಧೀಜಿ ಮತ್ತು ಕಾಂಗ್ರೆಸ್ಸಿನವರಲ್ಲಿನ ಭಯ, ಪ್ರಬಲ ಶಕ್ತಿಯಿದ್ದರೂ ಸಾಮ್ರಾಜ್ಯಶಾಹಿಗಳ ಪದತಲಕ್ಕೆ ಮಣಿದ ರಾಷ್ಟ್ರನಾಯಕರು, ಬಂಡಾಯದ ಸಾಧ್ಯತೆ ಮೇ!! ಜಯಪಾಲ್ ಸಿಂಗರ ತಲೆ ಹೊಕ್ಕಿದ್ದು ಮತ್ತು ಅಂದಿನ ಕಾಂಗ್ರೆಸ್ ನಾಯಕತ್ವಕ್ಕೆ ಭಾರತೀಯ ಶ್ರೀಮಂತರ ಮತ್ತು ಹಿಂದೂ - ಮುಸ್ಲಿಂ ಎರಡೂ ಧರ್ಮದ ಶ್ರೀಮಂತರ ಹಿತ ಕಾಪಾಡುವ ಒಪ್ಪಂದ ಬೇಕಾಗಿತ್ತು.... ಮುಂದೆ ....

ಕನ್ನಡಕ್ಕೆ: **ವಿಶ್ವ ಕುಂದಾಪುರ**

ಗಾಂಧೀಜಿ ನೇತೃತ್ವದ ಕಾಂಗ್ರೆಸ್ ಜಿನ್ನಾ ಜತೆ ರಾಜಿ ಮಾಡಿಕೊಳ್ಳಲೂ ಇಲ್ಲ. ಸಾಮ್ರಾಜ್ಯಶಾಹಿಗಳ ವಿರುದ್ಧ 'ಭಾರತ ಬಿಟ್ಟು ತೊಲಗಿ' ಚಳುವಳಿಯನ್ನು ಆರಂಭ ಮಾಡಲೂ ಇಲ್ಲ. ನೆಹರೂ ಮತ್ತು ಪಟೇಲ್ ಆಗಾಗ ಸಾಮ್ರಾಜ್ಯಶಾಹಿಗಳ ವಿರುದ್ಧ 'ಗುಟುರು' ಹಾಕಿ ಬ್ರಿಟೀಷ್ ವಿರೋಧಿ ಸಿದ್ಧಾಂತವನ್ನು ಜೀವಂತ ಇರಿಸಿದರು, ಅಷ್ಟೆ.

'ಮೊದಲು ತೊಲಗಿ, ಸಮಸ್ಯೆಯನ್ನು ನಮ್ಮ ನಮ್ಮಲ್ಲೇ ಪರಿಹರಿಸಿಕೊಳ್ಳಲು ಏಕಾಂಗಿಯಾಗಿ ಬಿಟ್ಟುಬಿಡಿ' ಎಂದವರು ಕೂಗಿದರು. ಆದರೆ ಸಾಮ್ರಾಜ್ಯಶಾಹಿಗಳ ವಿರುದ್ಧ ಆಕ್ರಮಣ ಮಾಡಲು ಯಾವುದೇ ನಿರ್ದಿಷ್ಟ ಕ್ರಮ ಕೈಗೊಳ್ಳಲಿಲ್ಲ. ವಾಸ್ತವವಾಗಿ ಇಂಥ ಒಂದು ಸಂಘರ್ಷಕ್ಕಾಗಿ ಇದೇ ಜನತೆ ಹಾಗೂ ಭಾರತೀಯ ಸಶಸ್ತ್ರ ಪಡೆಗಳವರು ಕುತೂಹಲದಿಂದ ಆಸಕ್ತಿಯಿಂದ ಎದುರು ನೋಡುತ್ತಿದ್ದರು.

ಅದೊಂದು ತಪ್ಪೇ? ಕ್ರಮ ಕೈಗೊಳ್ಳಲು ಮುಂದಾಗುವಲ್ಲಿನ ಕಾಂಗ್ರೆಸ್ ಪಕ್ಷದ ಕೊರತೆಯೇ? ಆಘಾತ ಹಾಗೂ ಆಶ್ಚರ್ಯಚಕಿತರಾದ ಜನರು ಈ ಪ್ರಶ್ನೆಗಳನ್ನು ಕೇಳತೊಡಗಿದರು. ಇದೊಂದು ತಪ್ಪು ಎಂದು ಶುಷ್ಕ ಹೃದಯದವರು ಹೇಳಿದರು.

ತ್ರಿಮೂರ್ತಿಗಳ ಹುನ್ನಾರ

ಇದೊಂದು ಸಹಜ ತಪ್ಪು ಆಗಿರಲಿಲ್ಲ. ಭಾರತದ ರಾಜಕಾರಣದಲ್ಲಿನ ಆಗಿನ ಮೂರು ದೊಡ್ಡ ಶಕ್ತಿಗಳಾದ ಸಾಮ್ರಾಜ್ಯಶಾಹಿ, ಕಾಂಗ್ರೆಸ್ ಮತ್ತು ಮುಸ್ಲಿಂಲೀಗ್‌ಗಳ ಬುದ್ಧಿವಂತಿಕೆಯ ಹುನ್ನಾರವಾಗಿತ್ತು. ಅವರೆಲ್ಲರೂ ಭಾರತದ ಜನರ ವಿರುದ್ಧ ಒಗ್ಗಟ್ಟಾಗಿದ್ದರು. ನಮ್ಮ ಜನರ ಕ್ರಾಂತಿಕಾರಿ ಮೂಡ್‌ನಿಂದಾಗಿ ಅವರು ಬೆಚ್ಚಿಬಿದ್ದಿದ್ದರು. ಜನರ ಕ್ರಾಂತಿಕಾರಿ ಶಕ್ತಿಯನ್ನು ಕೋಮುವಾದದ ದಾವಾನಲವನ್ನಾಗಿ ಪರಿವರ್ತಿಸುವ ದಿಸೆಯಲ್ಲಿ ಏನಾದರೂ ಮಾಡಿ ರಾಜೀಮಾಡಿಕೊಳ್ಳಬೇಕೆಂದು ಅವರು ಬಯಸಿದ್ದರು. ಇದು ಬೃಹತ್ ತ್ರಿಮೂರ್ತಿಗಳ ಒಮ್ಮತದ ಅಭಿಪ್ರಾಯವಾಗಿತ್ತು.

ಬ್ರಿಟೀಷರ ವಿರುದ್ಧ ಸಮರಸಾರಲು ಗಾಂಧೀಜಿಯ ಅರೆಮನ, ಸಂಧಾನದಲ್ಲಿ ಜಿನ್ನಾರ ತರಲೆ ಮತ್ತು ಲೀಗ್ ಹಾಗೂ ಕಾಂಗ್ರೆಸ್ ಒಟ್ಟಾಗಿ ಅಧಿಕಾರ ಪಡೆಯದೆ ಭಾರತ ಬಿಟ್ಟು ಹೋಗುವಲ್ಲಿನ ಸಾಮ್ರಾಜ್ಯಶಾಹಿಗಳ 'ಅಸಮರ್ಥತೆ' ಯುದ್ಧೋತ್ತರ ಅವಧಿಯಲ್ಲಿ ಭಾರತದ ಜನರ ಕಾಲಿಗೆ ತೊಡಿಸುವ ಸರಪಳಿಯಲ್ಲಿನ ಮೂರು ಕೊಂಡಿಗಳಾಗಿದ್ದವು ಇವು.

ಬ್ರಿಟೀಷರ ಜನತೆಗಿನ ಮಾತುಕತೆಗಳಲ್ಲಿ ಕಾಂಗ್ರೆಸ್ ಚಾತುರ್ಯ ಪ್ರಯೋಗಿಸಿತು. ಆದರೆ ಈ ಯುಕ್ತಿ ಹೊರನೋಟಕ್ಕೆ ಅಪ್ಪಟ ಕ್ರಾಂತಿಕಾರಿಯಾದರೂ ಅಂತರ್ಯದಲ್ಲಿ ರಾಜಿಗಾಗಿ ತುಡಿಯುತ್ತಿದ್ದ ಶುಷ್ಕ ಹೃದಯಿಯೊಬ್ಬನ ಚತುರತೆಯಾಗಿತ್ತು.

ಪಾಕಿಸ್ತಾನ ರಚನೆ ಅನಿವಾರ್ಯ ಎಂಬುದನ್ನು ಕಾಂಗ್ರೆಸ್ ನಾಯಕತ್ವ 1945ರ ಕೊನೆ ಕೊನೆಯಲ್ಲಿ ಒಪ್ಪಿಕೊಂಡಿತು ಎಂಬುದು ನನ್ನ ಬಲವಾದ ನಂಬಿಕೆಯಾಗಿದೆ. ಆ ಪ್ರವೃತ್ತಿ ತುಂಬಾ ಹಿಂದೆಯೇ ರಾಜಾಜಿಯವರ ಮೂಲಕ ಸುವ್ಯಕ್ತವಾಗಿತ್ತು. ಪಟೇಲ್ ಮತ್ತು ನೆಹರೂ ಕೂಡ ಈ ಅಭಿಪ್ರಾಯವನ್ನು ಅನುಮೋದಿಸಿದ್ದರು. ಆದರೆ ಅವರು ಬಹಿರಂಗವಾಗಿ ಅದನ್ನು ಹೇಳುವಂತಿರಲಿಲ್ಲ.

ಭಾರಿ ಸ್ಫೋಟಕವಾಗಿದ್ದ ಇಡೀ ವಾತಾವರಣವನ್ನು ನಿರ್ಧಾರತಾಳಲಾಗದ, ಕೋಮುವಾದಿ ತ್ವೇಷಮಯ ಪರಿಸರಕ್ಕೆ ಅನುಕೂಲವಾಗುವಂತೆ ನೋಡಿಕೊಳ್ಳಲಾಯಿತು. ಈ ರೀತಿ ಮಾಡಿದ್ದು ಬೃಹತ್ ತ್ರಿವಳಿಗಳ ಜನ 'ವಿರೋಧಿ ಉದ್ದೇಶಗಳನ್ನು ಯಾರಿಗೂ ಅನುಮಾನಕ್ಕೆ ಎಡೆಯೇ ಇಲ್ಲದಂತೆ ಸಾಬೀತುಪಡಿಸಿತು.

ಕ್ರಾಂತಿಕಾರಿ ಮನೋಸ್ಥಿತಿಯಲ್ಲಿದ್ದ ಜನರು ಹತಾಶರಾಗಿ ಕೋಮುವಾದಿ ಜ್ವಾಲೆಯಲ್ಲಿ ಬೆಂದು ಕೊನೆಗೆ ಅವರೇ 'ಜಿನ್ನಾಗೆ ಅವರ ಪಾಕಿಸ್ತಾನ ಕೊಡಿ' ಎಂದು ಕೂಗಬೇಕು ಎನ್ನುವಂಥ ಸನ್ನಿವೇಶ ನಿರ್ಮಾಣಮಾಡಲು ತ್ರಿಮೂರ್ತಿ ಕೂಟ ಷಡ್ಯಂತ್ರ ಹೆಣೆಯಿತು.

ಆದರೆ ಕೊನೆಕ್ಷಣದವರೆಗೂ ಸಿಂಹಗಳು ಗರ್ಜಿಸಿದವು. ಪಾಕಿಸ್ತಾನ ಅಸ್ತಿತ್ವಕ್ಕೆ ಬರುವ ಹಾಗೂ ತ್ರಿವಳಿಗಳು ತೆರಮರೆಯ ಒಪ್ಪಂದಕ್ಕೆ ಬರುವ ಕೆಲವೇ ದಿನಗಳ ಮುನ್ನ ಮಸ್ಸೂರಿಯಿಂದ ಗುಡುಗಿದ ಪಟೇಲ್, 'ನಮ್ಮ ಹೆಣಗಳ ಮೇಲಷ್ಟೇ ಪಾಕಿಸ್ತಾನ ಅಸ್ತಿತ್ವಕ್ಕೆ ಬರಲು ಸಾಧ್ಯ' ಎಂದು ಭಾರತೀಯ ಜನತೆಗೆ ಹೇಳಿದರು.

ನಮ್ಮ ಶವಗಳ ಮೇಲೆ' ಅದು ರಚನೆಯಾಯಿತು. ಆದರೆ ಆಗ ಪಟೇಲ್ ಇರಲಿಲ್ಲ. ಅವರಂಥ ರಾಜಕೀಯ ಬೂಟಾಟಿಕೆಯ ವ್ಯಕ್ತಿ ಇತಿಹಾಸದಲ್ಲಿ ಬೇರೊಬ್ಬರು ಸಿಗಲಾರರು.

ಐತಿಹಾಸಿಕ ಸಭೆ

ಜನವರಿ 7 ರಂದು ನಾನು ಮುರ್ರಿಯಲ್ಲಿ ಪಿಕ್‌ನಿಕ್ ಏರ್ಪಡಿಸಿದೆ. ಸಂಘಟನಾ ಸಮಿತಿಯ ಸಭೆ ನಡೆಸಲು ಪಿಕ್‌ನಿಕ್ ಸೋಗು ವಾಯುಪಡೆ, ಸಿಗ್ನಲ್ ಕಾರ್ಪ್ಸ್ ಮತ್ತು ಪದಾತಿದಳ ಘಟಕಗಳಿಂದ 15 ಅಧಿಕಾರಿಗಳು, ಮೂವರು ಡಬ್ಲ್ಯು.ಎ.ಸಿ.(ಐ) ಗಳು ಮತ್ತು ಹತ್ತು ಎನ್.ಸಿ.ಓಗಳು ಈ ಸಭೆಯಲ್ಲಿ ಭಾಗವಹಿಸಿದರು.

(ಮುಂದುವರಿಯುವುದು)

ಇಂದಿಗಾಗಿ ನಾಳಿನ ಕಾರ್ಯಕ್ರಮಗಳು

29 ಏಪ್ರಿಲ್ -2003
ಅಂಚೆ ನೌಕರರ ಧರಣಿ
ಭಾರತ ಅಂಚೆ ಕಾಯಿದೆಗೆ ತಿದ್ದುಪಡಿ ವಿರೋಧಿಸಿ, ಸಿಪಿಎಂಜಿ ಕಛೇರಿ, ಮಹಾರಾಣಿ ಕಾಲೇಜು ಬಳಿ ಬೆಳಿಗ್ಗೆ 10 ಗಂಟೆ

ಮೇ 1, 2003
ಎಲ್ಲೆಡೆ ಮೇ ದಿನಾಚರಣೆ
ಬೆಂಗಳೂರಿನಲ್ಲಿ ಬನ್ನಪ್ಪ ಪಾರ್ಕ್, ಕಾರ್ಪೋರೇಶನ್ ಕಛೇರಿ ಬಳಿ ಸಭೆ.
ಕಾರ್ಮಿಕ ಸಂಘಗಳ (JCTU) ಜಂಟಿ ಆಶ್ರಯದಲ್ಲಿ ಸಂಜೆ 3 ಗಂಟೆಗೆ, ವಿವಿಧ ಕಡೆಗಳಿಂದ ಮೆರವಣಿಗೆ ಸಂಜೆ 4 ಗಂಟೆಗೆ, ಬಹಿರಂಗ ಸಭೆ.

ಮೇ 5, 2003
ವಿದ್ಯುತ್ ಪಂಪ್‌ಸೆಟ್ ಹಾಗೂ ಭಾಗ್ಯಜ್ಯೋತಿ ಬಳಕೆದಾರರ ಸಂಘದಿಂದ ದರ ಏರಿಕೆ, ಮೀಟರೀಕರಣ, ಖಾಸಗೀಕರಣ ವಿರುದ್ಧ ರಸ್ತೆ ತಡೆ.

ಮೇ. 17, 2003
ಕರ್ನಾಟಕ ಪ್ರಾಂತ ರೈತ ಸಂಘ ಉತ್ತರಕನ್ನಡ ಜಿಲ್ಲಾ ಸಮ್ಮೇಳನ ಕಾರವಾರ

ಮೇ 19, 21,2003
ಅಖಿಲ ಭಾರತ ಔಷಧಿ ಪ್ರತಿನಿಧಿಗಳ (FMRAI) ಮುಷ್ಕರ

ಜೂನ್ 2 - 5, 2003
BSNL ಎಂಪ್ಲಾಯೀಸ್ ಯೂನಿಯನ್ 2ನೇ ಅಖಿಲ ಭಾರತ ಸಮ್ಮೇಳನ ಲಕ್ನೋ, ಉತ್ತರಪ್ರದೇಶ

ಐಕ್ಯರಂಗ ಇನ್ನಷ್ಟು ಹೊಸ ಸತ್ವದೊಂದಿಗೆ...

ಕನ್ನಡ ಜನತೆಯ ಮಾನವೀಯತೆ, ವೈಚಾರಿಕ ಶಕ್ತಿ, ಧರ್ಮನಿರಪೇಕ್ಷತೆ ಮನೋಭಾವದ ಮೇಲೆ ಎರಗಿದ ಧಾಳಿಯ ಸವಾಲನ್ನು ಎದುರಿಸಲು ಸಜ್ಜಾಗಬೇಕಿದೆಯೆಂದು ಸ್ಪಷ್ಟವಾಗಿ ಗುರುತಿಸಿದ ಐಕ್ಯರಂಗವು 1999 ರ ಮೇ ದಿನದ ಸಂದರ್ಭದ ಸಂಚಿಕೆಯ ಮೂಲಕ ಹೊಸ ವಿನ್ಯಾಸ-ವಿಸ್ತಾರಗಳನ್ನು ಪಡೆದು ಪ್ರಕಟಗೊಂಡಿತು. ಅದಕ್ಕಾಗಿ 12 ಪುಟಗಳಲ್ಲಿ ವಿಸ್ತರಿಸಿತು. ಹೊಸ ಹೊಸ ವಿಷಯಗಳ ಬರವಣಿಗೆಗಳು, ಅದಕ್ಕೊಪ್ಪುವ ಭಾಷೆಗಳಲ್ಲಿ ವಿಚಾರಗಳು ಅರಳಿಕೊಂಡವು. ಅದರ ಸತ್ವ-ಶಕ್ತಿ ಕಾಯುವ ಅನೇಕ ಪ್ರಯತ್ನಗಳನ್ನು ನೀವು ನೋಡಿದ್ದೀರಿ.

ಹಾಗೆಯೇ ಕರ್ನಾಟಕದ - ದೇಶದ ಇಂದಿನ ಸಂದರ್ಭಗಳನ್ನು ಅವಲೋಕಿಸಿದಾಗ ಸವಾಲುಗಳೂ ಹೆಚ್ಚಿವೆ. ಈ ಅರಿವು ಇನ್ನೂ ವಿಸ್ತಾರಗೊಳ್ಳಬೇಕು. ಹೊಸ ಸಂಗತಿಗಳನ್ನು ಹೆಚ್ಚು ಆತ್ಮೀಯವಾಗಿ ತಲುಪಬೇಕಾದ ಒತ್ತಾಸೆ ಹೆಚ್ಚಿದೆ. ಆದ್ದರಿಂದಲೇ ಇನ್ನೂ ಉತ್ತಮಗೊಳಿಸುವ ಯತ್ನದ ಭಾಗವಾಗಿ ಹೊಸ ಕಾಲಂಗಳು, ಬರಹಗಳನ್ನು - ಮಾಧ್ಯಮದ ಸಾಧ್ಯತೆಗಳನ್ನೂ ಬಳಸಿ ಇದೇ 2003 ರ ಕೆಂಪು ಮೇ ದಿನದ ಸಂದರ್ಭದಲ್ಲೇ ಆರಂಭಿಸುತ್ತಿದ್ದೇವೆ. ಅದನ್ನು ಇನ್ನೂ ಬೆಳೆಸುತ್ತಾ ಹೋಗುವ ಇಚ್ಛೆ ನಮ್ಮದು. ಈ ಯತ್ನಗಳು ಹೆಚ್ಚು ಫಲ ಕಾಣಲಿ ಎಂದು ಆಶಿಸುತ್ತೇವೆ. ದುಡಿವ ಜನರ ಪ್ರಾಣ ಮಿತ್ರನ ಪೂರ್ಣ ಸಹಕಾರ ಇದೆ. ಪ್ರಯತ್ನಕ್ಕೆ ನೀವೂ ಕೈ ಜೋಡಿಸುತ್ತೀರಲ್ಲವೇ?

- ಸಂಪಾದಕರು

ಸಿಇಟಿ : ಸರ್ಕಾರದ ದೃಢ ನಿಲುವು ಅಗತ್ಯ

ಖಾಸಗಿ ಇಂಜನಿಯರಿಂಗ್ ಮತ್ತು ವೈದ್ಯಕೀಯ ಶಿಕ್ಷಣ ಸಂಸ್ಥೆಗಳಲ್ಲಿ ಪ್ರವೇಶ ಕುರಿತಂತೆ ಸರ್ಕಾರ ಮತ್ತು ಅನುದಾನ ರಹಿತ ಖಾಸಗಿ ಸಂಸ್ಥೆಗಳ ನಡುವೆ ಈಗ ಸ್ವಲ್ಪ ಬಿಸಿ ವಾದ ನಡೆದಿದೆ.

ಸುಪ್ರೀಂಕೋರ್ಟ್‌ನ ತೀರ್ಪಿನ ಹಿನ್ನೆಲೆಯಲ್ಲಿ ಪ್ರವೇಶಾವಕಾಶದಲ್ಲಿ ಶೇ 75 ರಷ್ಟು ಸೀಟುಗಳನ್ನು ಸರ್ಕಾರಕ್ಕೆ ಹಾಗೂ ಶೇ 25 ರಷ್ಟು ಆಡಳಿತ ಮಂಡಳಿಗಳ ಕೋಟಾವೆಂದು ಕರ್ನಾಟಕ ಸರ್ಕಾರದ ಸಚಿವ ಸಂಪುಟದ ತೀರ್ಮಾನವನ್ನು ಖಾಸಗಿ ...ಣೆಗಳು ಬಹಿರಂಗವಾಗಿ ಟೀಕಿಸಿರುವುದಲ್ಲದೇ ...ಇಟಿಯನ್ನು ಧಿಕ್ಕರಿಸಿ ತಾವೇ 'ಸ್ವತಂತ್ರ ಆಯ್ಕೆ ಪದ್ಧತಿ'ಯನ್ನು ಆರಂಭಿಸಲು ಮುಂದಾಗಿರುವುದು ...ತ್ಯಂತ ಉದ್ಧಟತನದ ವರ್ತನೆಯಾಗಿದೆ. ಟಾಟಾ ...ಸ್ಲೆಕ್ಸ್ ಮೂಲಕ ಇದನ್ನು ಮಾಡಲಾಗುತ್ತದೆಂದು ಕಾಂಗ್ರೆಸ್ ಸಂಸದ ಆರ್.ಎಲ್.ಜಾಲಪ್ಪ ಹೇಳಿದ್ದಾರೆ. ಈಗ ಸರ್ಕಾರದೊಂದಿಗೆ ...ವನಕ್ಕಿಳಿದಿರುವ ಜಾಲಪ್ಪ, ಶ್ಯಾಮನೂರು ...ವಶಂಕರಪ್ಪನಂತಹ ಶಿಕ್ಷಣ ಕ್ಷೇತ್ರದ ಭಾರೀ ...ಳಗಳು ಕಾಂಗ್ರೆಸ್ ಪಕ್ಷದವರೇ ಆಗಿದ್ದಾರೆ. ...ರ್ಕಾರದ ನಿರ್ಧಾರ ಪ್ರಕಟಿಸುತ್ತಿರುವ ಶಿಕ್ಷಣ ...ಚಿವ ಡಾ. ಪರಮೇಶ್ವರ್ ಖಾಸಗಿ ಸಂಸ್ಥೆಗಳ ...ಡೆಯ!

...ಡ್ಡು ಸುಲಿಯುವ ದಂಧೆ ಬಿಟ್ಟು ಇನ್ನೇನಿದೆ?

ಸರ್ಕಾರದ ನಿಲುವನ್ನು ಧಿಕ್ಕರಿಸುವುದು ...ಂಡನೀಯ. ಈ ಶಿಕ್ಷಣ ಸಂಸ್ಥೆಗಳವರು ಹಿಂದೆ ...92 ರ ಉನ್ನಿಕೃಷ್ಣನ್ ತೀರ್ಪು ಜಾರಿಗೊಳಿಸಿ ...ಬಾ ಬಸವಳಿದವರಂತೆ ಆಡುತ್ತಿದ್ದಾರೆ. ಶಿಕ್ಷಣದ ದಾನಕ್ಕೆ ಜೀವನವನ್ನೇ ತೇದು ಬಿಟ್ಟಿದ್ದಾರಂತೆ. ಸಾಮಾಜಿಕ ನ್ಯಾಯ ಪರಿಪಾಲಿಸಿದ್ದಾರಂತೆ. ಇನ್ನೂ ಈ ಭಾರ ಹೊರಲು ಆಗದಂತೆ. ಇವರು ಸರ್ಕಾರದ ಆಜ್ಞೆ ಪಾಲಿಸಿದ್ದಲ್ಲಿ ಅವರೇ ಹೇಳುವಂತೆ ನಷ್ಟ ಅನುಭವಿಸಿದ್ದೇವೆಂಬುದು ಎಷ್ಟು ಸತ್ಯ? ಇವರ ಸಂಸ್ಥೆಗಳ ಆಸ್ತಿ, ಅವರ ವೈಯಕ್ತಿಕ ಆಸ್ತಿ-ಭರಾಟೆ, ರಾಜಕಾರಣದಲ್ಲಿ 'ಶಿಕ್ಷಣದ ಲಾಭ' -ಇವನ್ನೆಲ್ಲಾ ಗಮನಿಸಿದರೆ ಸಾಕಾದೀತು ಇವರ ಬಡತನ! ಇವರ ಸಂಸ್ಥೆಗಳಲ್ಲಿ ಕರ್ನಾಟಕದವರಿಗೆ ಒಂದಿಷ್ಟು ಸೀಟು ಇಟ್ಟು - ಹೊರರಾಜ್ಯ - ಹೊರದೇಶಗಳ ಅಭ್ಯರ್ಥಿಗಳಿಂದ ದೋಚಿದ ಹಣದ ಪರಿ ಗೊತ್ತಿಲ್ಲ. ಶಿಕ್ಷಣವೊಂದು ಮಾರಾಟದ ಸರಕು. ಅದೊಂದು ದುಡ್ಡು ಸುಲಿಯುವ ದಂಧೆಯೆಂಬುದೇ ಇವರ ಧ್ಯೇಯವಾಕ್ಯ. ಹೀಗಾಗಿ ಬಹುತೇಕ ಖಾಸಗಿ ಸಂಸ್ಥೆಗಳ ಪ್ರವೇಶಗಳಲ್ಲಿ 'ಪ್ರತಿಭೆ' ಉಳ್ಳ ಬಡವರ ಹಿತಗಳು ರಕ್ಷಣೆಯಾಗಿಲ್ಲ. ಅಷ್ಟು ಮಾತ್ರವಲ್ಲ ಸಂವಿಧಾನ-ಸುಪ್ರೀಂಕೋರ್ಟ್ ಬಗ್ಗೆ ಭಾರಿ ಮಾತನಾಡುವ ಈ ತಿಮಿಂಗಲಗಳು ಸಂವಿಧಾನದ ನಿರ್ದೇಶನವಾದ 'ಮೀಸಲಾತಿ' ನೀತಿಯನ್ನು ಎಷ್ಟು ಪಾಲಿಸಿದ್ದಾರೆ ಎಂದರೆ ದೊಡ್ಡ ಹಗರಣವೇ ಹೊರಬರುತ್ತದೆ. ಇನ್ನು ಸೌಲಭ್ಯಗಳು ಇಲ್ಲದ ಕಳಪೆ ಕಾಲೇಜುಗಳು ಅನೇಕ. ಶುಲ್ಕ ವಸೂಲಿಯಲ್ಲಿಯೂ ಕಾನೂನುಗಳನ್ನು ಉಲ್ಲಂಘಿಸುತ್ತಿರುವುದು ನಿತ್ಯಸತ್ಯವಾಗಿದೆ. ಇನ್ನು ಇಂತಹ 'ದೈತ್ಯರು' ಕಾನೂನು, ಕೋರ್ಟ್ ಆಜ್ಞೆ ಪಾಲನೆ, ಸಾಮಾಜಿಕ ನ್ಯಾಯದ ಬಗ್ಗೆ ಮಾತನಾಡುವುದು ಒಂದು ವಿಚಿತ್ರವೇ ಸರಿ! ಒಂದಿಷ್ಟು ಸೀಟುಗಳನ್ನು ಸರ್ಕಾರಕ್ಕೆಂದು ಭಿಕ್ಷೆಯಂತೆ ನೀಡಿ ಉಳಿದದ್ದು ದೋಚುವ ಇವರ ದುಷ್ಟ ಯೋಚನೆ ಸ್ಪಷ್ಟವಾಗಿದೆ.

ಸರ್ಕಾರ : ದೃಢತೆ ಅತ್ಯಗತ್ಯ

ಈ ವಿಚಾರದಲ್ಲಿ ಕರ್ನಾಟಕ ಸರ್ಕಾರ ದೃಢವಾಗಿ ವರ್ತಿಸಬೇಕು. ವಿದ್ಯಾರ್ಥಿ ಪೋಷಕರ ಮುಖ್ಯವಾಗಿ ಶೈಕ್ಷಣಿಕ ಹಿತಾಸಕ್ತಿಯನ್ನು ಕಾಪಾಡಬೇಕು. ಸರ್ಕಾರದ ಸಿಇಟಿ ವ್ಯವಸ್ಥೆ ಮೂಲಕ ಪ್ರವೇಶಕ್ಕೆ ಆಯ್ಕೆಯನ್ನು ಅನುಸರಿಸದಿದ್ದಲ್ಲಿ ಅಂತಹ ಶಿಕ್ಷಣ ಸಂಸ್ಥೆಗಳ ನೊಂದಣಿಯನ್ನೇ ರದ್ದು ಪಡಿಸಲಾಗುವುದು ಎಂದು ಎಚ್ಚರಿಕೆ ನೀಡಿರುವುದನ್ನು ಬಿಗಿಯಾಗಿ ಜಾರಿಗೆ ತರಬೇಕು. ಇದು ತೋರಿಕೆಯ ಮಾತಾಗಬಾರದು.

ಖಾಸಗಿಯವರಿಗೆ ಯಥೇಚ್ಛ ಅವಕಾಶ

ಇಂತಹ ಒಂದು ಗಂಭೀರವಾದ ಸಂದರ್ಭ ಏರ್ಪಡುವ ಸ್ಥಿತಿ ನಿರ್ಮಾಣ ಆಗುವಲ್ಲಿ ಒಂದು ಪ್ರಮುಖವಾದ ಅಂಶವಿದೆ. ಅದೆಂದರೆ ರಾಜ್ಯದಲ್ಲಿ ಖಾಸಗಿ ಶಿಕ್ಷಣ ಸಂಸ್ಥೆಗಳ ಆರಂಭಕ್ಕೆ ಲಂಗು ಲಗಾಮಿಲ್ಲದೇ ಯಥೇಚ್ಛ ಅವಕಾಶ

ಪುಟ 8 ಕ್ಕೆ

ಈವಾರ ಕರ್ನಾಟಕ ಒಂದು ನೋಟ —— ಎಸ್.ವೈ.ಗುರುಶಾಂತ್

ಮೇ ದಿನದ ಸಂಕಲ್ಪ

ಬಂದಿದೆ ಬಂದಿದೆ ಮೇ ದಿನ

ಮೇ ದಿನಾಚರಣೆಯ ಇಂದಿನ ಸಂದರ್ಭ ಎಂತಹದು?

ಅಮೆರಿಕನ್ ಹಾಗೂ ಬ್ರಿಟಿಷ್ ಸಾಮ್ರಾಜ್ಯಶಾಹಿಗಳು ಇರಾಕ್‌ನ ಮೇಲೆ ವಿಧ್ವಂಸಕ ಯುದ್ಧ ಹೇರಿದ್ದಾರೆ. ಇದು ಇರಾಕ್‌ಗೆ ಸೀಮಿತವಾದ ಘಟನೆಯಲ್ಲ. ಜಗದ ಅಧಿಪತ್ಯ ಸಾಧಿಸಲು ಹಾತೊರೆಯುತ್ತಿರುವ ಅಮೇರಿಕನ್ ಸಾಮ್ರಾಜ್ಯಶಾಹಿಗಳ ಅಮಾನವೀಯ ಹೀನ ಕೃತ್ಯ. ತನಗೆದುರಾಗುವ ಪ್ರತಿರೋಧ ಬಗ್ಗು ಬಡಿಯುವ ಕುತಂತ್ರ.

ಹಾಗೆಯೇ ಈ ಅಧಿಪತ್ಯ ಸಾಧನೆಗೆ ಆರ್ಥಿಕ ಸಾರ್ವಭೌಮತ್ವಕ್ಕೆ ಜಾಗತೀಕರಣ - ಉದಾರೀಕರಣ - ಖಾಸಗೀಕರಣ ಬಳಸಲಾಗುತ್ತಿದೆ. ವಿಶ್ವಬ್ಯಾಂಕ್-ಐಎಂಎಫ್, ವಿಶ್ವವಾಣಿಜ್ಯ ಸಂಘಟನೆಗಳು ವಾಹಕಗಳಾಗಿವೆ. ಅಸಹನೀಯ ಶರತ್ತುಗಳ ಮೂಲಕ ಮೂರನೇ ಜಗತ್ತಿನ ರಾಷ್ಟ್ರಗಳನ್ನು ಕಬಳಿಸಲಾಗುತ್ತಿದೆ. ಈ ಸಮಯದಲ್ಲೇ ಜೊತೆ ಜೊತೆಯಾಗಿಯೇ ಭಾರತದಲ್ಲಿ ಕೋಮುವಾದಿ - ಫ್ಯಾಸಿಸ್ಟ್ ಮನೋಭಾವದ ಶಕ್ತಿಗಳು, ಮತೀಯ ಮೂಲಭೂತವಾದಿಗಳು ದ್ವೇಷ ಹಿಂಸೆ, ದಳ್ಳುರಿ ಹಬ್ಬಿಸಿ, ದೇಶವನ್ನು - ಜನತೆಯನ್ನು ವಿಭಜಿಸಲು, ಉನ್ನತ ನಾಗರಿಕ ಪರಂಪರೆ ನಾಶಗೊಳಿಸಲು ಮುಂದಾಗಿವೆ. ಸಾಮ್ರಾಜ್ಯಶಾಹಿ ಹುನ್ನಾರಗಳಿಗೆ ತಾಳ ಹಾಕಿ ಹಿಮ್ಮೇಳ ಹಾಡಿ ಕೈ ಜೋಡಿಸುತ್ತಿವೆ.

ಬಿಜೆಪಿ ನೇತೃತ್ವದ ವಾಜಪೇಯಿ ಕೇಂದ್ರ ಸರ್ಕಾರ ಆರ್ಥಿಕ, ರಾಜಕೀಯ, ಸಾಂಸ್ಕೃತಿಕವಾಗಿಯೂ ಜನರ ಮೇಲೆ ಕ್ರೂರ ದಾಳಿ ನಡೆಸಿದೆ. ಮುಖ್ಯವಾಗಿ ಈ ಎಲ್ಲಾ ದಾಳಿಗಳೂ ದುಡಿವ ವರ್ಗದ ಹಕ್ಕುಗಳನ್ನು ದಮನಿಸುವ, ಶೋಷಣೆ ತೀವ್ರಗೊಳಿಸುವ ಗುರಿಯನ್ನು ಹೊಂದಿವೆ. ಕರಾಳ ಶಾಸನಗಳನ್ನು - ತಿದ್ದುಪಡಿಗಳನ್ನು ತರಲಾಗುತ್ತಿದೆ. ಹಕ್ಕುಗಳನ್ನು ಕಸಿಯಲಾಗುತ್ತಿದೆ.

ಎಸ್.ಎಂ.ಕೃಷ್ಣರ ರಾಜ್ಯ ಕಾಂಗ್ರೆಸ್ ಸರ್ಕಾರವೂ ಇಂತಹ ನೀತಿಗಳನ್ನೇ ಅನುಸರಿಸುತ್ತಿದೆ.

ಇಂತಹ ಗಂಭೀರ ಸನ್ನಿವೇಶದಲ್ಲಿ ಕಾರ್ಮಿಕವರ್ಗ ಈ ಎಲ್ಲಾ ಸವಾಲುಗಳನ್ನು ಸಮರ್ಥವಾಗಿ ಕೈಗೆತ್ತಿಕೊಳ್ಳಬೇಕಿದೆ. ದಾಳಿಗಳನ್ನು ಹಿಮ್ಮೆಟ್ಟಿಸಿ, ಉನ್ನತ ಸಾಧನೆಗಳಿಗಾಗಿ, ವಿಮೋಚನೆಗಾಗಿ ಹೋರಾಡಲು ಪಣ ತೊಡಬೇಕಿದೆ. ಮೇ 21 ರ ಸಾರ್ವತ್ರಿಕ ಮುಷ್ಕರ ಯಶಸ್ವಿಗೊಳಿಸಬೇಕಿದೆ.

ಹಾಗೆ ಜಗತ್ತಿನ ಎಲ್ಲಾ ದುಡಿವ ವರ್ಗದ ಹೋರಾಟಕ್ಕೆ ಸೌಹಾರ್ದತೆ ಸಾರಬೇಕಿದೆ. ಅಂತರ್‌ರಾಷ್ಟ್ರೀಯ ಐಕ್ಯತೆ ಗಟ್ಟಿಗೊಳಿಸಬೇಕಿದೆ. ಸಮಾಜವಾದಿ ಶಕ್ತಿಗಳನ್ನು ಅಭಿನಂದಿಸುತ್ತಾ, ಜೊತೆ ಜೊತೆಯಲ್ಲಿ ಸಾಗಬೇಕಿದೆ.

ಕಾರ್ಮಿಕ ವರ್ಗದ ಅಂತರ್‌ರಾಷ್ಟ್ರೀಯ ದಿನ ಮೇ ದಿನ. ಎಲ್ಲರಿಗೂ ದುಡಿವ ಜನರ ಪ್ರಾಣಮಿತ್ರನ ಶುಭಾಶಯಗಳು.

ನೂರಾರು ಮೇ ದಿನಗಳು.......

ಮೇ ದಿನ ಜಾಗತಿಕ ಕಾರ್ಮಿಕ ವರ್ಗದ ...ದ. ಅದು ವಿಶ್ವದ ಬಹುದೊಡ್ಡ ಧಾರ್ಮಿಕೇತರ ...ಚರಣೆ. ಆದರೆ ಮೇ ದಿನ ಒಂದು ಉತ್ಸವ ಅಲ್ಲ, ...ು ದುಡಿಯುವ ಜನತೆಯ ಜಾಗತಿಕ ಸೌಹಾರ್ದತೆ ...ನ್ನು ಸಾಧಿಸಲು ಮುಡಿಪಾಗಿಟ್ಟ ದಿನ. ಅದು ...ನವನಿಂದ ಮಾನವನ ಶೋಷಣೆ ನಡೆಯುತ್ತಿರುವುದರ ವಿರುದ್ಧ ಜಾಗತಿಕವಾಗಿ ಹೋರಾಡಲು ...ರ್ಪಿಸಲಾದ ದಿನ.

...ಮೊದಲು ಮೇ ದಿನವನ್ನು 1886 ರಲ್ಲಿ ...ಮೇರಿಕದ ಕೈಗಾರಿಕಾ ನಗರವಾದ ಚಿಕಾಗೋದ ...ದಿಗಳಲ್ಲಿ ಆಚರಿಸಲಾಯಿತು. ಒಂದು ದಿನದ ...ಸವನ್ನು 8 ಘಂಟೆಗಳ ಕೆಲಸಕ್ಕೆ ಮಿತಗೊಳಿಸ...ಕೆಂಬ ಬೇಡಿಕೆಗಾಗಿ 1886 ರ ಮೇ 1 ರಂದು ...ಘಟಿಸಲಾಗಿದ್ದ ಮತಪ್ರದರ್ಶನವು ಉದ್ಯೋಗ...ಗಳ ಏಜೆಂಟರ ಪ್ರಚೋದನೆಯಿಂದಾಗಿ ...ಘಾತದಲ್ಲಿ ಕೊನೆಗೊಂಡಿತು. ನಾಲ್ಕು ಜನ ...ಲೀಸರು ಸತ್ತರು, ಹನ್ನೊಂದು ಜನ ಕಾರ್ಮಿಕರ ...ಲೆ ಕೊಲೆಯ ಆರೋಪ ಹೊರಿಸಿ, ಸರಿಯಾದ ...ಚಾರಣೆಯನ್ನೂ ನಡೆಸದೆ ಗಲ್ಲಿಗೇರಿಸಲಾಯಿತು. ...ತ್ತಿಗೇ ಮಾನವ ಹಕ್ಕುಗಳನ್ನು ಘೋಷಿಸಿದ ...ಮೇರಿಕದ ಪ್ರಜಾಪ್ರಭುತ್ವದ ನಿಜರೂಪ ಇಲ್ಲಿ ...ಯಲಾಯಿತು.

...ಕಾರ್ಮಿಕರನ್ನು ನಿಗದಿತ ಗಂಟೆಗಳ ಮಿತಿಇಲ್ಲದೆ ...ಲೀಕ ತನ್ನ ಇಚ್ಛಾನುಸಾರ ದುಡಿಸುವುದು ...ಮಾನ್ಯ ಪದ್ಧತಿಯಾಗಿದ್ದ ಆ ದಿನಗಳಲ್ಲಿ ಎಂಟು ...ಗಳ ದುಡಿಮೆಯ ದಿನದ ಬೇಡಿಕೆಯನ್ನು ...ರ್ತ್ರಿಕವಾಗಿ ಪ್ರಚಾರಕ್ಕೆ ತರಲಾಗಿತ್ತು. ಆದರೆ ಈ ...ಕ್ಷ ಪದ್ಧತಿಯು ಇಂದಿಗೂ ನಮ್ಮ ನಗರಗಳಲ್ಲಿ ಜಾರಿಯಲ್ಲಿ ಇರುವುದನ್ನು ನಾವು ಕಾಣಬಹುದು. ಹೋಟೇಲುಗಳಲ್ಲಿ ದುಡಿಯುವ ಕಾರ್ಮಿಕರನ್ನು ಬೆಳಗಾಗುವ ಮೊದಲೇ ಎಬ್ಬಿಸಿ ಮತ್ತೆ ಮಧ್ಯರಾತ್ರಿಯವರೆಗೂ ದುಡಿಸುತ್ತಾರೆ. ಬೆಂಗಳೂರಿನಂತಹ ನಗರದಲ್ಲಿ ವಿದ್ಯುತ್ ಮಗ್ಗಗಳಲ್ಲಿ ದುಡಿಯುವ ಕಾರ್ಮಿಕರನ್ನು ಜೈಲುಗಳಲ್ಲಿ ಖೈದಿಗಳನ್ನು ದುಡಿಸುವಂತೆ ದುಡಿಸಲಾಗುತ್ತದೆ. ಇವರಿಗೆ ನಿಗದಿಪಡಿಸಲಾದ ಕೆಲಸವನ್ನು ಪೂರ್ಣಗೊಳಿಸದೆ ಹೊರಹೋಗುವುದನ್ನು ತಡೆಯಲು ಇವರು ಕೆಲಸ ಮಾಡುವ ಕೋಣೆಯ ಬಾಗಿಲಿಗೆ ಹೊರಗಿನಿಂದ ಬೀಗಹಾಕಲಾಗುತ್ತದೆ.

'ಎಂಟು ಗಂಟೆಗಳ ದುಡಿಮೆಯ ದಿನ'ದ ಬೇಡಿಕೆ ಅತ್ಯಂತ ಮಾನವೀಯ ಬೇಡಿಕೆಯಾಗಿದೆ. ಮನುಷ್ಯನಿಗೆ 8 ಘಂಟೆಗಳ ವಿಶ್ರಾಂತಿ ಮತ್ತು ಆವನ ಇತರ ಸರ್ವೆಸಾಮಾನ್ಯ ಚಟುವಟಿಕೆಗಳಿಗಾಗಿ 8 ಗಂಟೆಗಳ ಸಮಯ ಅವಶ್ಯಕ ಇರುವುದರಿಂದ 8 ಗಂಟೆಗಳಿಗಿಂತ ಹೆಚ್ಚು ಸಮಯವನ್ನು ದುಡಿಮೆಗಾಗಿ ಒದಗಿಸಲು ಸಾಧ್ಯವಾಗದು.

ಮಾಲೀಕರು ಇದನ್ನು ಒಪ್ಪಲಿಲ್ಲ, ಸರ್ಕಾರಗಳ ಬಣ್ಣವೂ ಬಯಲಾಯಿತು. ಜನತೆಯ ಹಿತವನ್ನು ಕಾಪಾಡಬೇಕಾದ ಈ ಸರ್ಕಾರಗಳು ಕಾರ್ಮಿಕರ 8 ಗಂಟೆಗಳ ಕೆಲಸದ ಬೇಡಿಕೆಯನ್ನು ಬೆಂಬಲಿಸುವ ಬದಲಾಗಿ ಅದರ ವಿರುದ್ಧವಾಗಿ ಮಾಲೀಕರ ಧೋರಣೆಯನ್ನು ಬೆಂಬಲಿಸಿದವು. ನಮ್ಮ ದೇಶದ ಸರ್ಕಾರಗಳು ಸಹ ಇದನ್ನೇ ಮಾಡುತ್ತಿವೆ. ದಿನದ ಕೆಲಸವನ್ನು 8 ಗಂಟೆಗಳಿಗೆ ಸೀಮಿತಗೊಳಿಸುವ ಶಾಸನವನ್ನೇನೋ ಮಾಡಿದ್ದಾರೆ. ಆದರೆ ಅದನ್ನು ಜಾರಿಗೆ ತರಲು ಯಾವುದೇ ಕ್ರಮ ಜರುಗಿಸ



ಲಾಗುತ್ತಿಲ್ಲ. ಆದರೆ ಪಶ್ಚಿಮ ಬಂಗಾಳ, ತ್ರಿಪುರ ಮತ್ತು ಕೇರಳದಂತಹ ಕೆಲವು ರಾಜ್ಯಗಳಲ್ಲಿ ದುಡಿಯುವ ಜನಗಳು ತಮ್ಮದೇ ಆಗಿರುವ ರಾಜಕೀಯ ಪಕ್ಷಗಳಲ್ಲಿ ಸಂಘಟಿತರಾಗಿ ಸರ್ಕಾರಗಳನ್ನು ನಡೆಸಲು ಶಕ್ತರಾಗಿದ್ದು ಈ ರಾಜ್ಯಗಳಲ್ಲಿ ಕಾರ್ಮಿಕರಂಗದ ಮತ್ತು ಇತರ ದುಡಿಯುವ ಜನವಿಭಾಗಗಳ ಪರವಾದ ಕಾನೂನುಗಳನ್ನು ರಚಿಸಲು ಮಾತ್ರವಲ್ಲ ಅವುಗಳನ್ನು ಕಟ್ಟುನಿಟ್ಟಾಗಿ ಜಾರಿಗೆ ತರಲು ಸಾಧ್ಯವಾಗಿದೆ.

1889 ರಲ್ಲಿ ಯುರೋಪಿನ ಮತ್ತು ಅಮೇರಿಕದ ಕಾರ್ಮಿಕ ವರ್ಗದ ಪ್ರತಿನಿಧಿಗಳು ಪ್ಯಾರಿಸ್‌ನಲ್ಲಿ ಸಭೆ ಸೇರಿ 1890 ರಿಂದ ಮೇ ದಿನವನ್ನು ಆಚರಿಸಲು ಕರೆನೀಡಿದ ಕಾರಣದಿಂದ ಮೇ ದಿನದ ಆಚರಣೆಯು ಒಂದು ಆಂದೋಲನವಾಯಿತು.

- ವಿ.ಜೆ.ಕೆ.ನಾಯರ್

('ನೂರಾರು ಮೇ ದಿನ'ಗಳು ಕಿರುಹೊತ್ತಿಗೆಯಿಂದ)

ಕುಂದಾಪುರ: ಸ್ವಯಂ ಘೋಷಿತ ಆಸ್ತಿ ತೆರಿಗೆ ವಿರೋಧಿಸಿ ಪ್ರತಿಭಟನೆ



ಕುಂದಾಪುರ ಪುರಸಭೆಯ ವ್ಯಾಪ್ತಿಯಲ್ಲಿ ಸ್ವಯಂ ಘೋಷಿತ ಆಸ್ತಿ ತೆರಿಗೆ ಜಾರಿಗೊಳಿಸಿದುದನ್ನು ಪ್ರತಿಭಟಿಸಿ ಪುರಸಭೆಯ ಕಛೇರಿಯ ಎದುರು ಬೃಹತ್ ಮತ ಪ್ರದರ್ಶನ ನಡೆಸಲಾಯ್ತು. ಸಿಪಿಐ(ಎಂ) ಪಕ್ಷದ ಕುಂದಾಪುರ ತಾಲ್ಲೂಕು ಸಮಿತಿಯ ನೇತೃತ್ವದಲ್ಲಿ ಶಾಸ್ತ್ರಿ ಸರ್ಕಲ್‌ನಿಂದ ಹೊರಟ ಮೆರವಣಿಗೆ ಉದ್ದಕ್ಕೂ ಪುರಸಭೆಯ ಈ ನಿರ್ಧಾರದ ವಿರುದ್ಧ ಘೋಷಣೆ ಕೂಗಿದರು.

ಪುರಸಭೆ ಕಛೇರಿ ಎದುರು ನಡೆದ ಸಭೆಯನ್ನು ಉದ್ದೇಶಿಸಿ ಮಾತನಾಡಿದ ಪಕ್ಷದ ತಾಲ್ಲೂಕು ಕಾರ್ಯದರ್ಶಿ ಮಹಾಬಲ ಒಡೇರ ಹೋಬಳಿಯವರು, ಸ್ವಯಂ ಘೋಷಿತ ಆಸ್ತಿ ತೆರಿಗೆಯನ್ನು ಜನತೆ ವಿರೋಧಿಸಬೇಕೆಂದು ಕರೆ ನೀಡಿ, ಈ ತೆರಿಗೆಯ ವಿರುದ್ಧ ಪುರಸಭೆಯ ಒಳಗೂ ಮತ್ತು ಹೊರಗೂ ಹೋರಾಟ ನಡೆಸುವುದಾಗಿ ಘೋಷಿಸಿದರು.

ಉಡುಪಿ ಜಿಲ್ಲಾ ಕಾರ್ಯದರ್ಶಿ ಕೆ.ಶಂಕರ್ ಮಾತನಾಡಿ ಹೊಸ ಸ್ವಯಂಘೋಷಿತ ಆಸ್ತಿ ತೆರಿಗೆಯ ದುಷ್ಪರಿಣಾಮವನ್ನು ವಿವರಿಸಿ, ಇದರಿಂದ ಎಂಟುಪಟ್ಟು ತೆರಿಗೆ ಹೊರೆ ಹೆಚ್ಚುತ್ತದೆ. ಇದರ ವಿರುದ್ಧ ಜನಸಾಮಾನ್ಯರು ಹೋರಾಟಕ್ಕೆ ಮುಂದಾಗಬೇಕೆಂದು ಕರೆ ನೀಡಿದರು. ಉಡುಪಿ ಜಿಲ್ಲಾ ಸಮಿತಿ ಸದಸ್ಯರಾದ ಎ.ಚಂದ್ರಶೇಖರ ಮೊದಲಾದವರು ಈ ಸಂದರ್ಭದಲ್ಲಿ ಮಾತನಾಡಿದರು. ಈ ಸಂದರ್ಭದಲ್ಲಿ ಪುರಸಭಾ ನಿವಾಸಿಗರ ಸಹಿಯುಳ್ಳ ಮನವಿ ಪತ್ರವನ್ನು ಅಧಿಕಾರಿಗಳಿಗೆ ಸಲ್ಲಿಸಲಾಯ್ತು.

ಹಾಸನ : ಯುವಜನ ಚಳವಳಿ ಹಬ್ಬಿದ ಬಳ್ಳಿ

ಆನ್‌ಲೈನ್ ಲಾಟರಿ ವಿರುದ್ಧ ಹೋರಾಟ ಇರಾಕ್ ಮೇಲಿನ ಯುದ್ಧ ವಿರೋಧಿ ಕಾರ್ಯಕ್ರಮ, ನಾಗರೀಕ ಸಮಸ್ಯೆ ಸೇರಿದಂತೆ ಹಲವು ಹೋರಾಟಗಳನ್ನು ಕಣ್ಣಾರೆ ಕಂಡು ಕೆಲವಲ್ಲಿ ಭಾಗವಹಿಸಿದ ಹಾಸನ ನಗರದ ವರ್ಕ್‌ಶಾಪ್ ಪ್ರದೇಶದ ಯುವಜನ ಡಿ.ವೈ.ಎಫ್.ಐ. ಘಟಕವನ್ನು ಸ್ಥಾಪಿಸಿಕೊಂಡಿದ್ದಾರೆ. ಇತ್ತೀಚೆಗೆ ನಡೆದ ಸರಳ ಕಾರ್ಯಕ್ರಮದಲ್ಲಿ ಭಗತ್‌ಸಿಂಗ್ ಚಿತ್ರ ಅನಾವರಣ ಮಾಡುವ ಮೂಲಕ ಡಿ.ವೈ.ಎಫ್.ಐ. ರಾಜ್ಯ ಕಾರ್ಯದರ್ಶಿ ಕೆ.ಮಹಾಂತೇಶ್ ಈ ಘಟಕವನ್ನು ಉದ್ಘಾಟಿಸಿದರು.



ಈ ಪ್ರದೇಶದ ಜನ ವಾಸಿಸುವ ಭೂಮಿಗೆ ಈಗ ಭಾರಿ ಬೇಡಿಕೆ. ಅದಕ್ಕಿಂತಲೇ 20-30 ವರ್ಷಗಳಿಂದ ವಾಸವಾಗಿದ್ದರೂ ಅವನ್ನು ಒಕ್ಕಲೆಬ್ಬಿಸುವ ಯೋಜನೆಯನ್ನು ಹಾಸನ ನಗರಸಭೆಯು ರೂಪಿಸಿರುವ ಸುಳಿವು ದೊರೆತಿದೆ. ನಾಗರೀಕನ ಸೇವೆಗೆ ತಮ್ಮನ್ನು ಸದಾ ತೊಡಗಿಸಿಕೊಂಡ ಈ ಪ್ರದೇಶದ ನಾಗರೀಕರು ಒಂದಾಗಿ ಅದರ ವಿರುದ್ಧ ಹೋರಾಡಲು ಅಣಿಯಾಗಿದ್ದಾರೆ. ಹಾಗೆಯೇ ಎಲ್ಲಾ ಜಾತಿಯ, ಧರ್ಮಗಳ ಜನರೂ ಒಗ್ಗಟ್ಟಾಗಿದ್ದರೆ ಮಾತ್ರ ಏನಾದರೂ ಸಾಧಿಸಬಹುದು ಎಂಬ ಅನುಭವದ ಉತ್ತರ ಅವರದ್ದು.

ಕುಪ್ಪೇಪದವುನಲ್ಲಿ ಬೀಡಿ ಕಾರ್ಮಿಕರ ಸಮಾವೇಶ

ಬೀಡಿ ಕಾರ್ಮಿಕರು ತಮ್ಮ ದೀರ್ಘ ಹೋರಾಟದಿಂದ ಪಡೆದ ಸವಲತ್ತುಗಳು ಇಂದು ಸರ್ಕಾರಗಳ ಕಾರ್ಮಿಕ ವಿರೋಧಿ ನೀತಿಗಳಿಂದ ವಂಚಿತವಾಗುತ್ತಿವೆ. ಸವಲತ್ತುಗಳನ್ನು ಉಳಿಸಿಕೊಳ್ಳಬೇಕಾದರೆ ಕಾರ್ಮಿಕರು ನಿರಂತರ ಹೋರಾಟದಿಂದ ಮಾತ್ರ ಸಾಧ್ಯವೆಂದು ಮಂಗಳೂರಿನ ಕುಪ್ಪಪದವು ಪ್ರದೇಶ ಬೀಡಿ ಕಾರ್ಮಿಕರ ವಾರ್ಷಿಕ ಸಮಾವೇಶದಲ್ಲಿ ವಿವಿ[illegible] ಮುಖಂಡರು ಕರೆ ನೀಡಿದರು. ಸಮಾವೇಶದ[illegible] ಸಿಪಿಐ(ಎಂ)ನ ಯು.ಬಿ.ಲೋಕಯ್ಯ ಜಿಲ್ಲಾ [illegible] ಫೆಡರೇಷನ್‌ನ ಕಾರ್ಯದರ್ಶಿ ಜೆ.ಬಾಲಕೃಷ್ಣ ಶೆಟ್ಟಿ, ಕೆ. ಬಾಬು ದೇವಾಡಿಗ, ಗಂಗಯ್ಯ, ಅಮೀನಾ ಮುಂತಾದವರು ಭಾಗವಹಿಸಿದ್ದರು. ಸಮಾವೇಶವು ಬೀಡಿ ಕಾರ್ಮಿಕರಿಗೆ ವಾರದ [illegible] ದಿನಗಳ ಕೆಲಸ, ಲಾಗ್ ಪುಸ್ತಕ ನೀಡುವಂತೆ [illegible] ದೂಮಪಾನ ನಿಷೇಧ ಮಸೂದೆ ವಾಪಸ್ಸಿಗೆ ಆಗ್ರಹ. 20 ಲಕ್ಷವರೆಗಿನ ಬೀಡಿಗೆ ತೆರಿಗೆ ವಿಧಿಸಬೇಕು. ವಿದ್ಯುತ್‌ದರ ಏರಿಕೆ ಹಾಗೂ ಖಾಸಗೀಕರಣ ನಿಲ್ಲಿಸಬೇಕು. ಕುಪ್ಪೆ ಪದವು [illegible] ಪ್ರಾಥಮಿಕ ಆರೋಗ್ಯ ಕೇಂದ್ರಗಳ ಅವ್ಯವಸ್ಥೆ ಸರಿಪಡಿಸಬೇಕೆಂದು ನಿರ್ಣಯ ಕೈಗೊಳ್ಳಲಾಯಿತು.

ಪದಾಧಿಕಾರಿಗಳು

ಅಧ್ಯಕ್ಷರು - ಎನ್.ಎ.ಹಸನಬ್ಬ

ಉಪಾಧ್ಯಕ್ಷರುಗಳು:- ಭಾಸ್ಕರಾಚಾರಿ, ವೇ[illegible] ಬೇಬಿ ನಾಯ್ಕ

ಕಾರ್ಯದರ್ಶಿ:- ಕೆ.ಸದಾಶಿವದಾಸ್

ಜೊತೆ ಕಾರ್ಯದರ್ಶಿಗಳು:- ವಸಂತಿ, ನ[illegible] ರಮಣಿ, ಕೃಷ್ಣಾ ಎನ್.

ಖಜಾಂಚಿ ನೋಣಯಗೌಡ ಸೇರಿ 32 ಸ[illegible] ಕಾರ್ಯಕಾರಿ ಸಮಿತಿ ಆಯ್ಕೆಗೊಂಡಿದೆ.

ಯುವಚೇತನಗಳಿಗೆ ಆದರ್ಶವಾದ ಮದುವೆ

ಏಪ್ರಿಲ್ 24ರ ಆ ಸುಂದರ ದಿನ. ಸದಾ ಪ್ರಗತಿಪರ ಚಳುವಳಿಯೊಂದಿಗೆ ಹೆಜ್ಜೆ ಹಾಕಿದ ಕುಪ್ಪೆಪದವಿನ "ಆಶಾಕಿರಣ"ದಲ್ಲಿ ಪ್ರಗತಿಪರ ಮನಗಳು ಭಾವನಾತ್ಮಕವಾಗಿ ಒಂದುಗೂಡಿತ್ತು.

ಜ್ವಾಜ್ವಲ್ಯಮಾನವಾಗಿ ಬೆಳಗುತ್ತಿದ್ದ ವಿದ್ಯಾರ್ಥಿ ಚಳುವಳಿಗೆ 80ರ ದಶಕದಲ್ಲಿ ತಮ್ಮನ್ನೇ ಅರ್ಪಿಸಿಕೊಂಡ ಗ್ರಾಮೀಣ ಯುವಕ, ಕಾರ್ಮಿಕ ನಾಯಕ ವಸಂತ್ ಆಚಾರಿ ಮತ್ತು ಪ್ರಗತಿಪರ ವೈಚಾರಿಕ ಯುವಜನ ಚಳುವಳಿಯೊಂದಿಗೆ ತಮ್ಮನ್ನು ಗುರುತಿಸಿಕೊಂಡ ಕುಸುಮಾವತಿ ಪರಸ್ಪರರನ್ನು ಬಾಳಸಂಗಾತಿಯನ್ನಾಗಿ ಆರಿಸಿಕೊಂಡ ಕ್ಷಣ.

'ಪ್ರೀತಿ ಇಲ್ಲದ ಮೇಲೆ ಹೂವು ಅರಳೀತು ಹೇಗೆ? ಮನಕೆ ಮನ ಕೂಡೀತು ಹೇಗೆ' ಎಂಬ ಕವಿವಾಣಿಯಂತೆ ಪ್ರೀತಿ ರಾಗದ್ವೇಷಗಳನ್ನು, ದಿಕ್ಕುಗಳನ್ನು ಮರೆಸುತ್ತದೆ. ಜಾತಿ ಮತಗಳ ಗೆಡ್ಡೆಯನ್ನು ಪುಡಿಗಟ್ಟುತ್ತದೆ.


'ತಾರೆಗಳ ಮೀಟುವೆವು..ಚಂದಿರವ ದಾಟುವೆವು ಒಲುಮೆಯೊಳಗೊಂದು ನಾವು ನಮಗಿಲ್ಲ ನೋವು ಸಾವು' ಎಂಬ ಕೆ.ಎಸ್. ನರಸಿಂಹಸ್ವಾಮಿ ಅವರ ಭಾವನೆಗಳಿಗೆ ಯುವ ಜೋಡಿಗಳಾದ ವಸಂತ್-ಕುಸುಮ ಸ್ಪಂದಿಸಿದರು. ಚಳವಳಿಯೇ ಬದುಕು ಎಂದು ಆದರ್ಶ ಜೀವನ ನಡೆಸುತ್ತಿರುವ ಮತ್ತು ಅದನ್ನೆ ಮುಂದುವರಿಸುತ್ತಿರುವ ಈ "ದಂಪತಿ"ಯ ಸುಖ-ದುಃಖಗಳಿಗೆ, ನೋವು - ನಲಿವುಗಳಿಗೆ ಕೈಜೋಡಿಸುವ ಸ್ಪಷ್ಟ ಮಾತಿಗೆ ಚಪ್ಪಾಳೆ ಮೂಲಕ ಜನಸಮೂಹ ಕೈಜೋಡಿಸಿತ್ತು.

ಕಾರ್ಯಕ್ರಮದ ಪೂರ್ಣ ನಿರ್ವಹಣೆ ವಹಿಸಿದ ಚಿಂತಕ ವಾಸುದೇವ ಉಚ್ಚಿಲ ಯುವ ಜೋಡಿಗಳ ಚಿಂತನೆ ಆದರ್ಶಗಳನ್ನು ಪರಿಚಯಿಸಿದರು.

ವಸಂತ್ ಜೊತೆ ವಿದ್ಯಾರ್ಥಿ, ಯುವಜನ ಚಳುವಳಿಯಲ್ಲೂ ಜೊತೆಗಿರುವ ಸಂಗಾತಿ ಎಸ್.ವೈ. ಗುರುಶಾಂತ್, ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷ ರಾಜ್ಯ ಸಮಿತಿ ಮತ್ತು ಐಕ್ಯರಂಗ ವಾರಪತ್ರಿಕೆ ಪರವಾಗಿ ಶುಭಾಶಯ ಸಲ್ಲಿಸಿದರು. ವಸಂತ ಪತ್ರಿಕೆಯ ಬರಹಗಾರರೂ ಕೂಡ.

ಗಟ್ಟಿಮೇಳ ಆಡಂಬರವಿಲ್ಲದ ಸರಳ ಸುಂದರ ಅಂತರ್ಜಾತಿಯ ಈ ಮದುವೆ ಸರಳ ವಿವಾಹಗಳ ಪರಂಪರೆಗೆ ನಾಂದಿ ಹಾಡೀತು ಎಂದು ಹರ್ಷ ವ್ಯಕ್ತಪಡಿಸಿದರು.

'ಎಮ್ಮವರು ಬೆಸಗೊಂಡರೆ ಶುಭವೆನ್ನಿರಿ' ಎಂಬ 12 ನೇ ಶತಮಾನದ ಬಸವಣ್ಣರ ಮಾತುಗಳನ್ನು ನೆನಪಿಸಿದ ಗುರುಶಾಂತ್ ವರದಕ್ಷಿಣೆ ಕೊಟ್ಟ ಮೇಲೂ ಕಿರುಕುಳ ಕೊಡುವ, ಭ್ರೂಣ ಹತ್ಯೆ ನಡೆಸುವ ಮತ್ತು ಮದುವೆಯನ್ನು ವ್ಯಾಪಾರ - ಆಡಂಬರದ ಪ್ರದರ್ಶನ ಎಂದು ಪರಿಗಣಿಸುವ ಕ್ರೂರ ಸಮಾಜಕ್ಕೆ ಆದರ್ಶದ ಪಾಠ ಕಲಿಸಿದಂತಾಗಿದೆ ಎಂದು ಅಭಿಪ್ರಾಯಪಟ್ಟರು.



ಶುಭಹಾರೈಸಿದ ಹಿರಿಯ ನಾಯಕರಾದ ಶ್ರೀಯಾನ್ ಮತ್ತು ಬಿ. ಮಾಧವ ಸರಳ ಮದುವೆಯ ಮಹತ್ವ ವಿವರಿಸಿದರು. ಆಡಂಬರದ ಮದುವೆಗಳು ತರುತ್ತಿರುವ ಹಾನಿಯನ್ನು ಸೂಕ್ಷ್ಮವಾಗಿ ಗುರುತಿಸಿದರು. ಸಿಪಿಐ(ಎಂ), ಸಿ.ಐ.ಟಿ.ಯು, ಡಿ.ವೈ.ಎಫ್.ಐ, ಎಸ್.ಎಫ್.ಐ ಮಹಿಳಾ ಸಂಘಟನೆಯ ಕಾರ್ಯಕರ್ತೆಯರಲ್ಲದೇ ಅಪಾರ ಸಂಖ್ಯೆಯ ಜನತೆ, ಬಂಧುಗಳು ಭಾಗವಹಿಸಿದ್ದರು.

ಅವಿಭಜಿತ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಕಳೆದ ಈ ದಶಕದಲ್ಲಿ ಇದೇ ಮೊದಲ ಬಾರಿ ಪ್ರಗತಿಪರ ಎಡ ಚಳುವಳಿಯ ನಾಯಕರೊಬ್ಬರ ಅಂತರ್‌ಜಾತೀಯ ಮ[illegible] ಅತ್ಯಂತ ಸರಳವಾಗಿ ಯಶಸ್ವಿಯಾಗಿ ನಡೆಯುವ ಮೂಲಕ ಹೊಸ ಬಧುಕಿನ ಕನಸಿನೊಂದಿಗೆ ಪ್ರಗತಿಪರ ಚಳುವಳಿಯ[illegible] ತೊಡಗಿಸಿಕೊಂಡ ಯುವ ಚೇತನಗಳಿಗೆ ಆದರ್ಶದ ಅಡಿಪಾಯ ಹಾಕಿಕೊಟ್ಟಿತು.

-ಸಿಮ್ಮಿಸಿ

ಪ್ರಧಾನ ಮಂತ್ರಿಯವರ ಕಾಶ್ಮೀರ ಭೇಟಿ : ಮುಂದೇನು ?

ಜಮ್ಮು – ಕಾಶ್ಮೀರಕ್ಕೆ ಈಚೆಗೆ ಭೇಟಿ ನೀಡಿದ ಪ್ರಧಾನಿ ವಾಜಪೇಯಿಯವರು ಭಾರತ–ಪಾಕ್ ಸಂಬಂಧಗಳ ಸುಧಾರಣೆಗೆ ಉತ್ತೇಜಕ ಮಾತು ಆಡಿದ್ದಾರೆ. ಬರೀ ಹೇಳಿಕೆಗಳಿಂದ ಇದನ್ನು ಸಾಧಿಸಲಾದೀತೆ?

ಹರ್‌ಕಿಶನ್ ಸಿಂಗ್ ಸುರ್ಜೀತ್

ಪ್ರಧಾನ ಮಂತ್ರಿಯವರ ಕಾಶ್ಮೀರ ಭೇಟಿ, ವಿಷಮ ಸ್ಥಿತಿಗೆ ತಲುಪಿದ್ದ ಭಾರತ-ಪಾಕ್ ಬಾಂಧವ್ಯದಲ್ಲಿ ಹೊಸ ಆಶಯವನ್ನು ಚಿಗುರಿಸಿದೆ. ಪಾಕಿಸ್ಥಾನವೂ ಕೂಡಾ ಉತ್ತಮ ಪ್ರತಿಕ್ರಿಯೆ ನೀಡಿದ್ದು ವಾಜಪೇಯಿಯವರ ಹೇಳಿಕೆಯನ್ನು ಸ್ವಾಗತಿಸಿದೆ.

2001 ರ ಡಿಸೆಂಬರ 13 ರಂದು ಸಂಸತ್ ಭವನದ ಮುಂದೆ ನಡೆದ ಭಯೋತ್ಪಾದಕ ಧಾಳಿಯ ನಂತರ, ಎರಡೂ ದೇಶಗಳ ಗಡಿಯಲ್ಲಿ ಮಿಲಿಟರಿಯನ್ನು ಸಜ್ಜುಗೊಳಿಸಲಾಗಿತ್ತು. ಇತ್ತಿಚೆಗಷ್ಟೆ, ವಿದೇಶಾಂಗ ಸಚಿವ ಯಶವಂತ್ ಸಿನ್ಹಾ ಮತ್ತು ರಕ್ಷಣಾ ಸಚಿವ ಜಾರ್ಜ್ ಫರ್ನಾಂಡಿಸ್‌ರವರು ಪಾಕಿಸ್ತಾನದ ಕುರಿತು ಬೇಜವಾಬ್ದಾರಿ ಹೇಳಿಕೆ ನೀಡಿದ ನಂತರವೂ ಪ್ರಧಾನ ಮಂತ್ರಿ ವಾಜಪೇಯಿಯವರು ಪಾಕಿಸ್ತಾನಕ್ಕೆ ಸ್ನೇಹದ ಹಸ್ತ ಚಾಚಿರುವುದು, ಅಗತ್ಯ ಬಿದ್ದಲ್ಲಿ ಪಾಕಿಸ್ತಾನಕ್ಕೆ ಭೇಟಿ ಕೊಡುವುದಾಗಿ ಹೇಳಿರುವುದು ಉತ್ತಮ ಬೆಳವಣಿಗೆ. ದಕ್ಷಿಣ ಏಷ್ಯಾದ ಎರಡು ಪ್ರಮುಖ ದೇಶಗಳು ಮಾತುಕತೆಗೆ ಮುಂದಾಗಿರುವುದು ಈ ಎರಡು ದೇಶಗಳಲ್ಲಿ ಮಾತ್ರವಲ್ಲದೆ, ಇಡೀ ಮಾನವ ಸಮುದಾಯದ ಹಿತಾಸಕ್ತಿಗೆ ಪೂರಕವಾಗಿದೆ.

ಆದರೆ ಬರಿಯ ಹೇಳಿಕೆಗಳಿಂದ ಪರಿಸ್ಥಿತಿ ಸುಧಾರಿಸುವುದೆಂಬ ಕನಸು ಕಾಣುವುದು ತಪ್ಪಾಗುತ್ತದೆ. 3 ವರುಷಗಳ ಹಿಂದೆ ನಡೆದ ಆಗ್ರಾ ಶೃಂಗ ಸಮ್ಮೇಳನ ಇದಕ್ಕೆ ಸ್ಪಷ್ಟ ಉದಾಹರಣೆ.

ಪೂರ್ವ ಶರತ್ತು ಬೇಡ

ಇಂದಿನ ಪರಿಸ್ಥಿತಿಯಲ್ಲಿ ಮಾತುಕತೆಯ ಆರಂಭಕ್ಕೆ ಮೊದಲು ಯಾವುದೇ ಶರತ್ತನ್ನು ಹೇರುವ ಪರಿಸ್ಥಿತಿಯಲ್ಲಿ ಎರಡೂ ದೇಶಗಳಿಲ್ಲ. ಗಡಿಯಾಚೆಗಿನ ಭಯೋತ್ಪಾದಕತೆ ನಿಲ್ಲಿಸಬೇಕೆಂದು ಭಾರತ ಹೇಳುವುದಾಗಲಿ, ಕಾಶ್ಮೀರದ ಕುರಿತು ಮಾತುಕತೆ ಆರಂಭಗೊಳ್ಳ ಬೇಕೆಂದು ಪಾಕಿಸ್ತಾನ ಹೇಳುವುದಾಗಲೀ ಕೂಡದು. ಬದಲಾಗಿ ಮಾತುಕತೆ ಆರಂಭಿಸಿ, ಎರಡೂ ದೇಶಗಳ ಜನರ ನಡುವೆ ಪರಸ್ಪರ ಸಂಪರ್ಕ ಬೆಳೆಸಿ, ವಿಶ್ವಾಸ ವನ್ನು ಗಳಿಸುವ ಪ್ರಕ್ರಿಯೆ ಆರಂಭಗೊಳ್ಳಬೇಕು.

ಕಾಶ್ಮೀರ ಮತ್ತು ಭಯೋತ್ಪಾದಕತೆ ಎರಡೂ ಪ್ರಮುಖವಾದ ವಿಷಯಗಳೇ, ಆದರೆ ಇದು ಕೂಡಲೇ ಬಗೆಹರಿಯುವಂತದ್ದಲ್ಲ. ಆದ್ದರಿಂದ ಕಡಿಮೆ ತಕರಾರಿನ ವಿಷಯಗಳನ್ನು ಮೊದಲು ಚರ್ಚಿಸಿ, ಪರಿಹಾರ ಕಂಡುಕೊಂಡು ವಿಶ್ವಾಸ ಬೆಳೆಸಿದ ನಂತರ ಪ್ರಮುಖ ವಿಷಯಗಳ ಚರ್ಚೆಗೆ ಬರಬೇಕು.

ಕಾಶ್ಮೀರಿ ಜನತೆಗೆ ಭರವಸೆ

1989 ರ ನಂತರದಲ್ಲಿ ಉಗ್ರಗಾಮಿ ಚಟುವಟಿಕೆಗಳು ಆರಂಭವಾದ ನಂತರ ಪ್ರಥಮ ಬಾರಿಗೆ ಕಾಶ್ಮೀರ ವಿಶ್ವವಿದ್ಯಾಲಯದಲ್ಲಿ ಪದವಿ ಪ್ರಧಾನ ಸಮಾರಂಭ ಜರುಗಿದ್ದು, ಪ್ರಧಾನಿ ಅದರಲ್ಲಿ ಭಾಗವಹಿಸಿದ್ದರು. ಅವರು ಇತ್ತೀಚಗ ನಡೆದ ಚುನಾವಣೆಯನ್ನು 'ಹಿಂಸೆಯ ವಿರುದ್ಧವಾಗಿ ಜನರು ತೋರಿದ ಪ್ರತಿಕ್ರಿಯೆ' ಎಂದು ಮುಟ್ಟಿದರು, ಮಾತ್ರವಲ್ಲದೆ, ಹಿಂದೆ ನಾವು ಮಾಡಿದ ತಪ್ಪುಗಳಿಂದ ಪಾಠ ಕಲಿತು ಮುಂದೆ ಅಂತಹ ತಪ್ಪುಗಳಾಗದಂತೆ ನೋಡಿಕೊಳ್ಳಬೇಕು ಎಂದು ಕರೆ ಇತ್ತರು.

ಇದೇ ಸಂದರ್ಭದಲ್ಲಿ ವಾರ್ಷಿಕ ಯೋಜನಾ ವೆಚ್ಚವನ್ನು 400 ಕೋಟಿ ರೂ. ಹೆಚ್ಚು ಸಂದುದು ಮಾತ್ರವಲ್ಲದೆ, ಉದ್ಯೋಗ ಅವಕಾಶ, ವೃತ್ತಿಶಿಕ್ಷಣ ಸಂಸ್ಥೆ ಇತ್ಯಾದಿ ಭರವಸೆಗಳನ್ನು ನೀಡಿದರು. ಇದು ಸ್ವಾಗತಾರ್ಹ ಬೆಳವಣಿಗೆ. ಏಕೆಂದರೆ, **ಪಾಕಿಸ್ತಾನದೊಂದಿಗೆ ಭಾಂದವ್ಯ ಬೆಳೆಸುವ ಸಂದರ್ಭದಲ್ಲಿ ಅದು ಅರ್ಥಪೂರ್ಣವಾಗ ಬೇಕಾದರೆ ಕಾಶ್ಮೀರಿ ಜನತೆಯ ಸಮಸ್ಯೆಗಳಿಗೆ ಗಮನ ಕೊಡಲೇಬೇಕಾಗಿದೆ.**



ಅಂತೆಯೇ ಹಿಂದಿನ ವಾದಗಳಾದ, ಕಾಶ್ಮೀರವನ್ನು 3 ರಾಜ್ಯಗಳನ್ನಾಗಿ ವಿಂಗಡಿಸುವುದು, ವಿಶೇಷ ಸ್ಥಾನಮಾನ ನೀಡಿದ ಸಂವಿಧಾನದ 370 ನೇ ವಿಧಿಯನ್ನು ತೆಗೆದು ಹಾಕುವುದು ಇತ್ಯಾದಿ ಘೋಷಣೆಗಳನ್ನು ಕೈಬಿಡಬೇಕು. ಹಾಗೆ ಮಾಡಿದಲ್ಲಿ ಮಾತ್ರ ಕಾಶ್ಮೀರಿ ಜನತೆಯ ವಿಶ್ವಾಸವನ್ನು ಗಳಿಸಿ, ಸಮಾಜ ವಿದ್ರೋಹಿ ಶಕ್ತಿಗಳನ್ನು ದೂರ ಮಾಡ ಬಹುದು. ಅಂತಹ ರಾಜಕೀಯ ಪ್ರಕ್ರಿಯೆ ಯಿಂದ ಮಾತ್ರವೇ ಶಾಶ್ವತ ಪರಿಹಾರ ಕಂಡುಕೊಳ್ಳುವುದು ಸಾಧ್ಯ.

ಸಾಮ್ರಾಜ್ಯಶಾಹಿಯ ಕುತಂತ್ರ

ಕಳೆದ ಐವತ್ತು ವರ್ಷಗಳಿಂದ ಅಮೇರಿಕಾ ಸಾಮ್ರಾಜ್ಯಶಾಹಿಯು ಕಾಶ್ಮೀರದ ಬಗ್ಗೆ ಯಾವ ನಿಲುವನ್ನು ತೆಗೆದುಕೊಂಡಿತ್ತು ಎಂಬುದು ತಿಳಿದ್ದ ವಿಚಾರ. ಹಿಂದೆ ಸೋವಿಯತ್ ಯೂನಿಯನ್ ಇದ್ದುದರಿಂದ ಅಮೇರಿಕಾದ ಸಂಚು ಕೈಗೂಡಲಿಲ್ಲ. ಆದರೆ ಇಂದು, ಅಮೇರಿಕಾವು ಏಕಮೇವ ಅಧಿಪತ್ಯ ಸಾಧಿಸಿರುವ ಸಂದರ್ಭದಲ್ಲಿ ಕಾಶ್ಮೀರದ ಮೇಲೆ ಕೂಡಾ ಇದರ ಪರಿಣಾಮ ಇರುತ್ತದೆ ಎಂಬುದನ್ನು ಗಮನಿಸಬೇಕು.

ಕಾರ್ಗಿಲ್ ಯುದ್ಧದ ಸಂದರ್ಭದಲ್ಲಿ ಕಾಶ್ಮೀರದ ಕುರಿತು ತಾನು ಆಸಕ್ತಿ ತೋರುವುದಾಗಿ (personal interest) ಬಿಲ್ ಕ್ಲಿಂಟನ್ ಹೇಳಿದ್ದುವುದು, ಮಾರ್ಚ್ 31 ರ ನ್ಯೂಯಾರ್ಕ್ ಟೈಮ್ಸ್ ಪತ್ರಿಕೆಯಲ್ಲಿ, "ಭಾರತ, ಪಾಕಿಸ್ತಾನ ಮತ್ತು ಇಡೀ ಉಪ ಖಂಡದಲ್ಲಿನ ಸಮಸ್ಯೆಯು ಅಮೇರಿಕ ಸಂಯುಕ್ತ ಸಂಸ್ಥಾನದ ವಿಶಾಲವಾದ ಕಾರ್ಯಸೂಚಿಯ (broader agenda) ಭಾಗವಾಗಿದ್ದು ಇರಾಕ್ ಯುದ್ಧದ ನಂತರ ಅದನ್ನು ಕೈಗೆತ್ತಿಕೊಳ್ಳಲಾಗುವುದು'' ಎಂದು ಕಾಲಿನ್ ಪಾವೆಲ ಹೇಳಿರುವುದು ಕಾಕತಾಳೀಯವೇನಲ್ಲ. ಭಾರತ ಪಾಕಿಸ್ತಾನಗಳೆರಡೂ ಹೊಂದಿರುವ ಅಸ್ತ್ರಾಸ್ತ್ರವನ್ನೆ ನೆಪವಾಗಿಟ್ಟುಕೊಂಡು, ಮಧ್ಯ ಪ್ರವೇಶ ಮಾಡುವ ಸಾಮ್ರಾಜ್ಯಶಾಹಿಯ ಕುತಂತ್ರವನ್ನು ತ[illegible] ಹಾಕುವಂತಿಲ್ಲ.

ಸಧ್ಯದಲ್ಲೇ ಭಾರತ ಮತ್ತು ಪಾಕಿಸ್ತಾನಕ್ಕೆ ಭೇಟಿ ನೀಡಲಿರುವ ಅಮೆರಿಕಾದ ರಕ್ಷಣಾ ಇಲಾಖೆಯ ಉಪಕಾರ್ಯದರ್ಶಿ ರಿಚರ್ಡ್ ಆರ್ಮಿಟಾಜ್ ಏನು ಹೇಳಲಿದ್ದಾರೆ ಎಂಬುದನ್ನು ಕಾದು ನೋಡುವಾಗಲೇ ಸಾಮ್ರಾಜ್ಯಶಾಹಿ ಕುತಂತ್ರದ ವಿರುದ್ಧ ಎಚ್ಚರಿಕೆಯನ್ನು ಹೊಂದಿರಬೇಕು.

ಮಾಧ್ಯಮ ಮಂಥನ

ಯುದ್ಧ ಸುದ್ದಿ – ಸತ್ಯದ ಬಲಿ !

ಯುದ್ಧ ಮುಗಿಯಿತೆಂದು ನಿಟ್ಟುಸಿರು ಬಿಡುವಂತೇ ಇಲ್ಲ. ಅದು ಇನ್ನೂ ಮುಂದುವರಿದೇ ಇದೆ...!?

ಇರಾಕ್ ಮೇಲಿನ ಅಮೇರಿಕಾ ಮತ್ತು ಬ್ರಿಟನ್‌ನ ಆಕ್ರಮಣ ಈಗ ಒಂದು ಹಂತ ದಾಟಿದೆ. 'ಯುದ್ಧ'ದ ಹೆಸರಿನಲ್ಲಿ ಏಕಪಕ್ಷೀಯವಾದ ಆಕ್ರಮಣ ನಡೆಸಿದ ಅಮೇರಿಕಾ ಈಗ ಇರಾಕಿನ ಜನತೆಯನ್ನು ಸರ್ವಾಧಿಕಾರಿಯ ಹಿಡಿತದಿಂದ ಬಿಡುಗಡೆ ಗೊಳಿಸಿದ ಹಮ್ಮಿನಲ್ಲಿದೆ.

ಇರಾಕಿನಲ್ಲಿ ಸಮೂಹ ನಾಶದ ಅಸ್ತ್ರಗಳಿವೆ. ಆದರಿಂದ ಜಗತ್ತಿಗೇ ಅಪಾಯ ಕಾದಿದೆ ಎಂಬ ಕಾರಣ ನೀಡಿ ಆಕ್ರಮಣ ಮಾಡಿದ ಅಮೇರಿಕಾ ಈಗ ಸಮೂಹ ನಾಶದ ಅಸ್ತ್ರಗಳನ್ನೇ ಮರೆತು ಇರಾಕ್‌ನಲ್ಲಿ ತನ್ನ ಪರವಾದ ಸರ್ಕಾರವನ್ನು ಸ್ಥಾಪಿಸುವುದರಲ್ಲಿ, ಭಗ್ನಗೊಂಡ ಇರಾಕ್‌ನ ಪುನರ್ ನಿರ್ಮಾಣದಲ್ಲಿ ತನ್ನ ದೇಶದ ಕಂಪನಿಗಳಿಗೆ ಲಾಭ ದೊರಕಿಸಿಕೊಡುವುದರಲ್ಲಿ, ಯುದ್ಧದಿಂದ ಬಡವಾದ ದೇಶಕ್ಕೆ ನೆರವು ನೀಡುವ ನೆಪದಲ್ಲಿ ತನ್ನ ದೇಶದ ಆಹಾರ ಸಾಮಗ್ರಿಗಳನ್ನು ಇಲ್ಲಿ ಸುರಿಯುವುದರಲ್ಲಿ, ಇದೆಲ್ಲಕ್ಕಿಂತಲೂ ಮುಖ್ಯವಾಗಿ ಇರಾಕಿನ ತೈಲ ನಿಧಿಯನ್ನು ದೋಚುವುದರಲ್ಲಿ ಮಗ್ನವಾಗಿದೆ.


ಆಕ್ರಮಣ ಆರಂಭವಾದ ದಿನದಿಂದ ಕ್ಷಣಕ್ಷಣಕ್ಕೂ ಆಕ್ರಮಣದ ಸುದ್ದಿಗಳನ್ನು ನೋಡುತ್ತಿದ್ದ, ಆಲಿಸುತ್ತಿದ್ದ, ಓದುತ್ತಿದ್ದ ಜನರಿಗೆ ಇವೆಲ್ಲ ಮಾಹಿತಿಗಳು ಸಿಗುತ್ತಿಲ್ಲ. ಕ್ಷಣ ಕ್ಷಣಕ್ಕೂ ಆಕ್ರಮಣ 'ಪಡೆಗಳ ಸಾಧನೆ' ಯನ್ನು ಬಿತ್ತರಿಸಿದ ಸುದ್ದಿ ಮಾಧ್ಯಮಗಳು ಅಮೇರಿಕಾದ 'ಆಕ್ರಮಣದ ನಂತರದ ಸಾಧನೆಗಳನ್ನು ಗುಟ್ಟಾಗಿ ಇಡುತ್ತಿವೆ. ಈಗ ಏನಿದ್ದರೂ ಇರಾಕ್‌ನಲ್ಲಿ ಸದ್ದಾಂ ವಿರೋಧಿ ಪ್ರದರ್ಶನಗಳನ್ನು ಅಮೇರಿಕಾದ ಸೈನಿಕರನ್ನು ಸ್ವಾಗತಿಸುತ್ತಿರುವ ಇರಾಕಿನ ಜನರನ್ನು, ತಾನೇ ಗಾಯಗೊಳಿಸಿದ ನಿರ್ಗತಿಕರನ್ನಾಗಿ ಮಾಡಿದ ಇರಾಕಿ ಜನರಿಗೆ ಅಮೇರಿಕಾ ಪಡೆಗಳು ನೀಡುತ್ತಿರುವ 'ಮಾನವೀಯ ನೆಲೆ'ಯ ನೆರವುಗಳನ್ನು ಪ್ರಚಾರ ಮಾಡುವುದರಲ್ಲಿ ಮಾಧ್ಯಮಗಳು ಮಗ್ನವಾಗಿವೆ. ಸದಾ ಸುಳ್ಳುಗಳನ್ನು ಹರಡುವುದರಲ್ಲಿ ನಿರತವಾದ ಅಮೇರಿಕಾ, ಇರಾಕ್ ಮೇಲಿನ 'ಆಕ್ರಮಣ ಕುರಿತು ವರದಿ' ಮಾಡಬೇಕಿದ್ದ ಮಾಧ್ಯಮಗಳನ್ನೆಲ್ಲ 'ಯುದ್ಧದ ಕುರಿತು ಪ್ರಚಾರ' ಮಾಡಲು ಹಚ್ಚಿದೆ.

ವಾಸ್ತವವಾಗಿ ನಾವುಗಳು ಸ್ಯಾಟಲೈಟ್ ಚಾನೆಲ್‌ಗಳಲ್ಲಿ, ಪತ್ರಿಕೆಗಳಲ್ಲಿ, ರೇಡಿಯೋಗಳಲ್ಲಿ ಪಡೆದ ಯುದ್ಧ ಸುದ್ದಿಗಳಲ್ಲಿ ಹೆಚ್ಚಿನದು 'ಸತ್ಯ'ವನ್ನು ತಿರುಚಿದ ಅಥವಾ ಮರೆ ಮಾಚಿದ ಸುದ್ದಿಗಳೇ ಆಗಿದ್ದವು. ಯುದ್ಧ ಭೂಮಿಯಿಂದ ವರದಿ ಮಾಡಿದ 'ಅಲ್- ಅರೇಬಿಯಾ' ಪತ್ರಿಕೆಯ ಹಿರಿಯ ಬಾತ್ಮೀದಾರ ವಾಯೆಲ್ ಅವದ್ ಹೇಳು ವಂತೆ, ಅಲ್ಲಿದ್ದ ಪತ್ರಕರ್ತರು ಶೇ.50ರಷ್ಟು ಸುದ್ದಿಯನ್ನು ಮಾತ್ರ ವರದಿ ಮಾಡಲು ಸಾಧ್ಯವಾಯಿತು.

ಇದು ಯಾಕೆ ಹೀಗಾಯಿತೆಂದರೆ, ಅಮೇರಿಕಾ ಯುದ್ಧಕ್ಕೆ ಮೊದಲೇ ತನ್ನ ಪರವಾಗಿ ವರದಿ ಮಾಡಲು ಪತ್ರಕರ್ತರಿಗೆ ತರಬೇತಿ ಕೊಟ್ಟಿತ್ತು. ಈ ತರಬೇತಿ ಪಡೆದ ಪತ್ರಕರ್ತರನ್ನು ತನ್ನ ಸೇನಾಪಡೆಗಳ ಜೊತೆಯಲ್ಲಿ ನಿಯೋಜಿಸಿತ್ತು. ಅಮೇರಿಕಾ ಮತ್ತು ಬ್ರಿಟನ್‌ನ ಸೇನೆಗಳ ಜೊತೆಯಲ್ಲಿದ್ದ ಪತ್ರಕರ್ತರೆಲ್ಲ, ಅಮೇರಿಕಾದ ಪ್ರಚಾರಕರಂತೆ ಈ ಸೇನಾಪಡೆ ಗಳ ಬಗ್ಗೆ ಮಾತ್ರ ವರದಿ ಮಾಡ ಬಹುದಿತ್ತು. ಈ ಆಕ್ರಮಣದ ನೈತಿಕತೆಯ ಬಗ್ಗೆಯಾಗಲಿ, ಅದರ ಗೊಂದಲ ಅಥವಾ ಸೋಲಿನ ಬಗ್ಗೆಯಾಗಲಿ, ಇರಾಕಿನ ಜನತೆ ಅನುಭವಿಸಿದ ನೋವಿನ ಬಗ್ಗೆಯಾಗಲಿ, ಇರಾಕಿನ ಸೈನಿಕರು ತೋರಿಸಿದ ಪ್ರತಿರೋಧದ ಬಗ್ಗೆಯಾಗಲಿ ಅವರುಗಳು ವರದಿ ಮಾಡುವಂತಿ ರಲಿಲ್ಲ. ಈ ಪಡೆಗಳ ಜೊತೆ ಇದ್ದ ಪತ್ರ ಕರ್ತರು ತಮ್ಮ ವರದಿಗಳನ್ನು ಸೇನಾ ನಾಯಕರಿಗೆ ಒಮ್ಮೆ ತೋರಿಸಿ, ಅವರ ಅನುಮತಿ ಪಡೆದು ಮತ್ತೆ ಕಳುಹಿಸ ಬೇಕಿತ್ತು. ಯಾವ ವರದಿ ಕಳುಹಿಸಬೇಕು ಎಂಬುದನ್ನು ಸೇನಾ ನಾಯಕರೇ ನಿರ್ದೇಶಿಸುತ್ತಿ ದ್ದರು. ಈ ಪತ್ರಕರ್ತರು ತಮ್ಮ ವೈಯಕ್ತಿಕ ಫೋನ್ ಬಳಸಲೂ ಅನುಮತಿ ಇರಲಿಲ್ಲ!

'ಇಡೀ ಜಗತ್ತಿನಲ್ಲಿ ಅತಿ ದೊಡ್ಡ ಪ್ರಜಾಪ್ರಭುತ್ವ ರಾಷ್ಟ್ರ, ಇಡೀ ಜಗತ್ತಿನಲ್ಲಿ ಅತ್ಯಂತ ಸ್ವತಂತ್ರ, ಪತ್ರಿಕೋದ್ಯಮ ಹೊಂದಿರುವ ರಾಷ್ಟ್ರ' ಎಂದೆಲ್ಲ ತನ್ನನ್ನು ತಾನೇ ಬಣ್ಣಿಸಿಕೊಳ್ಳುವ ಅಮೇರಿಕಾ ಮಾಧ್ಯಮಗಳನ್ನು ಬಳಸಿಕೊಂಡ ರೀತಿ ಹಾಗೂ ಮಾಧ್ಯಮಗಳು ತಮ್ಮ ಗೌರವವನ್ನೇ ಬಿಟ್ಟು ಆಡಳಿತ ವ್ಯವಸ್ಥೆಗೆ ಸಲಾಮು ಹೊಡೆದದ್ದು ನಿಜಕ್ಕೂ ನಾಚಿಕೆಯ ಸಂಗತಿ. ತನ್ನ ದೇಶದ ಪತ್ರಕರ್ತರು ತನ್ನ

ಪುಟ 11 ಕ್ಕೆ



ಪುಗಸಟ್ಟೆ ತೈಲ

ಅಮೆರಿಕ ಎಂಬಲ್ಲಿ ಇಂದೊಬ್ಬ ಗೂಂಡಾ
ತಾನೆಂದು ಹೇಳುತಿಹ ಜಗಕೆಲ್ಲ ಗಂಡ
ಗೂಂಡಾನಿಗೆ ಬೇಕಂತೆ ಪುಗಸಟ್ಟೆ ತೈಲ
ತೈಲವನು ಕೊಡದವನು ಬದುಕಲಿಕೆ ಸಲ್ಲ!

- ಎಡಂಬಾರಿ

ಡಾಲರ್ ಕಣ್ಣಿನ ಗಿಡುಗನ ಕೊಂದು ಕಾಪಾಡಬೇಕಿದೆ ಜಗವನು ಇಂದು

(ಯುದ್ಧಾನಂತರದಲ್ಲಿ ಕಾರ್ಮಿಕ ವರ್ಗದ ಕರ್ತವ್ಯ)

ಜಿ.ಎನ್.ನಾಗರಾಜ್

ಜಾಗತಿಕ ಪ್ರತಿರೋಧ ನಡೆದಾಗಲೂ ಇರಾಕ್‌ನ ಆಕ್ರಮಣ ಆಗಿಯೇ ಹೋಯಿತು. ಹೊಸ ಆಕ್ರಮಣಗಳಿಗೂ ಅಮೆರಿಕನ್ ಸಾಮ್ರಾಜ್ಯಶಾಹಿ ಸಿದ್ಧವಾಗುತ್ತಿದೆ. ಅದು ಒಡ್ಡಿರುವ ಸವಾಲಿಗೆ ಉತ್ತರ ನಿರಾಶೆಯೇ.... ಖಂಡಿತ ಅಲ್ಲ! ಈ ಸಲದ ಯುದ್ಧದ ಸಂದರ್ಭ, ಜಾಗತಿಕ ಪ್ರತಿಭಟನೆಗಳು - ಜನರಲ್ಲಿ ಮೂಡಿದ ಎಚ್ಚರವು ಹಿಂದಿನ ಯಾವ ಯುದ್ಧಕ್ಕಿಂತಲೂ ಭಿನ್ನ. ಆದ್ದರಿಂದ ಈ ಬೆಳವಣಿಗೆಗಳನ್ನು ಆಳವಾಗಿ ಗ್ರಹಿಸಿ, ಉನ್ನತ ಪ್ರಜ್ಞೆ ಪಡೆದು ಚಳುವಳಿಯ ವ್ಯಾಪಕತೆಗೆ ಮುಂದಾಗಬೇಕೆಂದಿರುವ ಲೇಖಕರು ಸಾಮ್ರಾಜ್ಯಶಾಹಿಯ ಯುದ್ಧದ ಮೂಲ ಕಾರಣ ಹಾಗೂ ಹೊಸ ಬೆಳವಣಿಗೆಗಳನ್ನು ವಿಶ್ಲೇಷಿಸಿದ್ದಾರೆ.




ಇಂದು ಇರಾಕ್ ಮೇಲಿನ ಅಮೆರಿಕಾದ ಯುದ್ಧ ಅಂತ್ಯವಾಗಿದೆ. ಆಕ್ರಮಣ ಮುಗಿದಿದೆ ಎಂಬ ರೀತಿಯ ಭಾವನೆ ವಿಶ್ವದೆಲ್ಲೆಡೆ ಹರಡಿದೆ. ಆದರೆ ಇರಾಕ್ ಮೇಲಿನ ಅಮೆರಿಕಾದ ಆಕ್ರಮಣ ಈಗ ಆರಂಭವಾಗಿದೆ. ಇರಾಕ್‌ನ ತೈಲ ಸಂಪತ್ತಿನ ಲೂಟಿ ಇನ್ನು ಮೇಲೆ ಆರಂಭವಾಗುತ್ತದೆ. ಇರಾಕ್‌ನ ಪುನರ್ನಿರ್ಮಾಣದ ದುರ್ಲಾಭವನ್ನು ಯಾವಯಾವ ಕಂಪನಿಗಳಿಗೆ ಹಂಚಬೇಕು ಎಂಬುದು ಈಗ ಶ್ವೇತಭವನದ ಒಳ ವಲಯದಲ್ಲಿ ಚರ್ಚೆಯ ವಿಷಯ. ಇರಾಕ್ ಜನತೆ ಇನ್ನೂ ಹಲವು ದಶಕಗಳ ಕಾಲ ಪ್ರಜಾಸತ್ತೆಯ ಹೆಸರಿನಲ್ಲಿ ಅಮೆರಿಕಾದ ಸೈನ್ಯದ ಬೂಟುಗಳಡಿ ನರಳಲಿದ್ದಾರೆ.

ಅದೇ ಸಮಯದಲ್ಲಿ ಮಾನವ ಇತಿಹಾಸದಲ್ಲಿಯೇ ಕಂಡು ಕೇಳರಿಯದಷ್ಟು ವ್ಯಾಪಕವಾಗಿ ವಿಶ್ವದೆಲ್ಲೆಡೆ ಜನತೆ ಯುದ್ಧ ವಿರೋಧಿ ಚಳುವಳಿಗೆ ಧುಮುಕಿದರೂ ಕೂಡ ಯುದ್ಧ ನಡೆದೇಬಿಟ್ಟಿತು. ಇರಾಕ್‌ನ ಆಕ್ರಮಣ ಆಗಿಯೇ ಹೋಯಿತು. ನಮ್ಮ ಚಳುವಳಿಯೆಲ್ಲಾ ನಿಷ್ಫಲವಾಯಿತೇ ಎಂಬ ಹತಾಷೆಯು ಭಾವನೆಯಲ್ಲಿದ್ದಾರೆ. ಒಳಗೊಳಗೇ ಅಮೆರಿಕಾದ ರಾಕ್ಷಸೀಯ ಆಕ್ರಮಣದ ಬಗ್ಗೆ ಕುದಿಯುತ್ತಿದ್ದರೂ ಈಗ ಇನ್ನೇನು ಮಾಡಲಾಗುತ್ತದೆ ಎನ್ನುವ ನಿಸ್ಸಹಾಯಕತೆ ಜನರನ್ನು ಆವರಿಸಿದೆ.

ಅದರ ಜೊತೆ ಜೊತೆಗೆ ಡಾಲರ್ ಕಣ್ಣಿನ ಗಿಡುಗನ ಕೆಟ್ಟ ಕಣ್ಣು ಮುಂದಿನ ಬಲಿಯನ್ನು ಅರಸುತ್ತಿದೆ. ಅದು ಸಿರಿಯಾವೋ, ಇರಾನೋ, ಉತ್ತರ ಕೋರಿಯಾವೋ?

ಆದರೆ ಅಮೆರಿಕ ಒಡ್ಡಿರುವ ಸವಾಲಿಗೆ ಉತ್ತರ ಹತಾಶೆ, ನಿಸ್ಸಾಹಾಯಕತೆಗಳಲ್ಲ

ಬದಲಾಗಿ ಮುಂದಿನ ಹಂತದ ಆಕ್ರಮಣಗಳ ವಿರುದ್ಧ ಬಲವಾದ ತಯಾರಿ. ಈಗಿನ ಸ್ಥಿತಿಯಲ್ಲಿ ತಯಾರಿಯೆಂದರೆ ಇಷ್ಟೊಂದು ಬೃಹತ್ ಪ್ರಮಾಣದಲ್ಲಿ ಯುದ್ಧ ವಿರೋಧಿ ಚಳುವಳಿಯಾದರೂ ಯುದ್ಧವನ್ನು ತಡೆಗಟ್ಟಲು ಆಗಲಿಲ್ಲವೇಕೆ? ಮುಂದಿನ ಆಕ್ರಮಣಗಳನ್ನು ತಡೆಗಟ್ಟುವ ದಾರಿ ಯಾವುದು? ಅಮೆರಿಕಾದಂತಹ ಮಿಲಿಟರಿ ದೈತ್ಯನನ್ನು ಹೇಗೆ ಮಣಿಸುವುದು? ಎಂಬ ಬಗ್ಗೆ ಚಿಂತನ-ಮಂಥನ. ಯುದ್ಧದ ಕಾರಣಗಳ ಬಗ್ಗೆ ಮತ್ತಷ್ಟು ಆಳವಾದ ಅರಿವು ಎತ್ತರದ ಪ್ರಜ್ಞೆ. ಇವುಗಳ ಬಲದಿಂದ ಯುದ್ಧ ವಿರೋಧಿ ಚಳುವಳಿಯ ಗುರಿ ಬಗ್ಗೆ ಮತ್ತಷ್ಟು ಸ್ಪಷ್ಟತೆ. ಈ ಸ್ಪಷ್ಟತೆಯಿಂದ ಚಳುವಳಿಗೆ ಇನ್ನಷ್ಟು, ಮತ್ತಷ್ಟು




ವ್ಯಾಪಕತೆ ಹಾಗೂ ಪರಿಣಾಮಕಾರಿತ್ವ ಈ ಗುರಿಗಳಿಗಾಗಿ - ಈ ಸ್ಪಷ್ಟತೆ ಹಾಗೂ ವ್ಯಾಪಕತೆಗಳಿಗಾಗಿ ಆರ್ಭಟಗಳಿಲ್ಲದ, ಆದರೆ ದೃಢವಾದ ನಿರಂತರ ಕೆಲಸ.

ಇರಾಕ್ ಮೇಲಿನ ಆಕ್ರಮಣಕ್ಕೆ ಕಾರಣವೇನು?

ಇದೊಂದು ಪ್ರಶ್ನೆಯೇ? ಛೇ ಎಳೆ ಮಗುವೂ ಹೇಳುತ್ತದಲ್ಲವೇ? ಇದು ಎಣ್ಣೆಗಾಗಿ, ಪೆಟ್ರೋಲ್‌ಗಾಗಿ ಎಂದು.ಹೌದು, ಇಡೀ ಪ್ರಪಂಚವೇ ಕೂಗಿ ಕೂಗಿ ಹೇಳಿದೆ "ಈ ಯುದ್ಧ ಎಣ್ಣೆಗಾಗಿ, ಎಣ್ಣೆಗಾಗಿ ಯುದ್ಧ ಬೇಡ" ಎಂದು.

ಯುದ್ಧವೊಂದರ ಬಗ್ಗೆ ಇಂತಹ ಸ್ಪಷ್ಟತೆ ಇಷ್ಟೊಂದು ಸ್ಪಷ್ಟತೆ ಇಲ್ಲಿಯವರೆಗಿನ ಯಾವ ಯುದ್ಧದ ಸಂದರ್ಭದಲ್ಲಿಯೂ ಕಂಡಿರಲಿಲ್ಲ. ಆದ್ದರಿಂದಾಗಿಯೇ ಇಲ್ಲಿಯರೆಗಿನ ಯಾವ ಯುದ್ಧ ವಿರೋಧಿ ಚಳುವಳಿಯೂ ಕೂಡ ಇಷ್ಟೊಂದು ಎತ್ತರಕ್ಕೆ ಪರ್ವತಗಳ ಎತ್ತರಕ್ಕೆ ಬೆಳೆದಿರಲಿಲ್ಲ. ಇಷ್ಟೊಂದು ವಿಸ್ತಾರವಾಗಿ - ಸಾಗರಗಳ ಬೃಹತ್ ತೆರೆಗಳಂತೆ ಅಪ್ಪಳಿಸಿರಲಿಲ್ಲ. ಇಲ್ಲ, ಹಿಂದೆ ವಿಯಟ್ನಾಂ ಯುದ್ಧದ ಸಂದರ್ಭದಲ್ಲಿಯೂ ಇಲ್ಲ.



ಸಾಗರಂ ಸಾಗರೋಪಮಂ, ಪರ್ವತಂ ಪರ್ವತೋಪಮಂ (ಸಾಗರಕ್ಕೆ ಸಾಗರವೇ ಎಣೆ, ಪರ್ವತಕ್ಕೆ ಪರ್ವತವೇ ದೋಣಿ)

ಹಿಂದೆ ನಡೆದ ಯುದ್ಧಗಳನ್ನೆಲ್ಲಾ, ಈಗಲೂ ನಡೆಯುತ್ತಿರುವ ಯುದ್ಧಗಳನ್ನೆಲ್ಲಾ ಒಂದೊಂದಾಗಿ ಪರಿಶೀಲಿಸಿ ನಿಮಗೆ ಅರ್ಥವಾಗುತ್ತದೆ.

ಯುದ್ಧದ ಕಾರಣದ ಬಗ್ಗೆ ಸ್ಪಷ್ಟ ಕಣ್ಣೋಟವೇ ಯುದ್ಧ ವಿರೋಧಿ ಚಳುವಳಿಯು ಈ ಎತ್ತರ-ಬಿತ್ತರಗಳಿಗೆ ಕಾರಣ. ಯುದ್ಧ ಆರಂಭವಾಗುವುಕ್ಕೆ ಮೊದಲೇ ಯುದ್ಧ ವಿರೋಧಿಚಳುವಳಿ ಭುಗಿಲೇಳಲು ಕಾರಣ ಮುಂದೆ ಈ ಚಳುವಳಿಯನ್ನು ಮತ್ತು ಎತ್ತರದ ಉತ್ತುಂಗಕ್ಕೆ ಕೊಂಡೊಯ್ಯ ಬೇಕೆಂದರೆ ಮತ್ತಷ್ಟು ಸ್ಪಷ್ಟತೆ, ಅರಿವಿನ ಎತ್ತರಗಳನ್ನು ಸಾಧಿಸಬೇಕು.

ಇಂದಿನ ಈ ಸ್ಪಷ್ಟತೆಗೆ ಕಾರಣ


ಹಿಂದಿನ ಮಹಾಯುದ್ಧಗಳ ಸಂದರ್ಭದಲ್ಲಿ,ಮಹಾಯುದ್ಧಗಳ ನಂತರದ ಸಂದರ್ಭದಲ್ಲಿ ಬಾರದ ಈ ಸ್ಪಷ್ಟತೆ ಈಗ ಇಷ್ಟು ವಿಸ್ತಾರವಾಗಿ ಮೂಡಲು ಕಾರಣವೇನು?

ಎರಡನೇ ಮಹಾಯುದ್ಧದ ನಂತರ ಅನೇಕ ಬೆಳವಣಿಗೆಗಳಾದವು. ಅವುಗಳಲ್ಲಿ ಪ್ರಮುಖವಾದದು: ಪ್ರಪಂಚದ ಮೂರನೇ ಒಂದು ಭಾಗ ಸಮಾಜವಾದಿ ಸಮಾಜಗಳನ್ನು ಸ್ಥಾಪಿಸಿದುದು ಹಾಗೂ ತಮ್ಮ ದೇಶಗಳಲ್ಲಿ ವ್ಯಾಪಕವಾಗಿ ಸಾಮಾಜಿಕ ಕಲ್ಯಾಣ ಕ್ರಮಗಳನ್ನು ಜಾರಿಗೊಳಿಸಿದ್ದು. ಆಗ ಅಮೆರಿಕ, ಬ್ರಿಟನ್ ಮೊದಲಾದ ಬಂಡವಾಳಶಾಹಿ ದೇಶಗಳು ತಮ್ಮ ದೇಶಗಳ ಜನ ಸಮಾಜವಾದದ ಕಡೆಗೆ ಆಕರ್ಷಿತರಾಗುವುದನ್ನು ತಡೆಗಟ್ಟಲು ತಮ್ಮ ದೇಶಗಳಲ್ಲಿ ಕಲ್ಯಾಣ ರಾಜ್ಯದ(Welfare state) ಕಲ್ಪನೆಯನ್ನು ಜಾರಿಗೆ ತಂದದ್ದು ಮತ್ತೆ ಅದೇ ಕಾಲಕ್ಕೆ ಕಮ್ಯುನಿಸ್ಟ್ ವಿರೋಧಿ ಪ್ರಚಾರದ ಧಾಳಿಯನ್ನು ಆರಂಭಿಸಿ ಸೋವಿಯತ್ ಒಕ್ಕೂಟವನ್ನು ಪ್ರಜಾಪ್ರಭುತ್ವ ಹಾಗೂ ಸ್ವಾತಂತ್ರ್ಯದ ವಿರೋಧಿ ಎಂದು ಚಿತ್ರಿಸಿ ತಮ್ಮ ದುಷ್ಕೃತ್ಯಗಳನ್ನು ಮುಚ್ಚಿಕೊಳ್ಳಲೆತ್ನಿಸಿದ್ದು. ಅಂದರೆ ಶೀತಲ ಯುದ್ಧದ ಕಮ್ಯುನಿಸ್ಟ್ ವಿರೋಧಿ ಮಂಪರಿನಲ್ಲಿ ತಮ್ಮ ದೇಶಗಳ ಜನತೆಯನ್ನು ಮಳುಗಿಸಿದ್ದು.

ಆದರೆ ಸೋವಿಯತ್ ಒಕ್ಕೂಟದ ಹಾಗೂ ಇತರ ಕೆಲ ಸಮಾಜವಾದಿ ದೇಶಗಳ ಕುಸಿತದ ನಂತರ ಯುರೋಪು ಅಮೆರಿಕಾಗಳ ಕಾರ್ಮಿಕರಿಗೆ ಇತರ ದುಡಿಯುವ ಜನತೆಗೆ ನೀಡಿದ್ದ ಸೇವಾ ಭದ್ರತೆ, ವೇತನ, ಸಾಮಾಜಿಕ ಭದ್ರತೆಗಳನ್ನು ಕಸಿಯುತ್ತಾ ಬಂದಾಗ ಅಮೆರಿಕಾ, ಯುರೋಪ್‌ಗಳ ಜನತೆ ಪ್ರತಿಭಟನೆ, ಮುಷ್ಕರಗಳಿಗೆ ಇಳಿಯಬೇಕಾಗಿ ಬಂತು. ಲಕ್ಷ, ದಶಲಕ್ಷ ಜನರು ಭಾಗವಹಿಸಿದ ಮುಷ್ಕರಗಳು ಮತ್ತೆ ಮತ್ತೆ ಸಂಭವಿಸಿದವು.

ಅದೇ ಸಮಯದಲ್ಲಿ ಜಾಗತೀಕರಣ, ಖಾಸಗೀಕರಣ, ಉದಾರೀಕರಣದ ದಾಳಿ ವಿಶ್ವಬ್ಯಾಂಕ್, ಐಎಂಎಫ್, ವಿಶ್ವ ವ್ಯಾಪಾರ ಸಂಸ್ಥೆಗಳ ಮೂಲಕ ಅಮೆರಿಕಾ ಮೊದಲಾದ ಶ್ರೀಮಂತ ದೇಶಗಳು ಎಸಗಿದ ಆರ್ಥಿಕ ಧಾಳಿ ವಿಶ್ವದ ಜನತೆಯು ಕಣ್ಣಿಗೆ ನಿಚ್ಚಳವಾಗಿ ಕಾಣಲಾರಂಭಿಸಿತು. ಜಾಗತೀಕರಣದ ವಿರುದ್ಧ ಚಳುವಳಿ ಬೆಳೆಯಲಾರಂಭಿಸಿತು. ವಿಶ್ವ ವ್ಯಾಪಾರ ಸಂಸ್ಥೆ ಸಭೆ ಸೇರಿದ ಸಿಯಾಟಲ್‌ನಿಂದ ಆರಂಭವಾಗಿ ವಿಶ್ವ ಶ್ರೀಮಂತ ದೇಶಗಳು ಜಿ.ಏಳು, ವಿಶ್ವದ ಆರ್ಥಿಕ ವೇದಿಕೆ(ಡಾವೊಸ್ ಸೇರುವ ಬಹುರಾಷ್ಟ್ರೀಯ ಕಂಪನಿಗಳ ಒಡೆಯರ ಮೇಳ), ವಿಶ್ವ ಬ್ಯಾಂಕಿನ ವಾರ್ಷಿಕ ಮಹಾ ಸಭೆಗಳು ಇತ್ಯಾದಿ ಸಭೆಗಳು ಸೇರಿದಲೆಲ್ಲಾ ಲಕ್ಷ ಲಕ್ಷ ಜನರ ಪ್ರತಿಭಟನೆಗಳು ಆರಂಭವಾದವು. ಇದು ಜಗತ್ತಿನ ಜನರ ಕಣ್ಣು ಈ ಶ್ರೀಮಂತ ದೇಶಗಳ ಶೋಷಣೆಯ ಸ್ವರೂಪದ ಬಗ್ಗೆ ಕಣ್ತೆರೆಸಲಾರಂಭಿಸಿತು.

ಹೀಗೆ ಜಾಗತೀಕರಣ ವಿರೋಧಿ ಚಳುವಳಿ ಜಗತ್ತಿನ ಆರ್ಥಿಕ ರಚನೆ ಮತ್ತು ಹಿಡಿತಗಳ



ಅಮೇರಿಕಾ, ಅಮೇರಿಕಾ

ಅಮೆರಿಕಾದ ಕೋಟ್ಯಾಧಿಪತಿಗಳು ಬಹಳ ಮಟ್ಟಿಗೆ ಬೇರೆಲ್ಲ ದೇಶಗಳವರಿಗಿಂತಲೂ ಹೆಚ್ಚು ಶ್ರೀಮಂತರು ಮತ್ತು ಭೌಗೋಳಿಕವಾಗಿ ಹೆಚ್ಚು ಸುರಕ್ಷಿತರು. ಬೇರೆಲ್ಲರಿಗಿಂತ ಹೆಚ್ಚು ಲಾಭ ಗಳಿಸಿದವರು. ಅವರು ಎಲ್ಲಾ ದೇಶಗಳನ್ನು, ಅತ್ಯಂತ ಶ್ರೀಮಂತ ದೇಶಗಳನ್ನೂ ಕೂಡ ತಮ್ಮ ಸಾಮಂತರನ್ನಾಗಿ ಮಾಡಿಕೊಂಡಿದ್ದಾರೆ. ಅವರು ಹತ್ತಾರು ಸಾವಿರ ಕೋಟಿ ಡಾಲರುಗಳನ್ನು ಸೆಳೆದುಕೊಂಡಿದ್ದಾರೆ. ಆ ಪ್ರತಿಯೊಂದು ಡಾಲರು ನಾಣ್ಯಕ್ಕು ಕೂಡಾ ಕೊಳಚೆ ಮೆತ್ತಿಕೊಂಡಿದೆ. ಬ್ರಿಟನ್ ಮತ್ತು ಆದರ ಮಿತ್ರ ರಾಷ್ಟ್ರಗಳೊಂದಿಗೆ ಮಾಡಿಕೊಂಡ ರಹಸ್ಯ ಒಪ್ಪಂದಗಳ ಕೊಳಚೆ. ಯುದ್ಧದ ಲೂಟಿಗಾಗಿ ಮಾಡಿಕೊಂಡ ರಹಸ್ಯ ಒಪ್ಪಂದಗಳ ಕೊಳಚೆ. ಪ್ರತಿ ಡಾಲರಿಗೂ ಮೆತ್ತಿಕೊಂಡಿದೆ 'ಲಾಭದಾಯಕ'ವಾದ ಯುದ್ಧ ಸರಬರಾಜಿನ ಒಪ್ಪಂದಗಳ ಕೊಳಚೆ. ಪ್ರತಿ ಡಾಲರಿಗೂ ರಕ್ತ ಮೆತ್ತಿಕೊಂಡಿದೆ. ಹತ್ತಾರು ಲಕ್ಷ ಜನರ ಸಾವಿನ, ನೋವಿನ ರಕ್ತ ಸಾಗರದಿಂದ ಮೆತ್ತಿದ ರಕ್ತ.

ಯುದ್ಧದ ಲೂಟಿ ಯಾರಿಗೆ ಸಿಗಬೇಕೆಂದು ನಿರ್ಧರಿಸಲು ನಡೆಸಿದ ಯುದ್ಧ, ಜಗತ್ತಿನ ದುರ್ಬಲ ದೇಶಗಳ ಕತ್ತು ಹಿಸುಕುವುದರಲ್ಲಿ ಯಾರು ಎಲ್ಲರಿಗಿಂತ ಮುಂದೆ ಎಂದು ನಿರ್ಧರಿಸಲು ನಡೆಸಿದ ಯುದ್ಧದಿಂದ ಮೆತ್ತಿದ ರಕ್ತ ಮೆತ್ತಿಕೊಂಡಿದೆ ಪ್ರತಿ ಡಾಲರಿಗೆ.

- ಲೆನಿನ್

ಆಗಸ್ಟ್ 20, 1918 ರಲ್ಲಿ ಅಮೆರಿಕದ ಕಾರ್ಮಿಕರಿಗೆ ಲೆನಿನ್ ಬರೆದ ಪತ್ರದಿಂದ

ೀಡಿದ ಕನ್ನೋಟ ಕಮ್ಯುನಿಸ್ಟ್ ವಿರೋಧಿ ಅರಿನಿಂದ ವಿಶ್ವದ ಜನತೆ ಎದ್ದು ಕಣ್ಣು ಕೊಳ್ಳುವಂತೆ ಮಾಡಿತು. ಕಣ್ಬೆಳಕಿನಿಂದ ್ ಮೇಲಿನ ಧಾಳಿಯನ್ನು ನೋಡಿದ ವಿಶ್ವದ ಗೆ ಅಮೆರಿಕಾ-ಬ್ರಿಟನ್‌ಗಳ ಲಾಭಕೋರತನ ಾಗಿ ಗೋಚರಿಸಿದವು.

ರು ಕೊಟ್ಟ ಬೆಳಕು

ಂದು ಅಮೆರಿಕಾ ಮತ್ತು ಬ್ರಿಟನ್‌ಗಳಂತಹ ಗಳನ್ನು ವಿಶ್ವದ ಜನತೆ ಯಾವ ಬೆಳಕಿನಲ್ಲಿ ಸುತ್ತಿದ್ದಾರೋ ಯಾವ ಅದ್ಭುತ ಬೆಳಕಿನಲ್ಲಿ ದೇಶಗಳು ತಮ್ಮ ನಿಜ ಕ್ರೂರ ಸ್ವರೂಪದಲ್ಲಿ ನ ಮುಂದೆ ಬೆತ್ತಲೆಯಾಗಿ ನಿಂತಿದ್ದಾರೋ ೆಕು 20ನೇ ಶತಮಾನದ ಆದಿಯಲ್ಲಿ ಲೆನಿನ್ನರು ದ ಹೊಂಬೆಳಕು. ಮೊದಲನೇ ಯುದ್ಧಕ್ಕೆ ಮೊದಲೇ ಹಾರಿಸಿದ ಬೆಳಕು. ಈ ನಲ್ಲಿ ಮೊದಲ ವಿಶ್ವ ಯುದ್ಧವನ್ನು ವೀಕ್ಷಿಸಿದ ಯುದ್ಧ ವಿರೋಧಿ ಕಹಳೆಯನ್ನು ಕ್ರಾಂತಿ ಯನ್ನು ಮೊಳಗಿಸಿದರು. ರಶ್ಯಾದ ಸೈನಿಕರು ರು ಸಾವಿರ ಗಟ್ಟಲೆ ಯುದ್ಧವ್ನ ತ್ಯಜಿಸಿ ಸ್ಸಾದರು.

ನಿನ್ನರು ಅಂದು ಹರಿಸಿದ ಬೆಳಕಿನ ಕಿರಣಗಳು ದೇ ನುಡಿಗಳಲ್ಲಿ -

ತ್ಪಾದನೆ ಮತ್ತು ಬಂಡವಾಳದ ಕೇಂದ್ರೀಕರಣ ರ ಹಂತವನ್ನು ತಲುಪಿದೆಯೆಂದರೆ ಅದು ಾಹಿ ಅಥವಾ ಏಕಸ್ವಾಮ್ಯಗಳನ್ನು ನಿರ್ಮಿಸಿದೆ. ್ಯಾಂಕುಗಳಲ್ಲಿ ಶೇಖರವಾದ ಬಂಡವಾಳ ೂ ಕೈಗಾರಿಕೆಗಳ ಬಂಡವಾಳ ರೊಡನೊಂದು ಮಿಳಿತವಾಗಿ ಅದರ ರದ ಮೇಲೆ ಹಣಕಾಸು ಬಂಡವಾಳವನ್ನು ಹಣಕಾಸಿನ ಮೇಲೆ ಸ್ವಾಮ್ಯ ಹೊಂದಿದ ಜನರ ಆಳ್ವಿಕೆಯನ್ನು ಸೃಷ್ಟಿಸಿದೆ.



ಸ್ತುಗಳ ರಫ್ತಿಗಿಂತ ಭಿನ್ನವಾದ ಬಂಡವಾಳದ ಅತೀವ ಪ್ರಾಮುಖ್ಯತೆಯನ್ನು ಪಡೆಯುತ್ತದೆ. ಪಂಚವನ್ನು ತಮ್ಮ ನಡುವೆಯೇ ಹಂಚಿಕೊಂಡ ಮ್ಯ ಬಂಡವಾಳಶಾಹಿಯ ಅಂತರ್ರಾಷ್ಟ್ರೀಯ ಗಳು ರೂಪುಗೊಂಡಿರುವುದು.

ಇಡೀ ಪ್ರಪಂಚವನ್ನು ಅತಿದೊಡ್ಡ ವಾಳಶಾಹಿ ಶಕ್ತಿಗಳು ತಮ್ಮ ನಡುವೆ ಹರಿದು ಕೊಳ್ಳುವ ಕ್ರಿಯೆ ಪೂರ್ಣವಾಗುವುದು.

ಂದು ಜಾಗತೀಕರಣ, ವಿಶ್ವ ವ್ಯಾಪಾರ ಳ ಆರ್ಥಿಕ ದಾಳಿ ಹಾಗೂ ಅಫಘಾನಿಸ್ತಾನ, ್ ಮೇಲಿನ ಯುದ್ಧ ಸಿರಿಯಾ, ಇರಾನ್, ದೇಶಗಳ ಮೇಲಿನ ಯುದ್ಧದ ಬಯಕೆ ಮೇಲೆ ಮಂಡಿಸಲಾದ ಸೂತ್ರಗಳಲ್ಲಿ ಅಡಕವಾಗಿರುವುದನ್ನು ಕಾಣಬಹುದು.




ಪುಂತಿಗೂ ಮುಂದುವರಿದು

ಪುಟ 8 ಕ್ಕೆ

ಯುದ್ಧದಾಹಿ – ಸಾಮ್ರಾಜ್ಯಶಾಹಿ

ಮಾನವ ಹಕ್ಕುಗಳ ಮೇಲೆ ದಾಳಿ ಮಾಡುವ ಯುದ್ಧ ಬೇಡ

ಇರಾಕ್‌ನ ಮೇಲೆ ಅಮೇರಿಕದ ಅತಿಕ್ರಮಣದಿಂದ ಸಾಮಾನ್ಯ ಜನತೆಯ ಬದುಕಿಗೆ ಕಾರ್ಗತ್ತಲು ಕವಿದಿದೆ. ಅಮೆರಿಕದ ಏಕಪಕ್ಷೀಯ ಕ್ರಮಕ್ಕೆ ಕಂಡುಬಂದ ವ್ಯಾಪಕ ವಿಶ್ವವ್ಯಾಪಿ ಪ್ರತಿರೋಧ ಒಂದು ಆಶಾಕಿರಣ. ಯುದ್ಧ-ವಿರೋಧಿ ಚಳುವಳಿಯಲ್ಲಿ ಕಾರ್ಮಿಕರ ಮತ್ತು ಟ್ರೇಡ್ ಯೂನಿಯನ್‌ಗಳ ಮಹತ್ವದ ಪಾತ್ರ ಇನ್ನಷ್ಟು ಖುಷಿಯ ಸಂಗತಿ. ಮೊದಲ ಮಹಾಯುದ್ಧದ ನಂತರ ಮೊದಲ ಬಾರಿಗೆ, ಯುದ್ಧ ಆರಂಭವಾಗುವ ಮೊದಲೇ ಕಾರ್ಮಿಕರು ಅಂತರ್ರಾಷ್ಟ್ರೀಯವಾಗಿ ಯುದ್ಧವಿರೋಧಿ ನಿಲುವು ತೆಗೆದುಕೊಂಡಿದ್ದಾರೆ. ಮಹತ್ವದ ಬೆಳವಣಿಗೆ ಬಗ್ಗೆ ವರದಿ.



ಯುದ್ಧವಿರೋಧಿ ಚಳುವಳಿ ಮತ್ತು ಕಾರ್ಮಿಕರು

ಶರತ್‌ಚಂದ್ರ

ಮೂವತ್ತು ವರ್ಷಗಳಿಗೂ ಹಿಂದಿನ ಮಾತು ವಿಯೆಟ್ನಾಂ ಯುದ್ಧದ ವಿರುದ್ಧ ಚಳುವಳಿ ತಾರಕಕ್ಕೇರಿದ್ದ ಕಾಲ. ನ್ಯೂಯಾರ್ಕ್‌ನ ಪ್ರಸಿದ್ಧ ವಹಿವಾಟಿನ ನಾಡಿಯಾದ ವಾಲ್‌ಸ್ಟ್ರಟ್‌ನಲ್ಲಿ ಯುದ್ಧ ವಿರೋಧಿ ಪ್ರದರ್ಶನ ನಡೆಯುತ್ತಿತ್ತು. ಅಲ್ಲಿದ್ದ ಇನ್ನೊಂದು ಕಟ್ಟಡ ಕಾರ್ಮಿಕರು ಪ್ರದರ್ಶನಕಾರರ ಮೇಲೆ ದಾಳಿ ನಡೆಸಿದರು. ಇದು ಸ್ವಭಾವಿಕವಾಗಿಯೇ ಭಾರಿ ಸುದ್ದಿ ಮಾಡಿತು. ಇಂತಹ ಘಟನೆಗಳು ಬಹಳ ನಡೆಯಲಿಲ್ಲವಾದರೂ, ಕಾರ್ಮಿಕರು ಮತ್ತು ಟ್ರೇಡ್ ಯೂನಿಯನ್ ವಿಯೆಟ್ನಾಮ್ - ಯುದ್ಧಕ್ಕೆ (ಕೆಲವೇ ಅಪವಾದ ಬಿಟ್ಟರೆ) ಪರವಾಗಿದ್ದರು ಆಗಿನ AFL-CIP (ಅಮೇರಿಕನ್ ಕೇಂದ್ರೀಯ ಟ್ರೇಡ್‌ಯೂನಿಯನ್) ಯುದ್ಧ ಪರ ಹೇಳಿಕೆ ನೀಡಿದ್ದರು. ಈ ಘಟನೆಯಿಂದ ಆಗಿನ ಅಧ್ಯಕ್ಷ ನಿಕ್ಸನ್‌ಗೆ ಎಷ್ಟು ಖುಷಿಯಾಗಿತ್ತೆಂದರೆ, ನ್ಯೂಯಾರ್ಕ್ಸ್‌ನ ಕಟ್ಟಡ ಕಾರ್ಮಿಕರ ನಾಯಕ ಪೀಟರ್ ಬ್ರೆನ್ನನ್‌ನನ್ನು ತನ್ನ ಲೇಬರ್ ಸೆಕ್ರೆಟರಿ ಆಗಿ ನೇಮಿಸಿದ. ಸಾವಿರಾರು ಸೈನಿಕರ ಹೆಣಗಳು ವಾಪಸುಬರಲು ಆರಂಭವಾದಾಗ, ಯುದ್ಧದ ಕೊನೆಯಹೊತ್ತಿಗೆ ಕಾರ್ಮಿಕರ ಧೋರಣೆ ಬದಲಾಗಲು ಆರಂಭವಾದರೂ, ಅಧಿಕೃತ ನೀತಿ ಯುದ್ಧ ಪರವಾಗಿಯೇ ಉಳಿದಿತ್ತು. ಯುದ್ಧ ವಿರೋಧಿ ಚಳುವಳಿ ಮತ್ತು ಕಾರ್ಮಿಕರ ಯೂನಿಯನ್‌ಗಳ ನಡುವೆ ಇದ್ದ ಕಂಟಕ, ಅಮೇರಿಕಾದ ಮಾತ್ರವಲ್ಲ ಇಡೀ ಜಗತ್ತಿನ ಪ್ರಗತಿಪರ ಚಳುವಳಿಗೆ ಹಾನಿ ಮಾಡಿತ್ತು. ಆದರೆ ಇಂದಿನ ಪರಿಸ್ಥಿತಿ ತದ್ವಿರುದ್ಧವಾಗಿ ಅಮೆರಿಕಾದ ಯುದ್ಧ - ವಿರೋಧಿ ಚಳುವಳಿಯಲ್ಲಿ ಮಹತ್ವದ ಪಾತ್ರ ವಹಿಸಿದೆ. ಮಾತ್ರವಲ್ಲ ನಾಯಕತ್ವವನ್ನು ವಹಿಸಿದೆ. ಅಂತರ್ರಾಷ್ಟ್ರೀಯವಾಗಿ ಕಾರ್ಮಿಕ ಚಳುವಳಿಯು ಯುದ್ಧ - ವಿರೋಧಿ ಪ್ರತಿಭಟನೆಯನ್ನು ಅಮೇರಿಕಾದ ಕಾರ್ಮಿಕ ಚಳುವಳಿ ಸಂಯೋಜಿಸಿತ್ತು.

13 ಕೋಟಿ ಕಾರ್ಮಿಕರ ಯುದ್ಧ - ವಿರೋಧಿ ನಿರ್ಣಯ

ಅಮೇರಿಕ, ಯೂರೋಪು, ಆಸ್ಟ್ರೇಲಿಯಾದಲ್ಲಿ ಇರಾಕ್ ಮೇಲೆ ಯುದ್ಧದ ಅಪಾಯ ತಲೆದೋರುತ್ತಿದ್ದಂತೆ, ಯೂನಿಯನ್‌ಗಳು ಯುದ್ಧ-ವಿರೋಧಿ ಚಳುವಳಿಗೆ ಧುಮುಕಿದವು. ಜನವರಿ 11 ರಂದು ಚಿಕಾಗೋದಲ್ಲಿ 60 ಯೂನಿಯನ್‌ಗಳ ಪ್ರತಿನಿಧಿಗಳು ಸಭೆ ಸೇರಿ US LAW (us laboil against war) ಎಂಬ ಸಂಘಟನೆಯನ್ನೇ ಕಟ್ಟಿದರು. ಯೂನಿಯನ್‌ಗಳ ನಡುವೆ USLAW ಪ್ರಚಾರ ನಡೆಸಿದರು. ಇದರ ಪರಿಣಾಮವಾಗಿ 50 ಲಕ್ಷಕ್ಕೂ ಹೆಚ್ಚು ಅಮೆರಿಕನ್ ಕಾರ್ಮಿಕರನ್ನು ಪ್ರತಿನಿಧಿಸುವ 400 ಯೂನಿಯನ್‌ಗಳು ಇರಾಕ್ ಮೇಲೆ ಅಮೇರಿಕನ್ ಯುದ್ಧ ಪ್ರಯತ್ನಗಳನ್ನು ವಿರೋಧಿಸಿ ಒಂದು ನಿರ್ಣಯವನ್ನು ಅಂಗೀಕರಿಸಿತು. USLAW ಇಂತಹ ನಿರ್ಣಯವನ್ನು ಅಂತರ್ರಾಷ್ಟ್ರೀಯವಾಗಿ ಸಾಧ್ಯವಾದಷ್ಟು ಟ್ರೇಡ್ ಯೂನಿಯನ್‌ಗಳು ಎಲ್ಲಾ ಸೇರಿ ಅಂಗೀಕರಿಸುವಂತೆ ಪ್ರಯತ್ನಿಸಿ ಸಫಲವಾಯಿತು. 53 ದೇಶಗಳ 13 ಕೋಟಿ ಕಾರ್ಮಿಕರನ್ನು ಪ್ರತಿನಿಧಿಸುವ 200 ಯುನಿಯನ್ ಕೇಂದ್ರಗಳು ಯುದ್ಧ-ವಿರೋಧಿ ನಿರ್ಣಯಕ್ಕೆ 10 ದಿನಗಳೊಳಗೆ ಸಹಿಹಾಕಿದವು. ಇದೊಂದು ಮಹತ್ವದ ಚಾರಿತ್ರಿಕ ಬೆಳವಣಿಗೆ, ಇದಲ್ಲದೆ ತಮ್ಮ ತಮ್ಮ ದೇಶಗಳಲ್ಲಿ ಯುದ್ಧ-ವಿರೋಧಿ ರ್‍ಯಾಲಿ, ಮತ್ತಿತರ ಚಳುವಳಿಗಳಲ್ಲಿ ಕಾರ್ಮಿಕರು ಮತ್ತು ಯೂನಿಯನ್‌ಗಳು ದೊಡ್ಡ ಪ್ರಮಾಣದಲ್ಲಿ ಭಾಗವಹಿಸಿದವು. ಯೂನಿಯನ್‌ಗಳ ಪಾತ್ರವೇ, ಚರಿತ್ರೆಯಲ್ಲೇ ಅತ್ಯಂತ ದೊಡ್ಡ ರ್‍ಯಾಲಿಗಳು ಆಗಲೂ ಕಾರಣ ಎಂದರೆ ತಪ್ಪಾಗಲಾರದು. AFL-CIO ಮುಖ್ಯಸ್ಥ ಸ್ವತಃ ಯುದ್ಧವಿರೋಧಿ ಪ್ರತ್ಯೇಕ ಹೇಳಿಕೆ ನೀಡಿದ್ದಲ್ಲದೆ, ಬ್ರಿಟಿಷ್ ಟ್ರೇಡ್‌ಯೂನಿಯನ್ ಕಾಂಗ್ರೆಸ್‌ನ ಜತೆ ಜಂಟಿ ಹೇಳಿಕೆ ನೀಡಿ ಯುದ್ಧವನ್ನು ವಿರೋಧಿಸಿದರು.

ಬ್ರಿಟನ್, ಫ್ರಾನ್ಸ್, ಇಟಲಿ, ಗ್ರೀಸ್, ಸ್ಪೈನ್, ಜರ್ಮನಿಗಳ ರಾಷ್ಟ್ರೀಯ ಕೇಂದ್ರೀಯ ಟ್ರೇಡ್‌ಯೂನಿಯನ್‌ಗಳು ಇಡಿಯಾಗಿ ಯುದ್ಧ-ವಿರೋಧಿ ನಿರ್ಣಯಗಳನ್ನು ಅಂಗೀಕರಿಸಿದ್ದಲ್ಲದೆ, ಚಳುವಳಿಗಳಲ್ಲಿ ವ್ಯಾಪಕವಾಗಿ ಭಾಗವಹಿಸಿದವು. ETUC ಎಂಬ ಯುರೋಪಿಯನ್ ವ್ಯಾಪಿ ಟ್ರೇಡ್‌ಯೂನಿಯನ್ ಸಂಘಟನೆ ಮತ್ತು WFTU ಎಂಬ ಪ್ರಗತಿಯ ವಿಶ್ವ ಟ್ರೇಡ್ ಯೂನಿಯನ್‌ಗಳ ಕೇಂದ್ರೀಯ ಸಂಘಟನೆ ಪ್ರತ್ಯೇಕ ಹೇಳಿಕೆಗಳಲ್ಲ ಯುದ್ಧ ವಿರೋಧಿ ಹೇಳಿಕೆ ನೀಡಿದವು.

ಯುದ್ಧ-ಪ್ರಯತ್ನಗಳಿಗೆ ಸಕ್ರಿಯ ಪ್ರತಿರೋಧ

ಪುಟ 8 ಕ್ಕೆ



"ಕಾರ್ಮಿಕರ ಹಕ್ಕುಗಳನ್ನು ಕಸಿಯುವ ಯುದ್ಧ ಬೇಡ"

ಯೂನಿಯನ್ ಕಾರ್ಯಕರ್ತರಾಗಿ ಕಾರ್ಮಿಕರ ಜೀವನ ಉದ್ಯೋಗ, ಮತ್ತು ಕಲ್ಯಾಣದ ಮೇಲೆ ಪರಿಣಾಮ ಬೀರಬಲ್ಲ ವಿಷಯಗಳ ಬಗ್ಗೆ ಅವರಲ್ಲಿ ತಿಳುವಳಿಕೆ ಮೂಡಿಸಲು ಮತ್ತು ಆ ಬಗ್ಗೆ ಅಂತರ್ರಾಷ್ಟ್ರೀಯ ಚರ್ಚೆಗಳಲ್ಲಿ ಕಾರ್ಮಿಕರ ಹಿತಾಸಕ್ತಿಗಳಿಗೆ ಅನುಕೂಲವಾದ ಅಭಿಪ್ರಾಯ ಮೂಡಿಸುವ ಜವಾಬ್ದಾರಿ ನಮ್ಮ ಮೇಲಿದೆ.

ನಾವು ಹಲವು ಕಾರಣಗಳಿಗಾಗಿ ಇರಾಕ್ ಮೇಲೆ ಯುದ್ಧವನ್ನು ವಿರೋಧಿಸುತ್ತೇನೆ......

ನಾವು ಈ ಯುದ್ಧಕ್ಕಾಗಿ ಕೋಟ್ಯಾಂತರ ಡಾಲರುಗಳನ್ನು ಪೋಲು ಮಾಡುವುದನ್ನು ವಿರೋಧಿಸುತ್ತೇವೆ. ಈ ಹಣವನ್ನು ಶಿಕ್ಷಣ, ಆರೋಗ್ಯ, ಮನೆ ಮತ್ತು ಮೂಲಭೂತ ಅಗತ್ಯಗಳಿಗಾಗಿ ಖರ್ಚು ಮಾಡಬೇಕಾಗಿತ್ತು.

ಅಮೇರಿಕ ಮತ್ತು ಇತರ ದೇಶಗಳಲ್ಲಿ ಕಾರ್ಮಿಕರು, ನಾಗರಿಕರು, ವಲಸೆಗಾರರು ಮತ್ತು ಮಾನವ ಹಕ್ಕುಗಳ ಮೇಲೆ ದಾಳಿ ಮಾಡಲು ಈ ಯುದ್ಧ ಒಂದು ನೆಪವಾಗಿರುವುದರಿಂದಲೂ ಅದನ್ನು ನಾವು ವಿರೋಧಿಸುತ್ತೇವೆ.

ವಿಶ್ವದ ಕಾರ್ಮಿಕರ ಪ್ರತಿನಿಧಿಗಳಾಗಿ, ನ್ಯಾಯಕ್ಕಾಗಿ ಹೋರಾಡುವುದರಲ್ಲಿ ನಮಗೆ ದೀರ್ಘ ಚಾರಿತ್ರಿಕ ಪಾತ್ರವಿದೆ. ಈ ಯುದ್ಧವನ್ನು ಸಕ್ರಿಯವಾಗಿ ವಿರೋಧಿಸುವಂತೆ ನಮ್ಮೆಲ್ಲಾ ಕಾರ್ಮಿಕರಿಗೆ ನಾವು ಕರೆಕೊಡುತ್ತೇವೆ. ಇಪ್ಪತ್ತೊಂದನೇ ಶತಮಾನದ ಆರಂಭದಲ್ಲಿ ಎಲ್ಲಾ ಅಂತರ್ರಾಷ್ಟ್ರೀಯ ವಿವಾದಗಳನ್ನು ಶಾಂತಿಯುತವಾಗಿ ಬಗೆಹರಿಸಲು ಮತ್ತು ಎಲ್ಲರಿಗೂ ಉತ್ತಮ ಬಾಳು ಸಾಧ್ಯವಾಗಿಸಲು ಇಡೀ ಜಗತ್ತಿನ ಜನತೆ ಜತೆ ಸೇರಿ ನಾವು ದುಡಿಯುತ್ತೇವೆ.

ಅಂತರ್ರಾಷ್ಟ್ರೀಯ ಯೂನಿಯನ್‌ಗಳ ಹೇಳಿಕೆ.


.....ಕಾಪಾಡಬೇಕಿದೆ ಜಗವನು ಇಂದು

ಪುಟ 7 ರಿಂದ

ಅವರು ಹೇಳುತ್ತಾರೆ - "ಅಂತರ್ರಾಷ್ಟ್ರೀಯ ಬಂಡವಾಳಶಾಹಿ ಕೂಟಗಳು ತಮ್ಮ ಪ್ರತಿಸ್ಪರ್ಧಿಗಳಿಗೆ ತಮ್ಮೊಂದಿಗೆ ಸ್ಪರ್ಧಿಸುವ ಎಲ್ಲಾ ಅವಕಾಶಗಳನ್ನು ತಪ್ಪಿಸಲು ಉದಾಹರಣೆಗೆ ಕಬ್ಬಿಣದ ಪ್ರದೇಶಗಳ, ಎಣ್ಣೆಯ ಪ್ರದೇಶಗಳನ್ನು ವಶಪಡಿಸಿಕೊಳ್ಳಲು ಎಲ್ಲಾ ಪ್ರಯತ್ನ ಮಾಡುತ್ತಾರೆ... ಹೆಚ್ಚು, ಹೆಚ್ಚು ಬಂಡವಾಳಶಾಹಿ ಬೆಳೆದಂತೆಲ್ಲಾ ಕಚ್ಚಾ ವಸ್ತುಗಳಿಗೆ ಹೆಚ್ಚು ಹೆಚ್ಚು ಕೊರತೆಯುಂಟಾ ಗುತ್ತದೆ. ಕಚ್ಚಾ ವಸ್ತುಗಳ ಮೂಲಗಳಿಗಾಗಿ ಹೆಚ್ಚು ತೀವ್ರವಾಗಿ ಬೇಟೆಯಾಡಲಾಗುತ್ತದೆ. ಅದಕ್ಕಾಗಿ ವಸಾಹತುಗಳನ್ನು ವಶಪಡಿಸಿಕೊಳ್ಳಲು ತೀವ್ರ ಜಗಳವಾಗುತ್ತದೆ.

ಹೀಗೆ ಇರಾಕ್ ಮೇಲಿನ ಯುದ್ಧ ಎಣ್ಣೆಗಾಗಿ, ಕಚ್ಚಾವಸ್ತುವಿನ ಮೂಲಕ್ಕಾಗಿ, ಯಾವುದೇ ಕಚ್ಚಾವಸ್ತುವಿಗಾಗಿಯೂ ಆಕ್ರಮಣಗಳು ಯುದ್ಧಗಳು ನಡೆದಿವೆ. ಜಾಗತೀಕರಣದ ಧಾಳಿಯೂ ಹಾಗೆಯೇ ಮಾರುಕಟ್ಟೆಗಳಿಗಾಗಿ ಹಾಗೂ ಕಚ್ಚಾ ವಸ್ತುಗಳು ತಮಗೆ ಕಡಿಮೆ ಬೆಲೆಯಲ್ಲಿ ಲಭ್ಯವಾಗುವುದಕ್ಕಾಗಿ.

ಇದಕ್ಕೆ ಕಾರಣ ಇಂದು ಬಂಡವಾಳಶಾಹಿ ಸಾಮ್ರಾಜ್ಯಶಾಹಿ ಸ್ವರೂಪದಲ್ಲಿ ಜಗತ್ತಿನ ಮೇಲೆಲ್ಲಾ ಅಟ್ಟಹಾಸ ನಡೆಸಿರುವುದು. ಸಾಮ್ರಾಜ್ಯಶಾಹಿ ಆರ್ಥಿಕ ರಚನೆ ಲೆನಿನ್ನರ ಕಾಲಕ್ಕಿಂತ ಇಂದು ಇನ್ನೂ ಹೆಚ್ಚು ವೇಗವಾಗಿ ಹಾಗೂ ಬೃಹತ್ ಪ್ರಮಾಣದಲ್ಲಿ ಬೆಳೆದಿದೆ. ಕಾರ್ಮಿಕರು, ರೈತರು ತಯಾರಿಸುವ, ಬೆಳೆಯುವ ವಸ್ತುವಿನ ಮಾರಾಟದ ಅಗತ್ಯಕ್ಕಿಂತ ಹಲವು ಪಟ್ಟು ಹೆಚ್ಚು ವೇಗದಲ್ಲಿ ಇಂದು ಹಣಕಾಸು ಬಂಡವಾಳ ದೇಶದಿಂದ ದೇಶಕ್ಕೆ ಸಂಚರಿಸುತ್ತಿದೆ. ಕಂಪ್ಯೂಟರ್ ಮತ್ತು ಇಂಟರ್‌ನೆಟ್‌ಗಳ ಬಲದಿಂದ ನಾಗಲೋಟದಿಂದ ಈ ಬಂಡವಾಳ ಒಂದು



ದೇಶದ ಶೇರುಮಾರುಕಟ್ಟೆಯಿಂದ ಪಲಾ
ಮಾಡಿ ಮತ್ತೊಂದು ದೇಶಕ್ಕೆ ನುಗ್ಗುತ್ತದೆ.
ದೇಶ ಕುಸಿದು ಕುಗ್ಗಿ ಹೋಗುತ್ತದೆ ಮತ್ತು
ಆರ್ಥಿಕ ಆಕ್ರಮಣಕ್ಕೆ ಒಳಗಾಗುತ್ತದೆ.

ಆದ್ದರಿಂದ ದುಡಿಯುವ ಜನತೆ ಮತ್ತು
ನೇತಾರನಾದ ಕಾರ್ಮಿಕ ವರ್ಗ ವಿಶ್ವದ ಸಾ
ಶಾಹಿ ಸ್ವರೂಪವನ್ನು ಡಾಲರ್ ಕಣ್ಣಿನ ಗ
ಧಾಳಿಯನ್ನು ಇನ್ನೂ ಆಳವಾಗಿ ಅರಿತುಕೊಳ್ಳ
ಜನರ ನಡುವೆ ತಮ್ಮ ಬದುಕಿನ ಸಂಕಷ್ಟ
ಇರಾಕ್ ಮೇಲಿನ ಯುದ್ಧಕ್ಕೆ ಇರುವ ಸ
ಗಳನ್ನು, ಜಾಗತೀಕರಣದ ಧಾಳಿ ಹಾಗೂ
ಆಕ್ರಮಣದ ಹಿಂದಿನ ಏಕಸೂತ್ರತೆಯನ್ನು ಸ್ಪ
ಅರಿತುಕೊಳ್ಳುವಂತೆ ಪ್ರಯತ್ನ ನಡೆಸಬೇಕು

ಯುದ್ಧ ವಿರೋಧಿ ಹಾಗೂ ಜಾಗತಿ
ವಿರೋಧಿ ಚಳುವಳಿಗಳು ಸಾಮ್ರಾಜ್
ವಿರೋಧಿ ಚಳುವಳಿಗಳಾಗಿ ಮತ್ತಷ್ಟು
ಮತ್ತು ವಿಸ್ತಾರವಾಗಿ ಬೆಳೆಯಬೇಕು.
ಕಣ್ಣಿನ ಸಾಮ್ರಾಜ್ಯಶಾಹಿ ಗಿಡುಗನ ಭೀ
ಕುಗ್ಗಿ ಕುಸಿಯುವಂತಾಗಬೇಕು ಇದಕ್ಕಾಗಿ
ನಿಸ್ಸಹಾಯಕತೆಗಳನ್ನು ತೊಡೆದು ದೃ
ನಿರಂತರವಾದ ಪ್ರಯತ್ನ ಬೇಕು.

ಸಿಇಟಿ : ದೃಢ ನಿಲುವು ಅಗತ್ಯ

ಪುಟ 3 ರಿಂದ

ಒದಗಿಸಿರುವುದು. ಶಿಕ್ಷಣದ ಕಾಳಸಂತೆಯಾಗಿ ಕರ್ನಾಟಕ ಮಾರ್ಪಾಡಾಗಿರುವುದರಲ್ಲಿ ಆಳಿದ ಬಹುತೇಕ ಎಲ್ಲಾ ಸರ್ಕಾರಗಳೂ ಕಾರಣವಾದರೂ ಮುಖ್ಯವಾಗಿ ಹೊಣೆಯನ್ನು ದೀರ್ಘ ಆಳಿದ ಮತ್ತು ಅಂತಹದೇ ನೀತಿಗಳನ್ನು ಪ್ರಾಯೋಗಿಕವಾಗಿ ಪ್ರತಿಪಾದಿಸಿದ ಕೀರ್ತಿ ಕಾಂಗ್ರೆಸ್ ಪಕ್ಷಕ್ಕೆ ಸಲ್ಲುತ್ತದೆ. ಹತೋಟಿ ತಪ್ಪಿ, ಅಧಿಕಾರದ ಹೂಂಕಾರ ಮಾಡುವ ಈ ಅನುದಾನ ರಹಿತವೆಂಬ ಶಿಕ್ಷಣ ಸಂಸ್ಥೆಗಳನ್ನು ಹದ್ದುಬಸ್ತಿಗೆ ತರಲು ಎಲ್ಲಾ ವ್ಯವಹಾರಗಳನ್ನು ನಿಯಂತ್ರಣಕ್ಕೆ ಒಪ್ಪಿಸುವ ಸಮಗ್ರ ಕಾನೂನನ್ನು ರಚಿಸಲು ಕೂಡಲೇ ಸರ್ಕಾರ ಮುಂದಾಗಬೇಕು. ಇನ್ನು ಮುಂದಾದರೂ ಇಂತಹ ಖಾಸಗಿ ಶಿಕ್ಷಣ ಸಂಸ್ಥೆಗಳ ಸ್ಥಾಪನೆಗೆ ಅವಕಾಶ ನೀಡಲೇಬಾರದು.

ಎಡಬಿಡಂಗಿ ಬಿಜೆಪಿ - ಪರಿವಾರ!

ನಿಜ! ಸುಪ್ರೀಂ ಕೋರ್ಟ್‌ನ ತೀರ್ಪು ಕೇವಲ ಕರ್ನಾಟಕಕ್ಕೆ ಮಾತ್ರವಲ್ಲದೇ ಇಡೀ ದೇಶಕ್ಕೆ ಅನ್ವಯವಾಗುತ್ತದೆ. ಜಾಗತೀಕರಣ - ಉದಾರೀಕರಣದ ಬಿರುಗಾಳಿಗೆ ಕೋರ್ಟ್‌ಗಳು ಸಿಲುಕುತ್ತಿರುವುದನ್ನು ಈ ಹಿಂದೆ ವಿವರಿಸಿದ್ದೇವೆ. ಆದರೆ, ಸಿಇಟಿಯಂತಹ ಪ್ರವೇಶ ವ್ಯವಸ್ಥೆಯನ್ನು ರಕ್ಷಿಸಲು ಬೇಕಾದ ಅಗತ್ಯ ಕಾನೂನು ರಚಿಸಬೇಕಾದ ಹೊಣೆ ಕೇಂದ್ರ ಸರ್ಕಾರದ್ದಾಗಿದೆ. ಇಷ್ಟೆಲ್ಲಾ ನಡೆಯುತ್ತಿದ್ದರೂ ಮುತ್ಸದ್ದಿ ಪ್ರಧಾನಿಗಳೂ ಖ್ಯಾತ ಜ್ಯೋತಿಷಿ ವಿಜ್ಞಾನಿ ಮುರಳಿ ಮನೋಹರ ಜೋಷಿಗಳಂತಹ ಶಿಕ್ಷಣ ಮಂತ್ರಿಗಳೂ ಏನೂ ನಡೆಯುತ್ತಿಲ್ಲವೆಂಬಂತೆ ಇರುವುದರ ಅರ್ಥವೇನು? ಸೆಕ್ಯುಲರಿಸಂ ವಿರುದ್ಧ ಕಿರುಚಾಡಲು, ಮತಾಂಧತೆ ಬೆಳೆಸಲು ಈ ಖಾತೆ ವಹಿಸಿಕೊಡಲಾಗಿದೆಯೇ? ಆದ್ದರಿಂದ ಕೇಂದ್ರ ಸರ್ಕಾರ ಅಗತ್ಯವಾದಲ್ಲಿ ಸಂವಿಧಾನಕ್ಕೆ ತಿದ್ದುಪಡಿ ತರಲು ಮುಂದಾಗಬೇಕು. ಜನರ ಹಿತಕಾಯಬೇಕು.

ಆದರೆ ತಮಾಷೆಯೆಂದರೆ ಬಿಜೆಪಿ - ಸಂಘ ಪರಿವಾರ-ಎಬಿವಿಪಿ ಕೃಷ್ಣ ಸರ್ಕಾರದ ಮೇಲೆ ತೋರಿಕೆಗೆ ವಿದ್ಯಾರ್ಥಿ ಹಿತರಕ್ಷಣೆಗೆ ಪತ್ರಿಕೆಗಳಲ್ಲಿ ಎಗರಾಡುವುದನ್ನು ಬಿಟ್ಟು ತಮ್ಮ ಸರ್ಕಾರದ ಮೇಲೆ ಒತ್ತಡ ತರಲು ಹೋರಾಡಲಿ! ಎಡಬಿಡಂಗಿತನ ಬಿಡಲಿ. ಇಷ್ಟೆಲ್ಲವುಗಳ ಜೊತೆಗೆ ಕೃಷ್ಣರ ಸರ್ಕಾರ ದೃಢವಾಗಿ ಕ್ರಮವಹಿಸಲು ಎಲ್ಲರೂ ಆಗ್ರಹಿಸಬೇಕಿದೆ. ಕೃಷ್ಣ ಯಾರ ಕಡೆ ಕೆಲವು ದಿನಗಳಲ್ಲಿ ಗೊತ್ತಾಗುತ್ತದೆ.

○

ಆರೋಗ್ಯ : ದರ ಏರಿಕೆ ಜ್ವರ

ಶಿಕ್ಷಣ, ಆರೋಗ್ಯ, ಸಾರ್ವಜನಿಕ ಸೇವೆ, ಸಮಾಜ ಕಲ್ಯಾಣದಂತಹ ಕರ್ತವ್ಯಗಳನ್ನು ಕೊಡವಿಕೊಂಡಿರುವ ಸರ್ಕಾರ 'ಖಾಸಗಿಯವರ' ಸೇವೆಯಲ್ಲಿ ಜನ ಜೀವನ ಸಾಗಿಸುವಂತೆ ದೂಡುತ್ತಿದೆ. ಆರೋಗ್ಯ ಕ್ಷೇತ್ರ ಸಾವಿರಾರು ಕೋಟಿ ರೂಪಾಯಿಗಳ ಆಸ್ತಿ ಹೊಂದಿ ಮೂಲಭೂತ ಸೌಕರ್ಯಗಳನ್ನು ನೀಡದೆ, ಇದು ಜನರ ಹಣ. ಜನರ ಆರೋಗ್ಯ ಕಾಯುವುದು ಸರ್ಕಾರದ ಹೊಣೆ ನಿಜ, ಆದರೆ ಇಂದಿಗೂ ಸರ್ಕಾರ ಆಸ್ಪತ್ರೆಗಳಿಗೂ ಹೋಗಿ, ಸೂಚಿಸಲಾದ ಔಷಧಿ ಖರೀದಿಯ ಸಾಮರ್ಥ್ಯವಿಲ್ಲದೇ ನರಳಿ, ಸಾವನ್ನಪ್ಪುವ ಧಾರುಣ ಘಟನೆಗಳು ಯಥೇಚ್ಛ. ಆದರೆ ಈ ವಾಸ್ತವಗಳಿಗೆ ಸರ್ಕಾರ ಮುಖಕೊಡುತ್ತಿಲ್ಲ. ಬದಲಾಗಿ ಉದಾರೀಕರಣದ ವಿಷ ಬೀಜಮಂತ್ರ ಸದಾ ಪಠಿಸುತ್ತದೆ. ಈಗಾಗಲೇ ಹಲವು ಸರ್ಕಾರಿ ಆಸ್ಪತ್ರೆಗಳನ್ನು ಖಾಸಗಿಯವರಿಗೆ ಹಂತಹಂತವಾಗಿ ಒಪ್ಪಿಸುತ್ತಿದೆ. ಪ್ರವೇಶ ಮೊದಲ್ಗೊಂಡು ಪ್ರಯೋಗಾಲಯ, ಇತ್ಯಾದಿ ಪರೀಕ್ಷೆಗಳಿಗೂ ಶುಲ್ಕ ವಿಧಿಸುತ್ತಿದೆ. ಇಷ್ಟು ಸಾಲದೆಂದು ಮತ್ತೆ ಈಗ ಶುಲ್ಕಗಳನ್ನು ಹೆಚ್ಚಿಸಲು ನಿರ್ಧರಿಸಿದೆ. ಸರ್ಕಾರದ ಕೆಲಸವೆಂದರೆ ಜನರಿಂದ ಹಣ ಸುಲಿಯುವುದೇ ಕೆಲಸ ಎಂದು ಭಾವಿಸಿದಂತಿದೆ. ಸಾರಾಯಿ ಲಾಬಿಗೆ, ಕೈಗಾರಿಕೋದ್ಯಮಿಗಳಿಗೆ, ಕಾಮಗಾರಿ ಹಗರಣಗಳಿಗೆ ನೂರಾರು ಕೋಟಿ ದಾನ ನೀಡುವ ಸರ್ಕಾರ, ತನ್ನ ನಾಗರೀಕರ ಆರೋಗ್ಯ ರಕ್ಷಣೆಗೆ ಆದ್ಯತೆಯೆಂದೆ ಭಾವಿಸಿಲ್ಲ. ಹೆಚ್ಚಿಸಿದ ಶುಲ್ಕ ಹಿಂತೆಗೆಯಬೇಕು.

ಸಿಂಘಾಲ - ಕಂಗಾಲು!

ಈ ವಾರ ಕರ್ನಾಟಕಕ್ಕೆ ಕಾಲಿಟ್ಟ ಕುಖ್ಯಾತರೆಂದರೆ ವಿಶ್ವ ಹಿಂದು ಪರಿಷತ್ ಜಗದಾಧ್ಯಕ್ಷ ಅಶೋಕ್ ಸಿಂಘಾಲ್. ಅವರಾಡಿದ ಕೆಲವು ಮಾತುಗಳನ್ನು ನೋಡಿದರೆ ಪೂರ್ಣ ಚಿತ್ತಕ್ಷೋಭೆಯಲ್ಲಿದ್ದಂತೆ ಕಾಣುತ್ತದೆ. ನಶೆ ಏರಿದ ಟಗರು ಗೋಡೆಗೋಡೆಗೂ ತಲೆ ಹೊಡೆದುಕೊಂಡು ಏದುಸಿರು ಬಿಡುತ್ತಿರುವಂತೆ ಭಾಸವಾಗುತ್ತಿದೆ!

ಅವರ ಮಾತುಗಳೋ ಕಡಿವಾಣವಿಲ್ಲದ ಕುದುರೆ ಹಾಗೆ! ಅವರು ಜಾತ್ಯಾತೀತರ ದಮನಕ್ಕೆ ಪಣ ತೊಟ್ಟರು. ದೇವಸ್ಥಾನದ ಹಣ-ವಿದೇಶಿ ಹಣ ಯಾರ ಕೈಗೆ ಸೇರಬೇಕು ಎಂಬ ಬಗ್ಗೆಯೂ ಇಣುಕಿ ಹಾಕಿದರು! ಅಸ್ಪೃಶ್ಯತೆ ಯನ್ನು ಮುಸ್ಲಿಂ ಧರ್ಮ ತಂದಿದೆಯೆಂದು ಸಂಶೋಧನಾ ಪ್ರಬಂಧ ಮಂಡಿಸಿದರು. ಕಮ್ಯುನಿಸ್ಟರ ಮೇಲೆ ಏನೂ ಮಾತನಾಡದಿದ್ದರೇ ಆದೀತೆ? ಹಿಡನ್ ಅಜೆಂಡಾದ ಖಂಡನಾ ಮುಖ್ಯ ಮಾತು ಹೇಳಿಯೋ ಹೇಳಿದರು. ಧರ್ಮರಕ್ಷಣೆಯ ಪ್ರವೀಣ್ ತೊಗಾಡಿಯಾನನ್ನು ಕೃಷ್ಣ ಜನ್ಮಸ್ಥಾನ (ಜೈಲಿಗೆ) ಕಳುಹಿಸಿದ ಬಗ್ಗೆಯೇ ನಿಜಕ್ಕೂ ಹೇಳಬೇಕಿತ್ತು. ಕಾನೂನು ಜಾರಿಗೊಳಿಸಿ ಬಂಧಿಸಿದವರನ್ನು ದೇಶ ದ್ರೋಹಿಗಳೆಂದು ಜರಿದರು. ಕೊನೆಗೆ ಬಿಜೆಪಿಯನ್ನು ಗೆಲ್ಲಿಸ ಬೇಕೆಂದು ಚುನಾವಣಾ ಪ್ರಚಾರವನ್ನು ಆರಂಭಿಸಿದರು.

ಸಿಂಘಾಲ್‌ರು ಇಷ್ಟು ವ್ಯಗ್ರವಾದುದಕ್ಕೆ ಕಾರಣ ಹುಡುಕಲು ಹೆಚ್ಚು ಶ್ರಮವೇನೂ ಬೇಕಿಲ್ಲ. ತ್ರಿಶೂಲವೆಂದು ಹರಿತವಾದ ಮಾರಕಾಸ್ತ್ರಗಳನ್ನು ವಿತರಿಸುತ್ತಿದ್ದ ತಾನು ಧರ್ಮ ರಕ್ಷಣೆಯ ಹೊದಿಕೆಯಲ್ಲಿ ಏನೂ ಮಾಡಿದರೂ ನಡೆಯುತ್ತದೆಂದು ಬೀಗುತ್ತಿದ್ದ ತೊಗಾಡಿಯನನ್ನು ರಾಜಸ್ತಾನದಲ್ಲಿ ಬಂಧಿಸಿ ಜೈಲಿಗಟ್ಟಿದ್ದು, ಅವರ ವಿರುದ್ಧ ಪ್ರತಿಭಟಿಸಿ ಎಂದು ಬೊಬ್ಬೆ ಹೊಡೆದರೂ ಅಷ್ಟಾಗಿಜನ ಸ್ಪಂದಿಸಲಿಲ್ಲ. 'ಬಂದ್'ಗಳು ಆಗಲಿಲ್ಲ. ಮಧ್ಯಪ್ರದೇಶ, ರಾಜಸ್ತಾನದಲ್ಲಿಯೂ ಕೆಲವೆ ದಿನಗಳ ಹಿಂದೆ ವಿ.ಹಿಂ.ಪ. ನಾಯಕರನ್ನು ಹೀಗೆಯೇ ಜೈಲಿಗಟ್ಟಲಾಗಿತ್ತು. ಈಗೀಗ ಲಾಲೂ ಲಾಠಿ ಚಳುವಳಿಗೆ ಕರೆ ನೀಡಿದ್ದಾರೆ. ಒಟ್ಟಾರೆ ದೇಶದಲ್ಲಿ, ಕರ್ನಾಟಕದಲ್ಲಿ ಪ್ರತಿರೋಧ ಬೆಳೆಯುತ್ತಿದೆ. ಇದರಲ್ಲಿ ಸೆಕ್ಯುಲರ್ ಶಕ್ತಿಗಳು ಮುಂಚೂಣಿಯಲ್ಲಿವೆ. ಕಮ್ಯುನಿಸ್ಟರು ದೃಢವಾಗಿ ನಿಂತಿದ್ದಾರೆ - ಎಲ್ಲಾ ಹಂತಗಳಲ್ಲಿಯೂ ಉತ್ತರಿಸುತ್ತಿದ್ದಾರೆ.

ಸದ್ಯ ಸಿಂಘಾಲು - ಕಂಗಾಲು, ಹಾಕದಿರಲಿ ಈ ಕಡೆ ಕಾಲು.

....ಯುದ್ಧ ಬೇ

ಪುಟ 7 ರಿಂದ

ಯುದ್ಧ ಆರಂಭವಾದ ಮೇಲೂ
ಚಳುವಳಿ ಕೈಚೆಲ್ಲಿ ಕೂರಲಿಲ್ಲ. ಅಮೇರಿಕ
ಬ್ರಿಟನ್ ಸರ್ಕಾರಗಳ ಯುದ್ಧ ಪ್ರಯತ್ನಗಳಿ
ಪ್ರತಿರೋಧ ತೋರಿದವು. ಇಟಲಿ, ಜ
ಗ್ರೀಸ್, ಸ್ಪೈನ್‌ನ ಕೇಂದ್ರ ಟ್ರೇಡ್ ಯೂನಿ
ಸಾರ್ವತ್ರಿಕ ಮುಷ್ಕರ ನಡೆಸಿದವು. ಅಲ್ಲ
ಮುಖ್ಯವಾಗಿ ಸಾಗಾಣಿಕೆ (ರೈಲು, ಬಂದರು,
ಕಾರ್ಮಿಕರು ಯುದ್ಧ ಸಾಮಗ್ರಿಗಳ ಸ
ಮಾಡಲು ನಿರಾಕರಿಸಿದರು.
ಯುರೋಪಿಯನ್ ಒಕ್ಕೂಟದ ಸಭೆ ಗ್ರಿ
ಹಾಗೂ ಗ್ರೀಸ್‌ನ ಟ್ರೇಡ್‌ಯೂನಿಯನ್ ಕೇ
ಪ್ರತಿಭಟನೆ ಸಂಘಟಿಸಿತು. ಯುದ್ಧದ
ಕಾರ್ಮಿಕರ ಹಕ್ಕುಗಳ ಮೇಲೆ
ಮಾಡುವುದರಲ್ಲೂ ಯೂನಿಯ
ನೇತೃತ್ವವಹಿಸಿದವು. ಇಂತಹ ಹಲವು ರಿ
ಯುದ್ಧ ಪ್ರಯತ್ನಗಳಿಗೆ ಸಕ್ರಿಯ ಪ್ರ
ತೋರಿದವು. ಕೊರಿಯಾದಲ್ಲಿ ಯುದ್ಧ-
ಚಳುವಳಿಯಲ್ಲಿ ನಾಯಕತ್ವದ ಸ್ಥಾನದ
ಇರಾಕ್ ಯುದ್ಧಕ್ಕೆ ಕೊರಿಯಾದ ತುಕಡಿ ಕ
ತಡೆಯಲು ಪಾರ್ಲಿಮೆಂಟಿಗೆ
ಮುತ್ತಿಗೆಯಲ್ಲೂ ಯೂನಿಯನ್‌ಗಳು ನ
ವಹಿಸಿದ್ದವು. ಕೋರಿಯಾದ
ಯೂನಿಯನ್‌ಗಳು ತಮ್ಮ ಸದಸ್ಯರ
ಸ್ಕೂಲುಗಳಲ್ಲಿ ವ್ಯಾಪಕ ಯುದ್ಧವಿರೋಧಿ
ಮಾಡಿದರು. ಯುದ್ಧದ ಪರಿಣಾಮವಾ
ಕಂಪನಿಗಳಲ್ಲಿ ಕಾರ್ಮಿಕರನ್ನು ವಜಾ ಮಾ
ವಿರುದ್ಧವೂ ಚಳುವಳಿ ನಡೆದಿದೆ.

ಒಟ್ಟಾರೆಯಾಗಿ ಹೇಳುವುದಾದರೆ
ವಿರೋಧವಾಗಿ ಅಂತರ್ರಾಷ್ಟ್ರೀಯವಾಗಿ ಕಾ
ಪ್ರಜ್ಞಾಪೂರ್ವಕವಾಗಿ ಸಂಯೋ
ಸಕ್ರಿಯವಾಗಿ ವಿರೋಧಿಸಿದವು. ಅತ್ಯಂತ
ಬೆಳವಣಿಗೆ ಇನ್ನು ಮೇಲೆ ನಿಲ್ಲದ
ಮಾಡಬೇಕೆಂದಿರುವ ಬುಶ್ ನೀತಿಯ ಹಿ
ಕಾರ್ಮಿಕರ ಪ್ರತಿರೋಧ ಅತ್ಯಂತ ಆ
ಬೆಳವಣಿಗೆ. ಕಾರ್ಮಿಕರು ಪುನಃ ವಿಶ್ವ
ಭವಿಷ್ಯ ರೂಪಿಸುವ ಪ್ರಕ್ರಿಯೆಯಲ್ಲಿ
ಪಾತ್ರವಹಿಸುತ್ತಾರೆ ಎಂಬ ಭರವಸೆ ಮ

ಇತಿಹಾಸದ ಪುಟಗಳಿಂದ

ಯುರೋಪನ್ನು ತನ್ನ ಬೂಟುಗಾಲಿನಡಿ ಬೀಳಿಸಿದ ಫ್ಯಾಸಿಸ್ಟ್ ಹಿಟ್ಲರ್, ಸೋವಿಯತ್ ದೇಶದ ಮೇಲೆ ದಾಳಿಯಿಟ್ಟ... ಸ್ಟಾಲಿನ್ ಗ್ರಾಡ್‌ನಲ್ಲಿ ಭೀಕರ ಕದನ ನಡೆಯಿತು. ಕೆಂಪು ಸೇನೆ – ಮಹಾನ್ ದೇಶಪ್ರೇಮಿ ಜನತೆ ನಾಝಿ ಸೈನ್ಯಕ್ಕೆ ಮಣ್ಣು ಮುಕ್ಕಿಸಿದ್ದು ಇತಿಹಾಸದಲ್ಲೇ ದಾಖಲಾದ ತುಂಬಾ ಮಹತ್ವದ ರೋಮಾಂಚಕಾರಿ ಯುದ್ಧದ ಘಟನೆ. ಬಾಗ್ದಾದ್‌ನಲ್ಲೂ ಹೀಗಾದೀತೆ ಎಂದು ನಿರೀಕ್ಷಿಸಲಾಗಿತು!. ಆದರೆ ಏಕಾಗಲಿಲ್ಲ?

ಎರಡನೇ ಮಹಾಯುದ್ಧದ ದಿಕ್ಕನ್ನೇ ಬದಲಾಯಿಸಿದ

ಸ್ಟಾಲಿನ್ ಗ್ರಾಡ್ ಕದನ

ಸ್ಟಾಲಿನ್ ಗ್ರಾಡ್-ಹಿಂದಿನ ಸೋವಿಯತ್ ಒಕ್ಕೂಟದ ದಕ್ಷಿಣ ಭಾಗದಲ್ಲಿರುವ ನಗರ - ಅಲ್ಲಿನ ಮೊದಲ ಪಂಚವಾರ್ಷಿಕ ಯೋಜನೆಯ ಮೊದಲ ವರ್ಷದಲ್ಲಿ ಕಟ್ಟಿದ ನಗರ-ವೋಲ್ಗಾ ನದಿಯ ದಡದಲ್ಲಿದೆ. ಈಗ ವೋಲ್ಗೋಗ್ರಾಡ್ ಆಗಿದೆ.

ಆಗಸ್ಟ್ 23, 1942, ಸಂಜೆ 6 ಗಂಟೆ. ಒಂದು ಸಾವಿರ ಹಿಟ್ಲರನ ಜರ್ಮನ್ ವಿಮಾನಗಳು ನಗರದ ಮೇಲೆ ಬಾಂಬ್‌ಗಳ ಸುರಿಮಳೆ ನಡೆಸಿದವು. ವಿನಾಶಲೀಲೆ ಆರಂಭವಾಯಿತು. 600 ವಿಮಾನಗಳ ಒಂದು ಧಾಳಿಯಲ್ಲೇ 40,000 ನಾಗರೀಕರು ಕೊಲ್ಲಲ್ಪಟ್ಟರು. ಹಿಟ್ಲರ್ ತನ್ನ ಒಬ್ಬ ನೆಚ್ಚಿನ ಸೇನಾಧಿಪತಿ ಫಾನ್ ಪೌಲೋಸ್ ನೇತೃತ್ವದಲ್ಲಿ ಆರು ಲಕ್ಷ ಸೈನಿಕರನ್ನು ಈ ನಗರವನ್ನು ವಶಪಡಿಸಿಕೊಳ್ಳಲು-ಕಳಿಸಿದ್ದ. ಇಡೀ ಯುರೋಪನ್ನು ತನ್ನ ಬೂಟುಗಾಲಿನಡಿ ಬೀಳಿಸಿದ ಮೇಲೆ ಹಿಟ್ಲರ್ ಜೂನ್ 22, 1941 ರಂದ ಸೋವಿಯತ್ ಒಕ್ಕೂಟದ ಮೇಲೆ ದಾಳಿಯಿಟ್ಟಿದ್ದ. ಡಿಸೆಂಬರ್ 1941 ರ ವೇಳೆಗೆ ನಾಝಿ ಸೇನೆ ಮಾಸ್ಕೋದಿಂದ 40 ಕಿ.ಮಿ. ದೂರದಲ್ಲಿತ್ತಷ್ಟೇ. ಅತ್ತ ಉತ್ತರದಲ್ಲಿ ಲೆನಿನ್ ಗ್ರಾಡ್ ಮೇಲೂ ಧಾಳಿ ನಡೆಸಿದ. ಇಲ್ಲಿ ದಕ್ಷಿಣದಲ್ಲಿ ಸ್ಟಾಲಿನ್ ಗ್ರಾಡನ್ನು ವಶಪಡಿಸಿಕೊಂಡು ಸೋವಿಯತ್ ಒಕ್ಕೂಟದ ಜನತೆಯ ಮನೋಸ್ಥೈರ್ಯವನ್ನು ಮುರಿಯುವುದು ಹಿಟ್ಲರನ ಉದ್ದೇಶವಾಗಿತ್ತು. ಜಗತ್ತನ್ನು ಬೋಲ್ಶೆವಿಸಂ (ಅಂದರೆ ಕಮ್ಯುನಿಸಂ) ನಿಂದ ಮುಕ್ತಗೊಳಿಸುವುದು ತನ್ನ ಉದ್ದೇಶ ಎಂದು ಆತ ಸಾರಿದ್ದ.

ಮೊದಲ ದಿನವೇ ನಾಝಿ ಸೇನೆ ಸ್ಟಾಲಿನ್ ಗ್ರಾಡ್‌ನ ಉಪನಗರಗಳ ಬಳಿ ಬಂದಿತು. ಮೊದಲ ಧಾಳಿಯನ್ನು ಸೋವಿಯತ್ ಸೇನಾಪಡೆಯ ಒಂದು ತುಕಡಿ ಮತ್ತು ಹತ್ತಿರದ ಕಾರ್ಖಾನೆಯ ಕಾರ್ಮಿಕರು ಪ್ರತಿರೋಧಿಸಿದದರು. ಮುಂದೆ ಉದ್ದಕ್ಕೂ ನಾಝೀ ಪಡೆಗಳು ಇಂತಹ ಪ್ರತಿರೋಧವನ್ನು ನಗರದಲ್ಲಿ ಎಲ್ಲೆಲ್ಲೂ ಎದುರಿಸಬೇಕಾಯಿತು - ಕೆಂಪು ಸೇನೆಯ ಸೈನಿಕರಿಗೆ ದೇಶಪ್ರೇಮಿ ಜನಸಾಮಾನ್ಯರು ಬೆಂಬಲವಾಗಿ ನಿಂತರು. ಯುರೋಪನ್ನು ಸಲೀಸಾಗಿ ದಾಟಿ ಬಂದ ನಾಝೀ ಸೇನಾಪತಿಗಳಿಗೆ ಇದು ಹೊಸ ಅನುಭವವಾಗಿತ್ತು. "ಇಲ್ಲಿ ನಾವು ಕ್ರಮಿಸಿದ ದೂರವನ್ನು ಮೈಲುಗಳಲ್ಲಲ್ಲ, ಗಜಗಳಲ್ಲಿ ಅಳೆಯಬೇಕಾಗಿದೆ" ಎಂದೊಬ್ಬ ಸೇನಾಪತಿ ಉದ್ಗರಿಸಿದನಂತೆ. ಭಾರೀ ಸಂಖ್ಯೆಯಲ್ಲಿ ನಾಝಿ ಪಡೆಗಳು ಧಾಳಿಯಿಟ್ಟರೂ ಪ್ರತಿರೋಧ ಎಷ್ಟು ತೀವ್ರವಾಗಿತ್ತೆಂದರೆ ಮಾಲುಯೇವ್ ದಿಣ್ಣೆ ಎಂಬ ಸ್ಥಳ ಈ ಕದನದಲ್ಲಿ ಎಂಟು ಬಾರಿ ಕೈ ಬದಲಾಯಿಸಿತು - ಒಮ್ಮೆ ನಾಝಿಗಳ ಕೈ ವಶವಾದರೆ, ಇನ್ನೊಮ್ಮೆ ಕೆಂಪುಸೇನೆಯ ಕೈವಶ. ಒಂದು ಮನೆಯನ್ನು ಪಾವ್ಲೊವ್ ಎಂಬಾತನ ನೇತೃತ್ವದಲ್ಲಿ ಕೆಂಪುಸೇನೆಯ ಒಂದೇ ಪ್ಲೆಟೂನ್ ತಮ್ಮನ್ನು ಸುತ್ತುವರಿದ ಜರ್ಮನ್ ಪಡೆಗಳಿಂದ ರಕ್ಷಿಸುತ್ತಾ 59 ದಿನಗಳ ಕಾಲ ಹೊರಗಿನಿಂದ ಕೆಂಪು ಸೇನೆಯ ನೆರವು ಬರುವವರೆಗೂ ಕಾದಾಡಿತು. ಇದೀಗ ಪಾವ್ಲೋವ್‌ರ ಮನೆಯೆಂದು ಹೆಸರಾಗಿದೆ. ಈ ಕದನದಲ್ಲಿ ಇಂತಹ ಉದಾಹರಣೆಗಳು ಹಲವಾರು. ವಾಸಿಲಿ ಝೈತ್ಸೆವ್ ಎಂಬ ಸ್ನೈಪರ್ (ಮರೆಯಲ್ಲಿ ನಿಂತು ದೂರದಲ್ಲಿರುವ ವೈರಿಗೆ ಗುಂಡು ಹೊಡೆಯುವಾತ) 242 ಜರ್ಮನರನ್ನು ಕೊಂದ ದಾಖಲೆ ನಿರ್ಮಿಸಿದ್ದಾನೆ.

ಜರ್ಮನ್ ವಿಮಾನ ಪಡೆ ಪ್ರತಿದಿನ ಧಾಳಿಗಳನ್ನು ಮಾಡುತ್ತಿತ್ತು. ಜರ್ಮನ್ ಸೇನೆ ನಗರವನ್ನು ಸುತ್ತುವರಿದಿತ್ತು. ದೇಶದ ಬೇರೆಡೆಯಿಂದ ನೆರವು ಬರಬೇಕಾದರೆ ವೋಲ್ಗಾ ನದಿಯನ್ನು ದಾಟಿ, ಜರ್ಮನ್ ಗುಂಡು ಧಾಳಿಗಳನ್ನು ಭೇದಿಸಿ ಬರಬೇಕಾಗಿತ್ತು. ಕೆಲವೊಂದು ದಿನಗಳಲ್ಲಿ ವೋಲ್ಗಾ ನದಿ ಸೈನಿಕರ ರಕ್ತದಿಂದ ಕೆಂಪಾಗುತ್ತಿತ್ತಂತೆ. ದಿನಗಟ್ಟಳೆ ಸತತವಾಗಿ ಕದನ ನಡೆಯಿತು. ಕೆಂಪು ಸೇನೆ ಬಹಳ ಕಡಿಮೆ ಸಂಖ್ಯೆಯಲ್ಲಿದ್ದರೂ, ನಾಝೀ ಪಡೆಗಳು ಶೇ 80 ನಗರವನ್ನು ಆಕ್ರಮಿಸಿದ್ದರೂ ಕದನ ಮುಂದುವರೆಯಿತು. ಕೆಲವೆಡೆ ಬೀದಿ-ಬೀದಿಗಳಲ್ಲಿ ಮುಖಾಮುಖಿಯಾಗಿಯೇ ಕಾದಾಟ ನಡೆಯಿತು. ಚಾಕು-ಚೂರಿ ಬಾಯೆನೆಟ್‌ಗಳಿಂದಲೇ ನಡೆಯಿತು. ನಗರದಲ್ಲಿ ಹೆಣಗಳ ರಾಶಿಗಳು. 'ಸ್ಟಾಲಿನ್ ಗ್ರಾಡ್' ಈಗ ಒಂದು ನಗರವಲ್ಲ. ಹಗಲಿನಲ್ಲಿ ಅದೊಂದು ಸುಡುವ ಜ್ವಾಲೆಯ ಮೋಡ, ಕಣ್ಣು ಕುರುಡಾಗಿಸುವ ಹೊಗೆ, ಒಂದು ಬೃಹತ್ ಕುಲುಮೆ... ಪ್ರಾಣಿಗಳು



ನರಕದಿಂದ ಓಡಿ ಹೋಗುತ್ತವೆ, ಗಟ್ಟಿ ಕಲ್ಲುಗಳೂ ಸಹಿಸಲಾರವು. ಆದರೆ ಮನುಷ್ಯರು ಮಾತ್ರ ಸಹಿಸಿ ನಿಂತಿದ್ದಾರೆ''- ಇದು ಒಬ್ಬ ಜರ್ಮನ್ ಸೇನಾಧಿಕಾರಿಯ ಉದ್ಗಾರ. ಈ ಸ್ಥಿತಿ ಮೂರು ತಿಂಗಳ ಕಾಲ ಮುಂದುವರೆಯಿತು.

ಈ ನಡುವೆ ಹಲವು ಘಟನೆಗಳು ನಡೆದವು. ಸ್ಟಾಲಿನ್ ಹಾಗೂ ಜನರಲ್ ಝುಕೊವ್ ನೇತೃತ್ವದಲ್ಲಿ ಸೋವಿಯತ್ ಉನ್ನತ ಮುಖಂಡತ್ವ ಒಂದು ಹೊಸ ಸೇನೆಯನ್ನು, ಹೊಸ ಶಸ್ತ್ರಾಸ್ತ್ರಗಳು, ಹೊಸ ಸುಧಾರಿತ ಟ್ಯಾಂಕುಗಳು ಹಾಗೂ ಫಿರಂಗಿಗಳೊಂದಿಗೆ ಸಜ್ಜುಗೊಳಿಸುತ್ತಿತ್ತು. ಅತ್ತ ಹೊರಗಿನ ಕೆಲವು ಬೆಳವಣಿಗೆಗಳು ಜರ್ಮನ್‌ರ ಮೇಲೂ ಒತ್ತಡಗಳನ್ನು ತಂದವು. ಈ ಸನ್ನಿವೇಶವನ್ನು ಹಾಗೂ ನಾಝಿ ಪಡೆಗಳ ಕೆಲವು ದೌರ್ಬಲ್ಯಗಳನ್ನು ಬಳಸಿಕೊಂಡು ಜನರಲ್ ಝುಕೊವ್ ತಮ್ಮ ಹೊಸ ಪಡೆಗಳನ್ನು ಹರಿಯಬಿಟ್ಟರು. ಒಂದು ಲಕ್ಷ ಸೈನಿಕರು, 14000 ಭಾರಿ ಫಿರಂಗಿಗಳು, 1000 ಟ್ಯಾಂಕುಗಳು, 1300 ವಿಮಾನಗಳು ಸಮರಕ್ಕಿಳಿದವು. ಜತೆಗೆ ಚಿಮ್ಮುಟ ಆಂದೋಲನ (Pincer movement) ಎಂಬ ಹೊಸ ಬಗೆಯ ತಂತ್ರದ ಮೂಲಕ ನಾಝಿ ಪಡೆಗಳನ್ನು ಚಿಮ್ಮುಟದ ರೀತಿಯಲ್ಲಿ ಹಿಂದಿನಿಂದ ಆವರಿಸಿ ಹಿಡಿದು ಚಚ್ಚಿ ಹಾಕುವ ಕೆಲಸ ಆರಂಭವಾಯಿತು. ಕೆಲವೇ ದಿನಗಳಲ್ಲಿ 2 ಲಕ್ಷ 80 ಸಾವಿರ ಜರ್ಮನ್ ಪಡೆಗಳನ್ನು ಎಲ್ಲಾ ಕಡೆಯಿಂದಲೂ ಕೆಂಪು ಸೇನೆ ಸುತ್ತುವರೆಯಿತು. ಅವರಿಗೆ ಹೊರಗಿನಿಂದ ಸರಬರಾಜು ಬರದಂತೆ ತಡೆಯಿತು. ಹಸಿವಿನಿಂದ ತತ್ತರಿಸುತ್ತಿದ್ದ ತನ್ನ ಸೈನಿಕರ ಪರಿಸ್ಥಿತಿಯನ್ನು ನೋಡಿ ಜರ್ಮನ್ ಪೌಲೋಸ್ ಹಿಂದಕ್ಕೆ ಸರಿಯಲು ಹಿಟ್ಲರನ ಅನುಮತಿ ಕೇಳಿದನಂತೆ. ಆದರೆ ಹಿಟ್ಲರ್‌ಗೆ ಇದು ಪ್ರತಿಷ್ಠೆಯ ಪ್ರಶ್ನೆಯಾಗಿತ್ತು.

ಅನಗತ್ಯ ರಕ್ತಪಾತವನ್ನು ತಡೆಯಲು ಸೋವಿಯತ್ ಸೇನೆ ಜನವರಿ 8, 1943 ರಂದು ಜರ್ಮನ್ ಪಡೆಗಳಿಗೆ ಶರಣಾಗಲು ಎರಡು ದಿನಗಳ ಅವಧಿ ನೀಡಿತು. ಪೌಲೋಸ್ ಸಿದ್ಧನಿದ್ದ, ಆದರೆ ಹಿಟ್ಲರ್ ಬಿಡಲಿಲ್ಲ. ಜನವರಿ 10 ರಂದು ಕೆಂಪು ಸೇನೆ ತನ್ನ ಅಂತಿಮ ಕಾರ್ಯಾಚರಣೆ ಆರಂಭಿಸಿತು. 23 ದಿನಗಳ ಕಠಿಣಸಮರ ಸಂಪೂರ್ಣವಾಗಿ ನಾಝಿಗಳ ಕಥೆ ಮುಗಿಸಿತು. ಶರಣಾಗಬಾರದೆಂದು ಹಿಟ್ಲರ್ ಜನರಲ್ ಪೌಲೋಸ್‌ಗೆ ಮಾರ್ಷಲ್ ಪೌಲೋಸ್ ಆಗಿ ಬಡ್ತಿ ನೀಡಿದ್ದ, ಏಕೆಂದರೆ ಜರ್ಮನ್ ಇತಿಹಾಸದಲ್ಲಿ ಯಾವುದೇ ಮಾರ್ಷಲ್ ಹುದ್ದೆಯ ಸೇನಾಧಿಪತಿ ಶರಣಾಗಿರಲಿಲ್ಲವಂತೆ. ಆದರೆ ಅದೂ ನಡೆದು ಹೋಯಿತು. ಫೆಬ್ರವರಿ 2, 1943 ರಂದು ಆತ ತನ್ನ ಧಾಳಿಕೋರ ಪಡೆಗಳೊಂದಿಗೆ ಶರಣಾದ. 168 ದಿನಗಳ ಸ್ಟಾಲಿನ್ ಗ್ರಾಡ್ ಕದನ ಮುಗಿಯಿತು. ಅದರೊಂದಿಗೇ ಎರಡನೇ ಮಹಾಯುದ್ಧದ ದಿಕ್ಕೂ ಬದಲಾಯಿತು. ಅಲ್ಲಿಂದ ಆರಂಭವಾದ ಕೆಂಪುಸೇನೆಯ ವಿಜಯಯಾತ್ರೆ ಕೊನೆಗೊಂಡದ್ದು ಮೇ 9, 1945 ರಂದು ಬರ್ಲಿನ್‌ನ ರೈಕ್ ಸ್ಟಾಗ್ ಮೇಲೆ ಕೆಂಬಾವುಟವನ್ನು ಹಾರಿಸಿದಾಗಲೇ.

ಡಾನ್ ಮತ್ತು ವೋಲ್ಗಾ ನದಿಯ ಬಯಲು 1 ಲಕ್ಷ 47 ಸಾವಿರ ನಾಝಿ ಪಡೆಗಳ ಸದಸ್ಯರ ಸಮಾಧಿಯಾಯಿತು. ಮಾರ್ಷಲ್ ಪೌಲೋಸ್ ಸೇರಿದಂತೆ 1 ಲಕ್ಷ 10 ಸಾವಿರ ನಾಝಿಗಳು ಬಂಧಿಗಳಾದರು.

ಈ ಐತಿಹಾಸಿಕ ಸ್ಟಾಲಿನ್ ಗ್ರಾಡ್ ಕದನ ನಡೆದು ಸರಿಯಾಗಿ 60 ವರ್ಷಗಳ ನಂತರ ಬಾಗ್ದಾದ್‌ನಲ್ಲಿ ಅದು ಮರುಕಳಿಸಬಹುದು ಎಂಬ ನಿರೀಕ್ಷೆ ಹಲವರಲ್ಲಿತ್ತು. ಅಮೆರಿಕಾ-ಬ್ರಿಟನ್ನಿನ ಆಕ್ರಮಣಕ್ಕೆ ಒಳಗಾದ ಇರಾಕಿನ ದಕ್ಷಿಣ ನಗರಗಳಾದ ಅನ್ ನಸೀರಿಯಾ, ಬಸ್ರಾ, ಕರ್ಬಲಾ, ಅನ್ ನಜಾಫ್ ಹಾಗೂ ಉತ್ತರ ಕುರ್ದಿಶ್ ಹಾಗೂ ಮೊಸುಲ್ ನಲ್ಲೂ ಕಂಡು ಬಂದ ತೀವ್ರ ಪ್ರತಿರೋಧ, ಅವನ್ನೂ ಕೈವಶ ಮಾಡಿಕೊಳ್ಳುವಲ್ಲಿ ಧಾಳಿಕೋರರ ವಿಫಲತೆ ಈ ನಿರೀಕ್ಷೆಯನ್ನು ಮೂಡಿಸಿತ್ತು. ಆದರೆ ಹಾಗಾಗಲಿಲ್ಲ. ಏಕೆ?

"ಒಂದು ಅಭಿವೃದ್ಧಿ ಹೊಂದಿದ ಕೈಗಾರಿಕೆ, ಸಾಮೂಹಿಕ ಕೃಷಿ ವ್ಯವಸ್ಥೆ, ಸಾರ್ವತ್ರಿಕ ಸಾಕ್ಷರತೆ, ಸೋವಿಯತ್ ದೇಶಗಳ ಐಕ್ಯತೆ - ಸಮರಸತೆ, ಸಮಾಜವಾದಿ ಪ್ರಭುತ್ವದ ಭೌತಿಕ, ನೈತಿಕ ಶಕ್ತಿ, ಜನಗಳ ಉನ್ನತ ದೇಶಪ್ರೇಮ ಮತ್ತು ಲೆನಿನ್ ವಾದಿ ಪಕ್ಷದ ನೇತೃತ್ವ, ಮುಂಚೂಣಿ ಮತ್ತು ಹಿಂಗಾವಲನ್ನು ಸಮಗ್ರವಾಗಿ ಬೆಸೆದದ್ದು ಇವೆಲ್ಲಾ ಸೋವಿಯತ್ ಒಕ್ಕೂಟದ ರಕ್ಷಣೆಯ ಸಾಮರ್ಥ್ಯವನ್ನು ಕಟ್ಟಿದ್ದವು. ಇದೇ ಫ್ಯಾಸಿಸಂ ವಿರುದ್ಧ ಮಹಾನ್ ವಿಜಯದ ಪ್ರಧಾನ ಅಂಶವಾಯಿತು" ಎಂದು ಈ ಮಹಾ ಸಮರದ ಮಹಾ ಸೇನಾನಿ ಮಾರ್ಷಲ್ ಜಾರ್ಜಿ ಝುಕೊವ್ ಹೇಳಿದ್ದಾರೆ. ಬಾಗ್ದಾದ್‌ನ ವಿಫಲತೆಯನ್ನು ವಿಶ್ಲೇಷಿಸಲು ಕೂಡಾ ಈ ಉದ್ಗಾರ ನೆರವಾಗಬಹುದೇ?

■



ಯುದ್ಧವೆಂದರೆ ?....

ಯುದ್ಧವೆಂದರೆ
ಈ ಮಕ್ಕಳಿಗೆ ತಿಳಿಯುವುದೇ ಇಲ್ಲ
ಹಾಡುತ್ತ ಕುಣಿಯುತ್ತ ನೆಗೆಯುತ್ತ
ಅಜ್ಜನ ಮಧ್ಯಾಹ್ನದ
ನಿದ್ದೆಯ ಮೇಲೆ ಹತ್ತಿ ಇಳಿದು
ಡಂಗನೆ ಹಾರಿ
ಮಧ್ಯಾಹ್ನವನ್ನೇ ನಿಲ್ಲಿಸಿ ನಿರಾತಂಕ ನಗುವ
ಈ ಮಕ್ಕಳಿಗೆ
ಯುದ್ಧವೆಂದರೆ ತಿಳಿಯುವುದೇ ಇಲ್ಲ.

ನೆಲ-ಮುಗಿಲಿಗೆ
ಭುಗಿಲೆದ್ದು ಹೊಗೆ
ಎಲ್ಲೆಲ್ಲು ಕ್ಷಿಪಣಿ ಬಾಂಬುಗಳ ನಗೆ
ತೀರದ ಅಹಂಕಾರ, ಉನ್ಮಾದ
ರಕ್ತ ಹೊಳೆ ಹರಿದು
ಹೆಣಗಳು ಬಣವೆ ಬಿದ್ದು
ಮನುಕುಲಕ್ಕೆ ಮನುಕುಲವೆ ಮೊರೆ
ಇಟ್ಟರೂ
ಯುದ್ಧ ಮುಗಿಯುವುದಿಲ್ಲ.
ಯುದ್ಧವೆಂದರೆ ಇಷ್ಟೇ ಅಲ್ಲ.

ಲಂಗ ಹೊಲಿದು ಜಾಕೀಟು ತೊಡಿಸಿ
ಮೇಲು ಹೊದಿಕೆಯ ಸರಿಪಡಿಸಿ
ಕೈಕಾಲು ಜೋಡಿಸಿ
ಹುಡುಗಿಯೆಂಬೋ ಗೊಂಬೆಗೆ
ಜೀವತುಂಬಿ;
ಹಗಲೆಂಬೋ ಹಗಲು
ರಾತ್ರಿಯೆಂಬೋ ರಾತ್ರಿಗಳ
ಕಥೆಯ ಹಾಸಿ ಹೊದ್ದರೂ
ಆಟ ಮುಗಿಯುವುದಿಲ್ಲ;
ಆಟವೆಂದರೆ ಇಷ್ಟೇ ಅಲ್ಲ

ಗಾಳಿಯಲ್ಲಿ ನೀರಿನಲ್ಲಿ
ಮಣ್ಣಿನಲ್ಲಿ ಬೆಂಕಿಯಲ್ಲಿ
ತಲೆತಲಾಂತರಗಳ ವಂಶಾವಳಿಯಲ್ಲಿ
ಕಟ್ಟಿಕೊಂಡ ಎಳೆ
ಕೂಡಿಕೊಂಡ ಕಣ
ಅಣು-ರೇಣು ತೃಣಕಾಯ;
ಬದುಕೆಂದರೆ
ಹಿರೋಷಿಮಾದ ಮಣ್ಣಲ್ಲಿ
ನಾಗಸಾಕಿಯ ಕಣ್ಣಲ್ಲಿ
ತೆರೆದ ಚರಿತ್ರೆಯ ಪುಟ.

ಅನಾಥ ಆಕಾಶಕ್ಕೆ ಬಾಹುಗಳ ಚಾಚಿ
ಮರಳುಗಾಡಲ್ಲಿ
ಒಂಟಿ ನಿಂತ ಕಂದಮ್ಮನ
ಹನಿಗೂಡಿದ ಕಣ್ಣಲ್ಲಿ
ಅಣ್ವಸ್ತ್ರಗಳ ಬಿಂಬ.

ನಂಬಿಕೆಯ
ಆಕಾಶದ ಕೆಳಗೆ
ಮೊಳೆತಿದೆ ನಿನ್ನೆಯ ಬೀಜ.
ಮಣ್ಣು ಕಚ್ಚಿದೆ ಬೇರು
ನಾಳಿನ ಕನಸಿಗೆ
ಕುಡಿ ಚಾಚಿದೆ ಚಿಗುರು.
ಈ ನಡುವೆ ಸುಡುತ್ತಿದೆ
ಇಂದಿನ
ನಿಗಿನಿಗಿ ಹಗಲು.


ಯುದ್ಧವೆಂದರೆ
ಈ ಮಕ್ಕಳಿಗೆ ತಿಳಿಯುವುದೇ ಇಲ್ಲ.

- ಜಿ.ಪಿ.ಬಸವರಾಜು

('ಪ್ರಜಾವಾಣಿ' ಸಾಪ್ತಾಹಿಕದಿಂದ ಇರಾಕ್ ಯುದ್ಧದ ಕುರಿತು)

ಕೂಡ್ಲಿಗಿ ಕ್ಷೇತ್ರ

ಕ್ಷೇತ್ರದ ಸಮಸ್ಯೆಗಳನ್ನು ಜಾದೂ ಮಾಡಿಯೇ ಬಗೆಹರಿಸಿಬಿಡಬಹುದೆಂದು ನಂಬಿಸಿದ್ದಾರೆ ಈ ಶಾಸಕರು. ಪ್ರಚಾರ ಪ್ರಿಯ ಶಾಸಕ ಹಾಗೂ ಇದಕ್ಕೆ ಪುಂಗಿ ಊದುವುದರ ನಡುವಿನ ಕಹಿಸತ್ಯಗಳೇನು?



ಬಲು ಜಾದೂಗಾರ ಶಾಸಕ ಶಿರಾಜ್ ಶೇಖ್

ಜಾದುಗಾರ ಶಾಸಕನೂ ಬಗೆಹರಿಯದ ಬವಣೆಗಳೂ

ರಂಗಪ್ಪ ದಾಸರ
ಹಗರಿಬೊಮ್ಮನಹಳ್ಳಿ

ನೋಡ್ರಿ... ಇದೊಂದು ಕಡ್ಡಿ, ಹೂವಾಗುತ್ತೆ. ಮತ್ತ ನೋಡ್ರಿ ಇದು ಐವತ್ತರ ನೋಟು, ಐನೂರರ ನೋಟಾಗುತ್ತೆ. ಮತ್ತೊಮ್ಮೆ ನೋಡ್ರಿ... ಇದು ಬೆಂಗಳೂರು, ಸಿಗಾಪುರ ಆಗುತ್ತೆ. ಜಾದುಗಾರ ಜಾದು ಮಾಡುತ್ತಲೇ ಇದ್ದ ಮುಂದೆ ಕುಳಿತಿದ್ದವರು ಚಪ್ಪಾಳೆ ತಟ್ಟುತ್ತಿದ್ದರು.

ಸಿರಾಜ್ ಶೇಖ ಬಳ್ಳಾರಿ ಜಿಲ್ಲೆಯ ಕೂಡ್ಲಿಗಿ ವಿಧಾನಸಭೆ ಕ್ಷೇತ್ರದ ಶಾಸಕ, ನಾಲ್ಕಾರು ಸಣ್ಣಪುಟ್ಟ ಕೆಲಸ ಮಾಡಿ ಅಬ್ಬರದ ಪ್ರಚಾರ ಗಿಟ್ಟಿಸಿದ್ದಾನೆ ರಾಜ್ಯದ ಹೆಸರಾಂತ ಪತ್ರಿಕೆಗಳು ಲಕ್ಷಗಟ್ಟಲೆ ಹಣಮಾಡಿ ಸಿರಾಜ್ ಶೇಖ ಉದೋ... ಉದೋ.. ಎಂದವು.

ಏನ್ ಶಾಸಕರ್‍ರೀ... ಬಡವರ ಬಗ್ಗೆ ಬಾರೀ ಕನಿಕರ್‍ರೀ... ಎಲ್ಲಾ ಹಳ್ಳಿಗೂ ಆತ್ನ ಹೊಂಟಾನ ಅಂತ್ರಿ. ಕೆಸರುಗಿಸರ್‍ರು ಏನೂ ನೋಡಾದಲ್ಲಿ ಅಂಗ ಆದರಾಗ ನಡಕೊಂಡು ಹೋಕಾನ್ರೀ. ತಾನೇ ಮನೆ ನೋಡಿ ಹೆಸರು ಬರ್‍ಕೊಂಡು ಮನೆ ಕೊಟ್ಟನ್ರೀ. ಯಾವ ಮೆಂಬರ್ ಮಾತು ಕೇಳಂಗಿಲ್ಲರೀ, ತಾನು ಹೇಳಿದ್ದೇ ಮಾತು ಇಂತ ಒಳ್ಳೆ ಶಾಸಕ ಯಾರಿಗೆ ಸಿಗ್ತಾನೇಳ್ರೀ... ಇದು ಕಾಂಗ್ರೆಸ್ ಚೇಲಗಳ ಮಾತು.

ಜಾದು ಮಾಡಿ ಜನರನ್ನು ಮರುಳಮಾಡಬಹುದು ಎಂದುಕೊಂಡಿದ್ದ ಸಿರಾಜ್ ಶೇಖ ಅದು ಕಮ್ಯುನಿಷ್ಟರಿಗೆ ಗೊತ್ತಾಗಲೇ ಬೇಕು ಅಲ್ಲವೆ? ಸಿರಾಜಶೇಖ ಬಳ್ಳಾರಿ ಜಿಲ್ಲೆಯ ದೊರೆ ಎಂದೇ ಪ್ರಸಿದ್ಧಿಪಡೆದಿರುವ ಎಂ.ವೈ. ಘೋರ್ಪಡೆಯವರ ಕಂಪನಿಗಳನ್ನು ಮುನ್ನಡೆಸಿದಾತ. ಘೋರ್ಪಡೆಯವರ ಸಾಕು ಮಗನೆಂದೇ ಪ್ರತೀತಿ ಇರುವ ಸಿರಾಜ್ ಶೇಖ, ಒಬ್ಬ ಭೂಮಾಲಕ ಬಂಡವಾಳಶಾಹಿಯ ಪ್ರತಿನಿಧಿ. ಇವರ ರಕ್ಷಣೆಗೆಂದೇ ಹುಟ್ಟಿರುವ ಕಾಂಗ್ರೆಸ್ ಪಕ್ಷ! ಜಿಂಕೆಯ ಮರಿಗೆ ಹುಲಿ ಎಂದಾದರೂ ನ್ಯಾಯ ನೀಡಲು ಸಾಧ್ಯವೇ?!

1994 ಪಿ.ವಿ. ನರಸಿಂಹರಾವ್ ಸಹಿ ಹಾಕಿತಂದ ನೂತನ ಆರ್ಥಿಕ ನೀತಿಗಳು ಕೂಡ್ಲಿಗಿ ಕ್ಷೇತ್ರದಲ್ಲಿ ಸಂಪೂರ್ಣವಾಗಿ ಪರಿಣಾಮ ಬೀರಿವೆ. ರಫ್ತು - ಆಮದು ನೀತಿಯಿಂದ 2002-03ನೇ ಸಾಲಿನಲ್ಲಿ ಮೂವರು ರೈತರು ಆತ್ಮಹತ್ಯೆ ಮಾಡಿಕೊಂಡಿದ್ದಾರೆ. ಕೂಲಿಕಾರರಿಗೆ ಕೂಲಿ ಸಿಗದೆ ಇರುವ ಪರಿಸ್ಥಿತಿ ಎಲ್ಲಾ ವಿಭಾಗದ ಕೆಲಸದಲ್ಲಿ ಯಂತ್ರದ ಅಳವಡಿಕೆ. ಕ್ಷೇತ್ರ ವ್ಯಾಪ್ತಿಯ 8 ಎಣ್ಣೆ ಗಿರಣಿಗಳು ಮುಚ್ಚಿ ಕಾರ್ಮಿಕರು ಬೀದಿಪಾಲಾಗಿದ್ದಾರೆ. ಗ್ರಾಮೀಣ ಪ್ರದೇಶದಲ್ಲಿ ದಲ್ಲಾಳರು ತಲೆ ಎತ್ತಿದ್ದರಿಂದಾಗಿ ಪಟ್ಟಣ ಪ್ರದೇಶದ ಹಮಾಲರಿಗೆ ಕೆಲಸವಿರದಂತಹ ಪರಿಸ್ಥಿತಿ. ಆತ್ಮಹತ್ಯೆ ಪ್ರಕರಣಗಳು ಹಿಂದೆಂದಿಗಿಂತಲೂ ಈಗ ಹೆಚ್ಚಾಗತೊಡಗಿದ್ದು ಜನರ ಆರ್ಥಿಕ ಗಂಭೀರತೆಯನ್ನು ತೋರಿಸುತ್ತದೆ. ಉನ್ನತ ಪದವಿದರರು ಉದ್ಯೋಗ ಸಿಗಲಿಲ್ಲ ಎಂಬ ಕಾರಣಕ್ಕಾಗಿ ಆತ್ಮಹತ್ಯೆ ಮಾಡಿಕೊಂಡಿದ್ದಾರೆ. ಡಿಪ್ಲಮೋ ಇಂಜಿನಿಯರಿಂಗ್ ಪದವಿ ಮುಗಿಸಿದರೂ ಉದ್ಯೋಗ ಸಿಗದೆ ಏನೂ ತೋಚದ ಪರಿಸ್ಥಿತಿಯಲ್ಲಿದ್ದಾರೆ. ಮಂಜುನಾಥ ಎಂಬ ಯುವಕ ಬಿ.ಇ. ಮೆಕಾನಿಕಲ್ ಪ್ರಥಮ ದರ್ಜೆಯಲ್ಲಿ ತೇರ್ಗಡೆಯಾಗಿ ಮಹಾರಾಷ್ಟ್ರ, ತಮಿಳುನಾಡು, ಆಂಧ್ರಪ್ರದೇಶ ಜೊತೆಗೆ ನಮ್ಮ ರಾಜ್ಯದ ತುಂಬೆಲ್ಲಾ ಮೂರು ವರ್ಷಗಳ ಕಾಲ ತಿರುಗಾಡಿದರೂ, ಉದ್ಯೋಗ ಸಿಗಲೇ ಇಲ್ಲ. ಕೊನೆಗೆ M.Tech ಮಾಡಿದರೆ ಸರಿಹೋಗಬಹುದೆಂದು M.Tech ಮುಗಿಸಿ ಎರಡು ವರ್ಷಗಳಾದರೂ ಉದ್ಯೋಗ ದೊರೆಯಲೇ ಇಲ್ಲ. ಇದು ನಿರುದ್ಯೋಗ ಸಮಸ್ಯೆಯ ಗಂಭೀರತೆಯನ್ನು ತೋರಿಸುತ್ತದೆ. ಕ್ಷೇತ್ರದ ದಿನನಿತ್ಯ ದುಡಿಯುವ ಹಮಾಲರ, ಕೂಲಿಕಾರರ ಆದಾಯ ಮಾಸಿಕ ಸಾವಿರ ರೂ. ದಾಟುತ್ತಿಲ್ಲ ಆದರೆ ಗಗನಕ್ಕೇರುತ್ತಿರುವ ಬೆಲೆಗಳು ಆಸ್ಪತ್ರೆಯ ಖರ್ಚುಗಳು ರೋಗ ರುಜಿನಿಗಳಿಗೆ ತುತ್ತಾದ ಮನುಷ್ಯ ಇದನ್ನು ನಿಬಾಯಿಸಲಾರದೆ ಸಾವನ್ನಪ್ಪಿರುವ ಘಟನೆಗಳು ಯಥೇಚ್ಛವಾಗಿ ನಡೆದಿದೆ. ಕೊಲೆ ಸುಲಿಗೆಗಳು ಕುಟುಂಬ ಕಲಹಗಳು ಹೆಚ್ಚುತ್ತಿರುವುದು ಆರ್ಥಿಕತೆಯ ದುಷ್ಪರಿಣಾಮದ ತೀವ್ರತೆ ಗಮನಾರ್ಹವಾಗಿದೆ ಎಂಬುದನ್ನು ತೋರಿಸುತ್ತದೆ.

ಇದು ಶಾಸಕ ಸಿರಾಜ್‌ಶೇಖಗೆ ಗೊತ್ತಾಗುತ್ತಿಲ್ಲವೆ...?

ಜನರನ್ನು ಪ್ರಪಾತಕ್ಕೆ ತಳ್ಳುವ ಆರ್ಥಿಕ ನೀತಿಗಳು ಬರಬಾರದೆಂದು ಸಿಪಿಎಂ ಪಕ್ಷ 1994ರಲ್ಲಿ 70 ಹಳ್ಳಿಗಳಲ್ಲಿ ಪ್ರಚಾರ ಸಭೆ ನಡೆಸಿ 32 ಜನ ಸಿಪಿಎಂ ಕಾರ್ಯಕರ್ತರು 13 ದಿನಗಳ ಕಾಲ ಬಳ್ಳಾರಿಯ ಸೆಂಟ್ರಲ್ ಜೈಲನ್ನು ಸೇರಿದ ಹೋರಾಟ ನಡೆಸಿದ್ದವು.

ಪ್ರಜಾಸತ್ತೆ, ವಿಕೇಂದ್ರಿಕರಣ ಎಂಬ ಪದದ ಸರಿಯಾದ ತಿಳುವಳಿಕೆ ಇಲ್ಲದ ಸಿರಾಜ್ ಶೇಖ, ಗ್ರಾಮ ಸಭೆ ನಡೆಸುವುದನ್ನು ಬಿಟ್ಟು ತಾನೇ ಫಲಾನುಭವಿಗಳನ್ನು ಗುರಿತಿಸುವ ಅವಶ್ಯಕತೆ ಏತಕ್ಕೆತ್ತಂದರೆ ಕ್ಷೇತ್ರಕ್ಕೆ ಮುಂಜೂರಾದ ಮನೆ 8 ಸಾವಿರ ಎಲ್ಲಾ ಮನೆಗಳನ್ನು ಲ್ಯಾಂಡ್ ಆರ್ಮಿಗೆ ವಹಿಸಿದ ಮನೆಗೊಂದರಂತೆ ಮೂರು ಸಾವಿರ ಕಮಿಷನ್ ಮಾತಾಡಿ 2 ಕೋಟಿ 40 ಲಕ್ಷರೂಗಳನ್ನು ಶಾಸಕ ಜೇಬಿಗಿಳಿಸಿದ್ದಾನೆ ಎನ್ನುವ ಸುದ್ದಿ. ಅದಕ್ಕಾಗಿಯೇ ಪಾದಯಾತ್ರೆ, ಫಲಾನುಭವಿಗಳ ಆಯ್ಕೆಯ ಜಾದೂ ನಾಟಕ.

ಕ್ಷೇತ್ರದ ವ್ಯಾಪ್ತಿಯಲ್ಲಿ ರೈತರ ಸಂಕಷ್ಟಗಳು ತೀವ್ರತೆರವಾಗಿದ್ದರೂ ಶಾಸಕ ಸಿರಾಜ್ ಶೇಖ ಎಂದೂ ವಿಧಾನಸಭೆಯಲ್ಲಿ ಇದರ ಬಗ್ಗೆ ಧ್ವನಿ ಎತ್ತಲಿಲ್ಲ. ಸಿಪಿಎಂ ಪಕ್ಷವೊಂದೇ ರೈತರ ಸಮಸ್ಯೆಗಳನ್ನೆತ್ತಿಕೊಂಡು ತೀವ್ರತರನಾದ ಹೋರಾಟಗಳನ್ನು ನಡೆಸಿದೆ. ವಿದ್ಯುತ್ ಸಮಸ್ಯೆಗಳಿಗೆ ಸಂಭಂದಿಸಿದಂತೆ ಹಳ್ಳಿಹಳ್ಳಿಗೂ ತೆರಳಿ ರಾಜಕೀಯ ಪ್ರಚಾರಾಂದೋಲನವನ್ನು ನಡೆಸಿದೆ.

ದಿನಾಂಕ 12.04.2003ರಂದು ಮುಖ್ಯಮಂತ್ರಿ ಎಸ್.ಎಂ. ಕೃಷ್ಣ ವಿವಿಧ ಕಾಮಗಾರಿಗಳ ಉದ್ಘಾಟನೆಗೆ ಬಂದಾಗ ವಿದ್ಯುತ್ ಖಾಸಗೀಕರಣದ ಪ್ರಶ್ನೆ ಎತ್ತಿಕೊಂಡು ಮುಖ್ಯಮಂತ್ರಿಗೆ ಕಪ್ಪುಬಾವುಟ ತೋರಿಸಿ ಘೆರಾವ್ ಮಾಡಲು ನಿರ್ಧರಿಸಲಾಯಿತು.

ಆದರೆ ಶಾಂತರೀತಿಯಿಂದ ಧರಣಿ ನಡೆಸುತ್ತಿದ್ದ ಸಿಪಿಎಂ ಕಾರ್ಯಕರ್ತರನ್ನು ಪೊಲೀಸರು ಬಂಧಿಸಿದರು. ಶಾಂತರೀತಿಯಿಂದ ಪ್ರತಿಭಟನೆ ನಡೆಸುತ್ತಿರುವವರನ್ನು ಬಂಧಿಸುವುದು ಸರಿಯಲ್ಲವೆಂಬ ವಾಗ್ವಾದ ಪೋಲಿಸರೊಂದಿಗೆ ನಡೆಯಿತು ಬಲವಂತದಿಂದ 50 ಜನ ಸಿಪಿಎಂ ಕಾರ್ಯಕರ್ತರನ್ನು ಎತ್ತಿಕೊಂಡು ಹೋಗಿ.. ಪೊಲೀಸ್ ವ್ಯಾನ್‌ನಲ್ಲಿ ತುರುಕಲಾಯಿತು. ಒಂದು ದಿನಕಾಲ ತಂಬ್ರಹಳ್ಳಿ ಪೊಲಿಸ್ ಠಾಣೆಯಲ್ಲಿ ಇರಿಸಲಾಯಿತು.


ಇದು ಕಾಂಗ್ರೆಸ್ ಸರ್ಕಾರದ ನ್ಯಾಯ ಇದು ಸಿರಾಜ್ ಶೇಖರವರ ನ್ಯಾಯ. ನ್ಯಾಯ ಕೇಳಲು ಹೋದರೆ ಜೈಲಿಗೆ ತಳ್ಳುತ್ತಾರೆ.

ಎಚ್ಚೆತ್ತ ಜನ ಸಿರಾಜ್‌ಶೇಖಗೆ ಕೇಳುತಿದ್ದಾರೆ 'ನಿಮ್ಮ ಜಾದು ನಮಗೆ ಬೇಕಾಗಿಲ್ಲ ನಾವು ದುಡಿಯುವ ಜನ ದುಡಿಯಲಿಕ್ಕೆ ಕೆಲಸ ಕೊಡಿ. ಕೊಳ್ಳುವ ಶಕ್ತಿಯನ್ನು ಕಳೆದುಕೊಂಡಿದ್ದೇವೆ. ಮೊದಲು ಕೊಳ್ಳುವ ಶಕ್ತಿ ಹೆಚ್ಚಿಸುವ ಕೆಲಸ ಮಾಡಿ'.

ಆದರೆ ಇವರು ಕೇಳುವುದಿಲ್ಲ ಇವರು ಭೂಮಾಲಿಕ, ಬಂಡವಾಳಶಾಹಿ ಪ್ರತಿನಿಧಿಗಳು ಅಂಗೈಯಲ್ಲಿ ಅರಮನೆ ತೋರಿಸುವವರು. ಇವರನ್ನು ಹಿಡಿದು ಕೇಳಬೇಕಿದೆ, ಹೊರಗೆಳೆಯಬೇಕಿದೆ. ಜನಶಕ್ತಿ ಅದನ್ನು ಮಾಡುತ್ತದೆ. ಜನಾಂದೋಲನ ನಡೆಯಲೇಬೇಕು ಇವರ ಹೂರಣ ಬಯಲಾಗಲೇ ಬೇಕು. ಬೀದಿ ಮೇಲೆ ಹೆಜ್ಜೆ ಹೆಜ್ಜೆಗಳೂ ಮಾತಾಡುವ ಕಾಲ ದೂರವಿಲ್ಲ.



ಮುಖ್ಯಮಂತ್ರಿ ಕೃಷ್ಣರಿಗೆ ಪ್ರತಿಭಟನೆಯ ಸ್ವಾಗತ




ಹೇಳುವ ಕಥೆ

ರೈತನಿಗೆ ಕೊಡುವ ಸಬ್ಸಿಡಿ ಬಗ್ಗೆ ಬಹಳ ಚರ್ಚೆ ನಡೆದಿದೆ, ಜಾಗತೀಕರಣದ ಸಂದರ್ಭದಲ್ಲಿ. ಇಂದಿನ ಸ್ಪರ್ಧಾತ್ಮಕ ಜಗತ್ತಿನಲ್ಲಿ ನಮ್ಮ ರೈತ ಸ್ಪರ್ಧಿಸಬೇಕು ಎಂದು ದಿನ ಬೆಳಗಾದರೆ ಅಪ್ಪಣೆ ಕೊಡಿಸುತ್ತಿರುತ್ತಾರೆ. ನಮ್ಮ ರೈತ ಸ್ಪರ್ಧಿಸಬೇಕಾದರೆ ಬಲಾಢ್ಯ ಅಭಿವೃದ್ಧಿ ದೇಶಗಳ ರೈತರಿಗೆ ಎಷ್ಟು ಸಬ್ಸಿಡಿ ಸಿಗುತ್ತದೆ ಎಂದು ಈ ಅಂಕಿಗಳು ಹೇಳುತ್ತವೆ. ನೀವೆ ನೋಡಿ.

ಪ್ರತಿರೈತನಿಗೆ ಸಬ್ಸಿಡಿ (1999ರಲ್ಲಿ)

ದೇಶ	ಸಬ್ಸಿಡಿ (ರೂಪಾಯಿಗಳಲ್ಲಿ)
ಜಪಾನ್	11.18.ಲಕ್ಷ
ಅಮೇರಿಕಾ	9.03 ಲಕ್ಷ
ಯುರೋಪಿಯನ್ ಒಕ್ಕೂಟ	7.31 ಲಕ್ಷ
24 ಅಭಿವೃದ್ಧಿ ದೇಶಗಳ ಸರಾಸರಿ	
ಕೆನಡಾ	3.87 ಲಕ್ಷ
ಭಾರತ	2838 ರೂ.



ಎಲ್ಲಿಯ ಸ್ಪರ್ಧೆ ?. ಆನೆಗೂ ಇರುವೆಗೂ. ಸ್ಪರ್ಧೆ !...

ಈಗ ದಿನವೂ ಬಜೆಟ್ ಶೂಲೆ!

ಹಿಂದೆಲ್ಲ ಬಜೆಟ್ ಎಂಬುದಕ್ಕೆ ಎಲ್ಲಿಲ್ಲದ ಹತ್ವವಿತ್ತು. ಯಾಕೆಂದರೆ ಮುಂದಿನ ಒಂದು ರ್ಷದಲ್ಲಿ ನಮ್ಮ ಬೆಲೆಗಳು ಹೇಗಿರುತ್ತವೆ ಬುದು ಈ ಬಜೆಟ್‌ನಿಂದ ತ್ತಾಗುತ್ತಿತ್ತು. ಈಗ ಬೆಲೆ ಯಾವಾಗ ಕಾದರೂ ಏರುತ್ತದೆ, ಇಳಿಯುವ ಾತಂತೂ ಇಲ್ಲವೇ ಇಲ್ಲ.


ಪೆಟ್ರೋಲ್, ಡೀಸೆಲ್‌ಗಳ ಬೆಲೆ ಮತ್ತೆ ವರ ನಂತರ ಬಸ್ಸು ಪ್ರಯಾಣ ದರ, ದಿನ ್ಯವೂ ಏರುವಾಗ ಜನ ಸಾಮಾನ್ಯರು 'ರಹರ' ಎನ್ನುವಂತಾಗಿದೆ. ಹಿಂದೆ ಯಿಲ್ ಪೂಲ್ ಎಂಬ ಒಂದು ತೆಯಿತ್ತು. ಪೆಟ್ರೋಲ್, ಡೀಸೆಲ್ ಬೆಲೆ ು ಹುಟ್ಟುವ ದೇಶದಲ್ಲಿ ಬೆಲೆ ಏರಿಳಿತ ದರೆ ಅದರ ಪರಿಣಾಮ ನಮ್ಮ ದೇಶದಲ್ಲಿ ದಂತೆ ತಡೆಯುತ್ತಿತ್ತು. ಆದರೆ ಈಗ ದಾರೀಕರಣದ ಹೆಸರಿನಲ್ಲಿ ಸಹಾಯಧನಗಳನ್ನು ಡೆದು ಹಾಕುವ ಹೆಸರಿನಲ್ಲಿ ಈ ಆಯಿಲ್ ಪೂಲ್ ಖಾತೆಯನ್ನು ತೆಗೆದು ಹಾಕಲಾಗಿದೆ. ಆದ್ದರಿಂದ ಈಗ ದಿನನಿತ್ಯವೂ ಬೆಲೆಗಳು ಏರುತ್ತ ಇಳಿಯುತ್ತ ಇವೆ.



ಈ ಏರಿಕೆ/ಇಳಿಕೆಯಲ್ಲಿ ಒಂದು ಗಮನಾರ್ಹ ವ್ಯತ್ಯಾಸವಿದೆ. ಅದು ಏನೆಂದರೆ ಬೆಲೆ ಏರುವುದು ದಾಪುಗಾಲಿನಲ್ಲಾದರೆ ಇಳಿಯುವುದು ಅಂಬೆಗಾಲಿ ನಲ್ಲಿ ಅಂದರೆ ಏರುವುದು ಮಾರಿನಷ್ಟಾದರೆ ಇಳಿಯುವುದು ಗೇಣಷ್ಟು. ಅದು ಏರಲಿಕ್ಕೆ ಮಾರ್ಕೆಟ್ಟಿನಲ್ಲಿ ಇದರ ಬೆಲೆ ಏರಬೇಕೆಂದೇನೂ ಇಲ್ಲ.

ಪೆಟ್ರೋಲ್ ಡೀಸೆಲ್‌ಗಳ ಬೆಲೆ ಏರಿದರೆ ಎಲ್ಲಾ ತರಹದ ಸರಕುಗಳ ಮತ್ತು ಹಲವು ಸೇವೆಗಳ ಬೆಲೆ ಏರಿ ಜನಸಾಮಾನ್ಯರ ಜೀವನ ಕಷ್ಟವಾಗುತ್ತದೆ. ಉದಾರೀಕರಣ ಮಾಡಿರುವುದು ಇದನ್ನು. ದಿನವೂ ಸಾಯುವವರಿಗೆ ಅಳುವವರಿಲ್ಲ ಎನ್ನುವಂತೆ ದಿನನಿತ್ಯ ಏರುವ ಈ ಬೆಲೆಗಳ ವಿರುದ್ಧ ಪ್ರತಿಭಟಿಸುವ ಅಭ್ಯಾಸವನ್ನೂ ಜನ ಮರೆತಿದ್ದಾರೆ. ಆದರೆ ಬದಲಾದ ಪರಿಸ್ಥಿತಿಯಲ್ಲಿ ಈ ಬೆಲೆಯೇರಿಕೆಯ ವಿರುದ್ಧ ಪ್ರತಿಭಟಿಸಲು ಜನ ಒಗ್ಗಟ್ಟಾಗಲೇಬೇಕು. ಅಲ್ಲವೇ?


ಈ ಬೆಲೆ ಏರಿಕೆಯಲ್ಲಿ ಸರಕಾರ ಗಳೂ ತಮ್ಮ ಲಾಭ ಮಾಡಿ ಕೊಳ್ಳುತ್ತಿವೆ. ಅಂತರ್‍ರಾಷ್ಟ್ರೀಯ ಮಾರುಕಟ್ಟೆಯಲ್ಲಿ ಲೀಟರ್‌ಗೆ 17 ರೂಪಾಯಿಗಳಿದ್ದರೆ ಗ್ರಾಹಕರು 40 ರೂಪಾಯಿ ಚೆಲ್ಲಬೇಕು. ಇದಕ್ಕೆ ಕಾರಣ ರಾಜ್ಯ ಮತ್ತು ಕೇಂದ್ರ ಸರ್ಕಾರಗಳ ವಿವಿಧ ತೆರಿಗೆಗಳು. ಅಂದರೆ ರಾಜ್ಯ ಮತ್ತು ಕೇಂದ್ರ ಸರ್ಕಾರಗಳು ಮನಸ್ಸು ಮಾಡಿದರೆ ಪೆಟ್ರೋಲ್ ಕಡಿಮೆ ದರದಲ್ಲಿ ದೊರೆಯುತ್ತದೆ. ಆದರೆ ಈ ಸರ್ಕಾರಗಳನ್ನು ನಡೆಸುವ ಬಂಡವಾಳಶಾಹಿಗಳಿಗೆ ಅದು ಬೇಕಾಗಿಲ್ಲ.



ಜಾಗತಿಕ ರಣ

ಸಾಮ್ರಾಜ್ಯಶಾಹಿಗಳಿಗೆ ಬೇಕು
ಹಣ
ಕಾಸು ಬಂಡವಾಳದ
ಜಾಗತೀಕರಣ
ದುಡಿವ ಜನ
ಗಳಿಗೆ ಬೇಕು
ಅಭಿವೃದ್ಧಿಯ ಜಾಗತೀಕರಣ
ಅದಕ್ಕಾಗಿಯೇ ಇಂದು
ನಡೆದಿದೆ
ಜಾಗತಿಕ
ರಣ

- ಜಿ.ಎಸ್.ಮಣಿ



ಬಡವರಿಗ್ಯಾಕೆ ಬ್ಯಾಂಕಿಂಗ್?

ಉದಾರೀಕರಣದ ಕೇಂದ್ರ ಸರ್ಕಾರ ಕೇಳುತ್ತಿದೆ ಈ ಪ್ರಶ್ನೆಯನ್ನು. 1969 ರ ರಾಷ್ಟ್ರೀಕರಣದ ನಂತರ ದೇಶದ ಅಭಿವೃದ್ಧಿಗೆ ಮತ್ತು ಬಡ ಜನತೆಗೆ ನೆರವಾಗಲೆಂದು ಹಲವಾರು ಹಳ್ಳಿಗಳಲ್ಲೂ ಬ್ಯಾಂಕ್ ಶಾಖೆಗಳನ್ನು ತೆರೆಯಲಾಯಿತು. ಇದರಿಂದ ದೇಶದ ಆರ್ಥಿಕತೆಗೆ ಅಪಾರ ನೆರವಾಯಿತೆಂಬುದು ಹಗಲಿನಷ್ಟೇ ಸ್ಪಷ್ಟ. ಆದರೆ ಉದಾರೀಕರಣದ ಈ ದಿನಗಳಲ್ಲಿ ಹಲವು ಬ್ಯಾಂಕ್ ಶಾಖೆಗಳನ್ನು ಮುಚ್ಚಲಾಗುತ್ತಿದೆ. ಅದರಲ್ಲಿ ಗ್ರಾಮೀಣ ಶಾಖೆಗಳ ಪಾಲು ಬಹು ದೊಡ್ಡದು. ಕಳೆದ ಮೂರು ಹಣಕಾಸು ವರ್ಷಗಳನ್ನು ತೆಗೆದುಕೊಂಡರೆ 2000 ದಲ್ಲಿ 263 ಶಾಖೆಗಳು, 2001 ರಲ್ಲಿ 590 ಮತ್ತು 2001 ರಲ್ಲಿ 276 ಬ್ಯಾಂಕ್ ಶಾಖೆಗಳನ್ನು ಮುಚ್ಚಲಾಗಿದೆ ಇಲ್ಲವೇ ವಿಲೀನ ಗೊಳಿಸಲಾಗಿದೆ. ಇವುಗಳಲ್ಲಿ ಅನುಕ್ರಮವಾಗಿ 127, 206 ಮತ್ತು 129 ಗ್ರಾಮೀಣ ಶಾಖೆಗಳು. ಹಣವೇ ಇಲ್ಲದ ಬಡವರಿಗೆ ಬ್ಯಾಂಕಿಂಗ್ ಯಾಕೆ ಎಂದು ಕೇಳುತ್ತೀರಾ? ಬಡವರು ಉದ್ಯೋಗ ಹಿಡಿಯಲು ಹಣಕಾಸಿನ ನೆರವನ್ನು ಬ್ಯಾಂಕುಗಳು ನೀಡುತ್ತವೆ. ಆ ದೃಷ್ಟಿಯಿಂದ ಬಡವರಿಗೆ ಅವುಗಳ ಅವಶ್ಯಕತೆಯಿದೆ.

ಉದಾರೀಕರಣದ ಕಾಮಾಲೆ ರೋಗಿಗಳಿಗೆ ಇವೆಲ್ಲ ಕಾಣುವುದು ಸಾಧ್ಯವಿಲ್ಲ. ಅಲ್ಲವೇ?

ಸುದ್ದಿ – ಸತ್ಯ.....

ಪುಟ 5 ರಿಂದ

ಪರವಾಗಿ ವರದಿ ಮಾಡ ಬೇಕೆಂದು ಯಸುವುದು ಮಾತ್ರವಲ್ಲದೆ, ಇತರೆ ದೇಶಗಳ ಪತ್ರಕರ್ತರೂ ತನಗೆ ಬೇಕಾದುದನ್ನೇ ರೆಯಬೇಕೆಂದು ಅಮೇರಿಕಾ ಪಟ್ಟು ಡಿಯಿತು. ಈ ನಿಲುವಿಗೆ ಬ್ರಿಟನ್ ಕೂಡ ಮ್ಮತಿ ವ್ಯಕ್ತಪಡಿಸಿತು. ಹೀಗಾಗಿ ಇರಾಕ್‌ನ ಲದಲ್ಲಿ ನಡೆಯುತ್ತಿದ್ದ ಅನ್ಯಾಯಗಳನ್ನು ವರದಿ ಮಾಡುತ್ತಿದ್ದ ಪತ್ರಕರ್ತರಿಗೆ ಅಪಾಯ ಕಟ್ಟಿದ್ದ ುತ್ತಿಯಾಗಿತ್ತು. ಇರಾಕ್ ಪರವಾದ ವರದಿಗಳನ್ನು ನೀಡುತ್ತಿದ್ದ ಅಲ್.ಜಜೀರಾ ಿ.ವಿ.ಚಾನೆಲ್‌ನ ವರದಿಗಾರ ಮೊಹಮದ್ ಅಲ್‌ಸಯೇದ್ ಮುಹ್‌ಸೇಗ್ ಮತ್ತು ಅವರ ಂಡದವರನ್ನು ಬಂಧಿಸಿದ ಬ್ರಿಟನ್ನಿನ ಪಡೆಗಳು ಹಲವು ದಿನಗಳ ಕಾಲ ತನ್ನ ಸುಪರ್ದಿಯಲ್ಲಿ ಟ್ಟುಕೊಂಡಿತ್ತು. ಈ ತಂಡ ಯುದ್ಧದ ವರದಿ ಮಾಡಕೂಡದೆಂದು ಒತ್ತಡ ಹೇರಿತು. ಕೊನೆಗೆ ವರದಿಗಾರರ ತಂಡವನ್ನು ಬಿಡುಗಡೆ ಮಾಡಿದರೂ ಅವರ ಕ್ಯಾಮೆರಾ, ಮತ್ತಿತರ ಉಪಕರಣಗಳನ್ನು ನೀಡದೇ ಸತಾಯಿಸಿತು. ಅಲ್ ಜಜೀರಾ ಚಾನೆಲ್‌ನ ಮುಖ್ಯ ವರದಿಗಾರ ಅಬ್ದುಲ್ ಅಜೀಜ್ ಅಲ್ ಮೊಹಮ್ಮದ್ ಹಾರ ಕೆಲವೇ ವಾರದ ಅವಧಿಯಲ್ಲಿ ಬ್ರಿಟನ್ ಪಡೆಗಳು ಮೂರು ಬಾರಿ ಅಲ್ ಜಜೀರಾ ಮೇಲೆ ನಿಷೇಧ ಹೇರಿತ್ತು. ಸರ್ಕಾರಗಳು ನಡೆಸಿದ ಯುದ್ಧದಲ್ಲಿ ಮಾಧ್ಯಮಗಳೂ ತಮ್ಮನ್ನು ತೊಡಗಿಸಿಕೊಂಡಿದ್ದು ಈ ಬಾರಿಯ ಯುದ್ಧ ವರದಿಗಾರಿಕೆಯ ದುರಂತ. ಜಗತ್ತಿನಲ್ಲಿ ಅತ್ಯಂತ ನಿಷ್ಪಕ್ಷಪಾತ ಮಾಧ್ಯಮ ಸಂಸ್ಥೆ' ಎಂದು ಹೆಸರುಗಳಿಸಿರುವ ಬಿ.ಬಿ.ಸಿ.ಯೂ ಬ್ರಿಟನ್ ಡಳಿತದ, ಸೇನೆಯ ತುತ್ತೂರಿಯಾಗಿತ್ತು. ಟನ್ ಸೇನಾಪಡೆಯ ಚಟುವಟಿಕೆಗಳನ್ನು ು ಸೇನಾಪಡೆಯ' ಎಂದು ಹೇಳುತ್ತಿದ್ದ ಬಿ.ಸಿ., ತನ್ನ ನಿಷ್ಪಕ್ಷಪಾತ ವರದಿಗಾರಿಕೆಯ ಹಿರಿಮೆಯನ್ನು ಮಣ್ಣುಮುಕ್ಕಿಸಿತು.

ಆಕ್ರಮಣ ಆರಂಭವಾದ ಒಂದು ವಾರದ ನಂತರ ಇರಾಕಿನ ಮರುಭೂಮಿಯ ವಾಸ್ತವಗಳು, ಮರಳಿನಿಂದ ಕೂಡಿದ ಬಿರುಗಾಳಿ, ಇರಾಕಿ ಪಡೆಗಳು ಒಡ್ಡಿದ ಪ್ರತಿರೋಧದಿಂದಾಗಿ ಅಮೇರಿಕಾ ಪಡೆಗಳು ವಿಚಲಿತಗೊಂಡವು. ತನ್ನ ಆಕ್ರಮಣದ ತೀವ್ರತೆಯನ್ನು ಕೊಂಚ ತಗ್ಗಿಸಿದ ಅಮೇರಿಕಾ ತನ್ನ ಯೋಜನೆಗಳಲ್ಲಿ ಬದಲಾವಣೆಗಳನ್ನು ಮಾಡಿತು. ಅಮೇರಿಕಾದ ಆಕ್ರಮಣವನ್ನು ವರದಿ ಮಾಡುತ್ತಿದ್ದ ಎನ್.ಬಿ.ಸಿ ಚಾನೆಲ್‌ನ ಹಿರಿಯ ಜಾತ್ಮೀದಾರ ಪೀಟರ್ ಅರ್ನೆಟ್ ಇರಾಕಿನ ಸುದ್ದಿ ಸಂಸ್ಥೆಯೊಂದಕ್ಕೆ ನೀಡಿದ ಸಂದರ್ಶನದಲ್ಲಿ ಈ ವಿಷಯವನ್ನು ಪ್ರಸ್ತಾಪ ಮಾಡಿದರು. ಇದರಿಂದ ಕುಪಿತಗೊಂಡ ಎನ್.ಬಿ.ಸಿ. ಚಾನೆಲ್ ಅವರನ್ನು ಕೆಲಸದಿಂದಲೇ ತೆಗೆದುಹಾಕಿತು. ಈ ಎನ್.ಬಿ.ಸಿ. ಚಾನೆಲ್‌ನ ಒಡೆತನ ಇರುವುದು ಅಮೇರಿಕಾದ ಪ್ರಸಿದ್ಧ ಶಸ್ತ್ರಾಸ್ತ್ರ ಪೂರೈಕೆ ಕಂಪನಿಯಾದ ಜನರಲ್ ಎಲೆಕ್ಟ್ರಿಕಲ್ಸ್ ಕಂಪನಿಯ ಕೈಯಲ್ಲಿ.

ವಿಶ್ವದ ಬಲಾಢ್ಯ ಮಾಧ್ಯಮ ಸಂಸ್ಥೆಗಳು ಬಲಾಢ್ಯ ರಾಷ್ಟ್ರಗಳ ಮುಷ್ಟಿಯಲ್ಲಿ ಸಿಕ್ಕಿಬಿದ್ದಾಗ, ಅಮೇರಿಕಾದ ಆಕ್ರಮಣವನ್ನು ವಿರೋಧಿಸಿದ ಜರ್ಮನ್ ಮಾಧ್ಯಮಗಳು, ಪತ್ರಿಕೋದ್ಯಮಕ್ಕೆ ತಕ್ಕುದಾದ ಕೆಲಸ ಮಾಡಿದವು ಎನ್ನುತ್ತಾರೆ ಪತ್ರಕರ್ತೆ ಸಾರಾ ಜಾನ್. 'ಜರ್ಮನಿಯ ಕೆಲವು ಖಾಸಗಿ ಚಾನೆಲ್‌ಗಳು ಅಮೇರಿಕಾದ ಮಾಧ್ಯಮದಂತೇ ತಮ್ಮ ವರದಿಗಾರರನ್ನು ಸೈನ್ಯದ ಜೊತೆಯಲ್ಲಿ ಸೇರಿಸಿದ್ದರೂ, ಹೆಚ್ಚಿನ ಜರ್ಮನ್ ಪತ್ರಕರ್ತರು ಎಲ್ಲ ಅಪಾಯಗಳ ನಡುವೆಯೂ ಸ್ವತಂತ್ರವಾಗಿ ವರದಿ ಮಾಡಿದರು. ತಮ್ಮ ಎಲ್ಲ ವರದಿಗಳಿಗೂ 'ಸುದ್ದಿ ಮೂಲ'ವನ್ನು ತೋರಿಸಿದರು. 53 ವರ್ಷಗಳ ಇತಿಹಾಸ ಇರುವ, 11 ಸ್ಥಳೀಯ ಮತ್ತು ಸ್ವತಂತ್ರ ಟಿ.ವಿ.ಚಾನೆಲ್‌ಗಳ ಸಮೂಹ ಸಂಸ್ಥೆಯಾದ ಎ.ಆರ್.ಡಿ ಸಂಸ್ಥೆ ಹಾಗೂ 40 ವರ್ಷಗಳ ಇತಿಹಾಸ ಇರುವ ಝಡ್.ಡಿ.ಎಫ್ ಸಂಸ್ಥೆಗಳು ಪ್ರತಿದಿನ ಯುದ್ಧದ ಬಗೆಗಿನ ಜರ್ಮನ್ ನಾಗರಿಕರ ಅಭಿಪ್ರಾಯಗಳಿಗೆ ದನಿ ನೀಡುತ್ತಿದ್ದವು. ಈ ಅಭಿಪ್ರಾಯ ಸಂಗ್ರಹಣೆ ಪ್ರಮುಖ ನಗರಗಳಿಗೆ ಮಾತ್ರ ಸೀಮಿತವಾಗಿರಲಿಲ್ಲ."

"ಜರ್ಮನಿಯ ಖ್ಯಾತ ಬರಹಗಾರರು, ರಾಜಕಾರಣಿಗಳು, ಇತಿಹಾಸ ತಜ್ಞರು, ಮನಶಾಸ್ತ್ರ ತಜ್ಞರು, ಸಮಾಜ ಶಾಸ್ತ್ರಜ್ಞರು ಹಾಗೂ ಪತ್ರಕರ್ತರನ್ನೆಲ್ಲ ಯುದ್ಧ ಕುರಿತ ಚರ್ಚೆಯಲ್ಲಿ ತೊಡಗಿಸಿಕೊಂಡವು. ಸದ್ದಾಂ ನ ಪರವಾಗಿ ಹಾಗೂ ವಿರುದ್ಧವಾಗಿ ಅತ್ಯಂತ ಗಟ್ಟಿ ಅಭಿಪ್ರಾಯಗಳನ್ನು ಹೊಂದಿದ್ದ ಕುರ್ದ್ ಮತ್ತು ಇತರ ಅರಬ್ ಜನತೆಗೆ ಚರ್ಚೆಗಳಲ್ಲಿ ಸಮಾನ ಅವಕಾಶ ಒದಗಿಸಲಾಗಿತ್ತು."

"ಇರಾಕಿನ ವಿರುದ್ಧ ಮಾಡಿರುವ ಆಪಾದನೆಗಳ ಸತ್ಯಾಸತ್ಯತೆಗಳನ್ನು ಬಯಲಿಗೆಳೆಯಲು ವಿಶ್ವಸಂಸ್ಥೆಯ 'ಆಹಾರಕ್ಕಾಗಿ ತೈಲ ಯೋಜನೆ'ಯ ಮಾಜಿ ನಿರ್ದೇಶಕ ಹ್ಯಾನ್ಸ್ ವಾನ್ ಸ್ಪೋನಿಕ್ ಅವರು ಜರ್ಮನಿಯ ಮಾಧ್ಯಮ ತಂಡವನ್ನು ಎರಡು ವಾರಗಳ ಭೇಟಿಗಾಗಿ ತಮ್ಮೊಂದಿಗೆ ಕರೆದೊಯ್ದಿದ್ದರು.

ಇರಾಕಿನಲ್ಲಿ ಶಸ್ತ್ರಾಸ್ತ್ರ ತಪಾಸಣೆ ಮಾಡಿದ ವಿಶ್ವಸಂಸ್ಥೆಯ ಹ್ಯಾಗ್ಸ್ ಬ್ಲಿಕ್ಸ್ ಅವರ ವಿಶೇಷ ಸಂದರ್ಶನವನ್ನೂ ಎ.ಆರ್.ಡಿ. ಚಾನೆಲ್ ಪ್ರಸಾರ ಮಾಡಿತು. ಜರ್ಮನಿಯ ಜನಪ್ರಿಯ ವಾರಪತ್ರಿಕೆಗಳು ಇರಾಕ್‌ನ ನೆಲದಲ್ಲಿ ಚೆಲ್ಲಿದ ಮುಗ್ಧ ನಾಗರಿಕರ ರಕ್ತವನ್ನು ತೋರಿಸುವ ಸಚಿತ್ರ ಸಂಚಿಕೆಗಳನ್ನು ಪ್ರಕಟಿಸಿತು" - ಎನ್ನುತ್ತಾರೆ ಸಾರಾ ಜೋನ್. ಆಕ್ರಮಣ ಆರಂಭವಾಗುವ ಎಷ್ಟೋ ತಿಂಗಳು ಮೊದಲೇ ಹುಟ್ಟಿಕೊಂಡ ಯುದ್ಧ ವಿರೋಧಿ ದನಿಯನ್ನು ಪ್ರಸಾರ ಮಾಡಿದ ಮಾಧ್ಯಮಗಳು, ಯುದ್ಧದ ವರದಿಗಾರಿಕೆಯಲ್ಲಿ ತೋರಿಸಿದ ಪಕ್ಷಪಾತ ಗಂಭೀರವಾದದ್ದು. ಭಾರತದಂತಹ ದೇಶದಲ್ಲಿ, ವಿದೇಶದ ಸುದ್ದಿ ಪಡೆಯಲ್ಲು ವಿದೇಶದ ಸುದ್ದಿ ಸಂಸ್ಥೆಗಳನ್ನೇ ಆಶ್ರಯಿಸಿರುವ ಪರಿಸ್ಥಿತಿಯಲ್ಲಿ ನಮಗೆ ಸಿಕ್ಕಿರುವ ಸತ್ಯ ಸಂಗತಿಗಳು ತೀರಾ ಕಡಿಮೆ. ಅಮೇರಿಕಾದ ಅಸೋಸಿಯೇಟೆಡ್ ಪ್ರೆಸ್ (ಎ.ಪಿ) ಮತ್ತು ಬ್ರಿಟನ್‌ನ ರಾಯಿಟರ್ಸ್ ಸುದ್ದಿ ಸಂಸ್ಥೆಗಳೇ ಭಾರತದ ಹೆಚ್ಚಿನ ಪತ್ರಿಕೆಗಳಿಗೆ ಹಾಗೂ ಸುದ್ದಿ ಸಂಸ್ಥೆಗಳಿಗೆ ಸುದ್ದಿ ಒದಗಿಸುವುದು. ನಮ್ಮದೇ ಸುದ್ದಿ ಸಂಸ್ಥೆಯಾದ ಪಿ.ಟಿ.ಐ ಕೂಡ ಆದರಿಸಿರುವುದು ಈ ಎರಡು ವಿದೇಶೀ ಸಂಸ್ಥೆಗಳನ್ನೇ, ಹೀಗಾಗಿ ನಾವುಗಳು ಪಡೆದ ಸುದ್ದಿಯಲ್ಲಿ ಹೆಚ್ಚಿನಂಶ ಬಂದಿದ್ದು ಅಮೇರಿಕಾದ ಪರವಾಗಿದ್ದ ಪತ್ರಕರ್ತರಿಂದ ಹೀಗಾಗಿ 'ಸತ್ಯ' ಬೇರೇನೋ ಇದೆ.

ಬೀದಿಗಿಳಿದ ವಿದ್ಯಾರ್ಥಿಗಳು

ಇದರ ಹುಡುಗಾಟದಲ್ಲಿ ತೊಡಗಿದ ಮುಂಬೈನ ಕೆಲವು ವಿದ್ಯಾರ್ಥಿಗಳು ಒಂದು ದಿನ ಮುಂಬೈನ ಬೀದಿಗಳಲ್ಲಿ ಮೆರವಣಿಗೆ ಹೊರಟರು. ನಾವು ಓದುತ್ತಿರುವ, ನೋಡುತ್ತಿರುವ, ಕೇಳುತ್ತಿರುವ ಯುದ್ಧದ ಸುದ್ದಿಯಲ್ಲಿ ಎಲ್ಲವೂ ನಿಜವಿಲ್ಲ. ಅಮೇರಿಕಾ ಮತ್ತು ಬ್ರಿಟನ್‌ನ ಸುದ್ದಿಮೂಲಗಳು ನಂಬಲು ಅರ್ಹವಲ್ಲ ಎಂದು ಜನರಿಗೆ ಸಾರಿ ಹೇಳಿದರು. ಮುಂಬೈನ ಪ್ರಧಾನ ಪತ್ರಿಕಾ ಕಛೇರಿಗಳಿಗೆ ತೆರಳಿ ಯುದ್ಧ ಕುರಿತು ಪರ್ಯಾಯ ಮಾಹಿತಿಗಳನ್ನು ಕೊಡುತ್ತಿರುವ ಸುದ್ದಿಮೂಲಗಳನ್ನು ಆದರಿಸಬೇಕೆಂದು ಮನವಿ ಸಲ್ಲಿಸಿದರು. ಈ ರೀತಿ ಪರ್ಯಾಯ ಮಾಹಿತಿ ನೀಡುತ್ತಿದ್ದ ವೆಬ್‌ಸೈಟ್‌ಗಳ ಪಟ್ಟಿಯನ್ನು ಜನರಲ್ಲಿ ಹಂಚಿದವು.

ಮಾಧ್ಯಮಗಳ ಈ ರೀತಿಯ ಪಕ್ಷಪಾತದ ಬಗ್ಗೆ ಜನವರಿಯಲ್ಲೇ ಹಿರಿಯ ವರದಿಗಾರ ರಾಬರ್ಟ್ ಫಿಸ್ಕ್ ಮುನ್ಸೂಚನೆ ನೀಡಿದ್ದರು. ಯುದ್ಧದ ಮೊದಲೇ ಈ ಕುರಿತು ಲೇಖನ ಬರೆದಿದ್ದ ಫಿಸ್ಕ್ ಅವರು, ಅಮೇರಿಕಾ ತಳೆಯುವ ನಿಲುವನ್ನು, ಹೇರುವ ನಿಷೇಧಗಳನ್ನು, ಮಾಧ್ಯಮಗಳು ಬಳಸಬಹುದಾದ ಪದಗಳನ್ನು ಪಟ್ಟಿಮಾಡಿದ್ದರು. ಸತ್ಯಾಂಶಗಳನ್ನು ವರದಿ ಮಾಡುವ ಪತ್ರಕರ್ತರ ಮೇಲೆ ಅಮೇರಿಕಾ ಹೊರಿಸುವ ಆಪಾದನೆಯನ್ನು ಮೊದಲೇ ಸೂಚಿಸಿದ್ದರು. ಆದರೂ ಇದು ಮುನ್ಸೂಚನೆ ಆಗುವ ಬದಲು ಇದು ಮಾರ್ಗದರ್ಶನ ದಂತಾಗಿದ್ದು ಆತಂಕಕಾರಿ.

- ಕಡಲು

ಶಕ್ತಿಶಾಲಿ ಕಥಾವಸ್ತು - ದುರ್ಬಲ ನಿರೂಪಣ

ಸಿನಿಮಾ

ರಾಮು

ಪಾಳೇಗಾರಿ ವ್ಯವಸ್ಥೆಯ ಶಿಥಿಲತೆಯನ್ನು ತೆರೆದಿಡುವ ಶಕ್ತಿಶಾಲಿ ಕಥಾವಸ್ತು ಡಾ. ಕಂಬಾರರ 'ಸಿಂಗಾರೆವ್ವ ಮತ್ತು ಅರಮನೆ'ಯಲ್ಲಿದೆ. ಆದರೆ ಇದನ್ನು ಸಮರ್ಥವಾಗಿ ತರಲು ನಿರ್ದೇಶಕ ನಾಗಾಭರಣ ಸೋತಿದ್ದಾರೆ. ವಸ್ತುವಿನ ಅಂತರಾಳಕ್ಕೆ ಇಳಿಯದೇ ದುರ್ಬಲವಾಗಿಸಿದ್ದಾರೆ

ಈ ಚಿತ್ರದ ನಿರ್ಮಾಪಕ ಸಂದೇಶ್ ನಾಗರಾಜ್, ಚಿತ್ರದ ಮೊದಲಿಗೇ ಕನ್ನಡ ಕುಲಕೋಟಿಗೆ ಒಂದು ನಮಸ್ಕಾರ ಹಾಕಿ ಬಿಡುವಿಲ್ಲದ ಕೆಲಸಗಳ ಮಧ್ಯೆ ಈ ಸದಭಿರುಚಿ ಚಿತ್ರವನ್ನು ನಮ್ಮ ಮಡಿಲಿಗೆ ಹಾಕಿರುವುದಾಗಿ ಹೇಳಿ, ಯಶಸ್ವಿಗೊಳಿಸಿ ಎಂದು ಅಂಗಲಾಚಿದ್ದಾರೆ. ಪಾಪ! ಇವರ ಅಂಗಾಚುವಿಕೆಯನ್ನು ಕೇಳಿ ಚಿತ್ರಮಂದಿರ ದಲ್ಲಿ ಇರುವ ಬೆರಳೆಣಿಕೆಯ ಪ್ರೇಕ್ಷಕರು ಏನು ಮಾಡಲು ಸಾಧ್ಯ?

ಈಗ ಪ್ರಶ್ನೆಯಿರುವುದು, ದುರಭಿರುಚಿಯೇನೂ ಇಲ್ಲದಿದ್ದರೂ ಸದಭಿರುಚಿಯಾದರೂ ಈ ಚಿತ್ರದಲ್ಲಿ ಏನಿದೆ ಎಂಬುದು. ಮಸಾಲೆ ಪ್ರಿಯರಿಗೆ ಮಸಾಲೆಯೂ ಇಲ್ಲ, ಕಲಾ ಪ್ರಿಯರಿಗೆ ಕಲೆಗಾರಿಕೆಯೂ ಏನಿಲ್ಲ.

ಖ್ಯಾತ ಸಾಹಿತಿ ಚಂದ್ರಶೇಖರ ಕಂಬಾರರ 'ಸಿಂಗಾರವ್ವ ಮತ್ತು ಅರಮನೆ' ಕಾದಂಬರಿ ಆಧಾರಿತವಾದ ಈ ಚಿತ್ರದ ಕಥೆಯ ವಸ್ತುವೇ ಪಾಳೇಗಾರಿ ಪದ್ಧತಿಯ ಅಧಃಪತನ, ಶಿಥಿಲತೆ. ಆದರೆ ಕೇವಲ ಲೈಂಗಿಕ ವಿಚಾರಕ್ಕೆ ಸೀಮಿತಗೊಳಿಸಿದಂತೆ ಕಾಣುತ್ತದೆ. ಸಿಂಗಾರವ್ವಳನ್ನು ಧನದಾಹಿಯಾದ ಅವಳಪ್ಪ ಒಬ್ಬ ಶ್ರೀಮಂತ ದೇಸಾಯಿಯೊಬ್ಬನಿಗೆ ಮದುವೆ ಮಾಡಿ ಕೊಡುತ್ತಾನೆ. ಅವನೋ ಹೆಣ್ಣಿಗ, ಮಾತ್ರವಲ್ಲ, ಅರೆ ಹುಚ್ಚ ಬೇರೆ. ಬಯಲಾಟದ ಹೆಣ್ಣುಗಳೊಂದಿಗೆ ಹಾಡಿ ಕುಣಿದು, ಅವರ ಮೊಣಕಾಲನ್ನು ನೋಡಿಯೇ ಒತ್ತಡ ತಾಳಲಾರದೇ ಮೂರ್ಛೆ ಹೋಗಿ, ಅದರಲ್ಲೇ ಸುಖ ಕಾಣುವ ಮನೋರೋಗಿ. ಆಸೆ ಆಕಾಂಕ್ಷೆಗಳನ್ನು ಹೊತ್ತು ಬಂದ ಸಿಂಗಾರವ್ವ ಇವನ ವರ್ತನೆಯನ್ನು ಕಂಡು ದಿಗ್ಭ್ರಾಂತಳಾಗುತ್ತಾಳೆ. ಇದು ಸಾಲದೆಂಬಂತೆ ದೇಸಾಯಿಯ ಸಹವರ್ತಿಗಳೇ ಆತನ ಚಪಲವನ್ನು ಕಂಡು ಹೆಣ್ಣಿನ ಮೊಣಕಾಲನ್ನು ತೋರಿಸಿಯೇ ಅವನ ಮುಕ್ಕಾಲುಪಾಲು ಆಸ್ತಿಯನ್ನು ಕಬಳಿಸಿರುತ್ತಾರೆ. ಇದನ್ನೆಲ್ಲಾ ಕಂಡ ದೇಸಾಯಿಯ ತಾಯಿ ಒಂದು ಗಂಡು ಮಗುವನ್ನು ಹೆತ್ತು ಕೊಡುವಂತೆ ಸಿಂಗಾರವ್ವಳನ್ನು ಪೀಡಿಸುತ್ತಾಳೆ. ಸಿಂಗರವ್ವ ದೇಸಾಯಿಯ ನಿಜ ಸಾಮರ್ಥ್ಯವನ್ನು ಹೇಳಿದಾಗ ಹತಾಶಳಾದ ತಾಯಿ ಅರಮನೆ ಉಳಿಯಲು ಒಂದು ಗಂಡು ಮಗುವನ್ನು ಹೆರಲೇಬೇಕೆಂದು ಹೇಳಿ ಕಣ್ಮುಚ್ಚುತ್ತಾಳೆ.

ತಾಯಿಯಾಗಬೇಕೆಂಬ ಅದಮ್ಯ ಹಂಬಲದಿಂದ ಸಿಂಗಾರವ್ವ ತನ್ನ ಅತ್ತೆಯ ಆಸೆಯನ್ನು ಪೂರೈಸಲು ತನ್ನ ಗಂಡನ ಭಂಟ ಮರಿಯನನ್ನು ಸೇರಿ ಗರ್ಭಿಣಿಯಾಗುತ್ತಾಳೆ. ಈ ಮರಿಯ ಹಿಂದೆ ಸಿಂಗಾರವ್ವಳ ತಂದೆಯ ಮನೆಯಲ್ಲೇ ಜೀತಕ್ಕಿದ್ದ ಆಳು. ಸಿಂಗಾರವ್ವಳ ತಂದೆ ಈತನ ಅಕ್ಕನೊಂದಿಗೆ ಹೊಂದಿರುವ ಸಂಬಂಧವನ್ನು ಕಂಡು ಆತನನ್ನು ಕೊಲ್ಲಲು ಹೋಗಿ ಆಯತಪ್ಪಿ ತನ್ನ ಅಕ್ಕನನ್ನೇ ಕೊಂದು ಜೈಲು ಪಾಲಾಗಿರುತ್ತಾನೆ. ಅಲ್ಲಿಂದ ಬಿಡುಗಡೆಯಾಗಿ ದೇಸಾಯಿ ಮನೆ ಸೇರಿ ಆತನ ನೆಚ್ಚಿನ ಭಂಟನಾಗುತ್ತಾನೆ. ಸಿಂಗಾರವ್ವನ ತಂದೆಯ ಮೇಲಿನ ದ್ವೇಷದಿಂದ ಆಕೆಯನ್ನು ಬಯಸುತ್ತಾನೆ. ಆದರೆ ಸಿಂಗಾರವ್ವ ಇದಕ್ಕೊಪ್ಪುವುದಿಲ್ಲ. ಅವಳ ಹತಾಶ ಸ್ಥಿತಿಯನ್ನು ಕಂಡು ಮರುಗಿ ಅವಳ ರಕ್ಷಣೆಗೆ ನಿಲ್ಲುವುದಲ್ಲದೇ ಆಕೆಯನ್ನು ಪ್ರೀತಿಯಿಂದ ಕಾಣುತ್ತಾನೆ ಮರಿಯ. ಈ ಪ್ರೀತಿಯೇ ಕಡೆಗೆ ಸಿಂಗಾರವ್ವ ಅವನನ್ನು ಸೇರುವಂತೆ ಮಾಡುತ್ತದೆ.


ಸಿಂಗಾರವ್ವ ಬಸಿರಾಗಿರುವುದನ್ನು ತಿಳಿದು ಕ್ರೋಧಗೊಂಡ ದೇಸಾಯಿ ಅದನ್ನು ನಾಶಪಡಿಸಲು ಯತ್ನಿಸುತ್ತಾನೆ. ಅದಕ್ಕೆ ಅವಕಾಶ ಕೊಡದ ಸಿಂಗಾರವ್ವ ಪ್ರತಿಭಟಿಸುತ್ತಾಳೆ ಮಾತ್ರವಲ್ಲ ಹೆಣ್ಣಿನ ಸಾರ್ಥಕತೆಯಿರುವುದು ತಾಯಿಯಾಗುವುದರಿಂದ ಎಂದು ತನ್ನ ಬಸಿರನ್ನು ಸಮರ್ಥಿಸಿಕೊಳ್ಳುತ್ತಾಳೆ. ಹತಾಶಗೊಂಡ ದೇಸಾಯಿ ಸಿಂಗಾರವ್ವಳ ದುರ್ನಡತೆ ಬಗ್ಗೆ ಪತ್ರ ಬರೆದು ತನಗೆ ಗುಂಡಿಕ್ಕಿಕೊಂಡು ಆತ್ಮಹತ್ಯೆ ಮಾಡಿಕೊಳ್ಳುತ್ತಾನೆ.

ಸಿಂಗಾರವ್ವಳನ್ನು ರಕ್ಷಿಸಲು ಮರಿಯಾ ಆ ಪತ್ರವನ್ನು ನುಂಗಿ, ತಾನೇ ದೇಸಾಯಿಯನ್ನು ಕೊಂದಿದ್ದೆಂದು ಪೋಲೀಸರಿಗೆ ಶರಣಾಗಿ ಮತ್ತೆ ಜೈಲು ಸೇರುತ್ತಾನೆ. ಇತ್ತ ಸಿಂಗಾರವ್ವ ಮಗುವಿಗೆ ಜನ್ಮನೀಡಿ ಸಂತೃಪ್ತಿಯ ನಗು ಬೀರುತ್ತಾಳೆ. ಇದು 'ಸಿಂಗಾರವ್ವ' ಚಿತ್ರದ ಒಟ್ಟು ಸಾರಾಂಶ.

'ಸಿಂಗಾರೆವ್ವ' ಕಾದಂಬರಿ ಈ ಕಥೆಯ ಹಂದರದೊಂದಿಗೆ, ಪಾಳೆಯಗಾರಿ ವ್ಯವಸ್ಥೆಯ ಅವನತಿಯ ಧ್ವನಿಯನ್ನೂ ಹೊಂದಿದೆ. ದೇಸಾಯಿ ಮತ್ತು ಅವನ ಅರಮನೆ ಪಾಳೆಯಗಾರಿ ವ್ಯವಸ್ಥೆಯ ಅವನತಿಯ ಪ್ರತೀಕವಾದರೆ, ಸಿಂಗಾರವ್ವ ಆ ವ್ಯವಸ್ಥೆಯಲ್ಲಿ ನರಳುತ್ತಿರುವವರ ಪ್ರತೀಕ. ಪಾಳೇಗಾರಿ ಶಿಥಿಲತೆ ಬಗ್ಗೆ ಲೇಖಕ ಕಂಬಾರರಿಗ ಹಳಹಳಿಕೆ ಇರುವುದಾದರೂ, ಇದು ಅತ್ಯಂತ ಶಕ್ತಿಶಾಲಿಯಾದ ವಸ್ತು ಒಳಗೊಂಡಿದೆ. ಆದರೆ ಚಿತ್ರ, ಕಥೆಯ ಹಂದರವನ್ನು ದೃಶ್ಯಮಾಧ್ಯಮದಲ್ಲಿ ತೋರಿಸುವುದಕ್ಕೆ ಸೀಮಿತವಾಗಿ ಅದರ ಹೂರಣವನ್ನು, ಪೂರ್ತಿಯಾಗಿ ಮರೆತಿದೆ. 'ಸಿಂಗಾರೆವ್ವ...' ಚಿತ್ರ ಕಾದಂಬರಿಯನ್ನು ದೃಶ್ಯಮಾಧ್ಯಮದಲ್ಲೂ ಉತ್ತಮ ಕೃತಿಯಾಗಿಸುವುದರಲ್ಲಿ ನಾಗಾಭರಣ ಸೋತಿ... ಎಂದು ಹೇಳದೆ ವಿಧಿಯಿಲ್ಲ. 'ಸಿಂಗಾರವ್ವ' ಉ... ಸಿನಿಮಾ ಆಗುವ ಸಾಧ್ಯತೆಯನ್ನು ಹೊಂದಿರುವ... ಆದರೆ ಅಷ್ಟೇ ಸವಾಲು ಒಡ್ಡುವ ಕೃತಿ ಕೂಡಾ... ಸವಾಲನ್ನು ಎದುರಿಸುವ ಪರಿಣತಿ ಹೊಂದಿ... ನಾಗಾಭರಣರಿಂದ ಇದ್ದ ನಿರೀಕ್ಷೆಯನ್ನು ಈ... ಹುಸಿ ಮಾಡಿದೆ.

ಚಿತ್ರದಲ್ಲಿ ಸಿಂಗಾರವ್ವ ಮಗುವಿ... ಹಪಹಪಿಸುವ ಅಂಶವೇ ಪ್ರಧಾನವಾಗಿ ಉಳಿ... ಅಂಶಗಳು ಗೌಣವಾಗಿಬಿಟ್ಟಿವೆ. ಹಾಗಾಗಿ ಚಿತ್ರ... ಬೇರೆ ಕಥೆಯೇ ಇಲ್ಲ. ಹೆಣ್ಣಾಗಿ ಹುಟ್ಟಿದ... ಅವಳ ಸಾಫಲ್ಯವಿರುವುದೇ ಅ... ತಾಯಿಯಾಗುವುದರಿಂದ. ಅದು ಯ... ಪರಿಯಾದರೂ ಸರಿ! ಇದು ಈ ಚಿತ್ರದಲ್ಲಿ... ಏಕೈಕ ಸಂದೇಶ. ಇದು ಸರಿಯೇ? ಹೆಣ್ಣಿಗೆ ... ಪರಿಪೂರ್ಣತೆಯೆ? ತಾಯಿಯಾಗದೇ ಜೀ... ಸಾಫಲ್ಯ ಕಂಡುಕೊಂಡ ಹೆಣ್ಣುಗಳಿಲ್ಲ... ಇದನ್ನು ನಮ್ಮ ಹೆಂಗೆಳೆಯ... ಹೇಳಬೇಕು.

ಇನ್ನು ಚಿತ್ರದ ತಾಂತ್ರಿಕ ಅಂ... ಬಗ್ಗೆ ಹೇಳಬೇಕೆಂದರೆ ವಿಶೇಷವೆ... ಉತ್ತರ ಕರ್ನಾಟಕದ ಅರಮನೆ ... ಹೇಳುವ ಒಂದು ದೊಡ್ಡ ಮನೆಯ... ಹೆಚ್ಚು ಕಮ್ಮಿ ಪೂರ್ತಿ ಚಿತ್ರೀಕರಣ... ರುವುದರಿಂದ ದೃಶ್ಯವೈಭ... ಅವಕಾಶವಿಲ್ಲ. ಗಮನ ಸೆಳೆಯುವ... ಛಾಯಾಗ್ರಹಣವಾಗಲೀ, ಸಂಗೀತ ವಾಗಲಿ... ಉತ್ತರ ಕರ್ನಾಟಕ ಶೈಲಿಯ ಉಡ... ತೊಡುಗೆಯಲ್ಲಿ ನಾಗಿಣಿ ಭರಣ ವಸ್ತ್ರ... ಮೆಚ್ಚುವಂತಹದ್ದು. ನಟನೆಯಲ್ಲಿ ಪ್ರೇ... ಸಿಂಗಾರವ್ವನ ಪಾತ್ರದಲ್ಲಿ ಆ ಪಾತ್ರಕ್ಕೆ ಬ... ವಿಶಿಷ್ಟವಾದ ಭಾಪನ್ನು ಒತ್ತ... ಯಶಸ್ವಿಯಾಗಿಲ್ಲ. ಆದರೆ ಅವಿನಾಶ್ ರ... ಮಾತ್ರ ದೇಸಾಯಿ ಪಾತ್ರದಲ್ಲಿ ತಮ್ಮ ... ಅಭಿನಯದಿಂದ ಗಮನ ಸೆಳೆಯು... ಮರಿಯನಾಗಿ ಶಿವಧ್ವಜ್ ಪರವಾಗಿಲ್ಲ. ನಿ... ನಾಗಾಭರಣ ಪ್ರಸ್ತುತತೆಗೆ ಹೆಚ್ಚು ಸ್ಪಂದಿಸುವ... ಗಮನ ಹರಿಸುವುದು ಒಳ್ಳೆಯದು. ಈ ನಿ... ಅವರ 'ಜನುಮದ ಜೋಡಿ' ಪ್ರಶಂಸಾರ್ಹ...



ಪ್ರೇಮಾ
ಶಿವಧ್ವಜ್

“ಗುಬ್ಬಿಗೂಡನ್ನಾಗ ಬಂದೂಕಿಟ್ಟು ಹಾರಸ್ತಿವಿ ಅಂತಾನ ಹಿರಿಯಣ್ಣ...

ಬಂದೂಕಿನ ನಳಕ್ಯಾಗ ಗುಬ್ಬಿ ಗೂಡ ಕಟ್ಟಸ್ತೀವಿ ಅಂದ್ರ, ಗುಬ್ಬಿ ಗೂಡನ್ನಾಗ ಬಂದೂಕಿಟ್ಟು, ಹಾರಸ್ತಿವಿ ಅಂತಾನ ಹಿರಿಯಣ್ಣ ಇರಾಕ ಮೇಲೆ ದಾಳಿ ಮಾಡುತ್ತಿರುವ ಅಮೇರಿಕಾ ಅಧ್ಯಕ್ಷನ ಮನೋಭಾವವನ್ನು ಕವಿಯಿತ್ರ ಕಾವ್ಯಶ್ರೀ ಕವಿತೆಯಲ್ಲಿ ವರ್ಣಿಸಿದ್ದು ಹೀಗೆ.

'ಸತ್ತರ ಸಾಯ್ಲಿ ಕೆಟ್ರಕೆಡಲಿ, ನಮಗೆ ಇವರಿಬ್ರು ಸುಖದವರಲ್ಲ, ಆದರೂ ಹೆಣ್ಣ ಜೀವ ಶಾಂತಿ ಬೇಡ್ತದ, ಎಲ್ಲರೂ ತಣ್ಣಗಿರಲಂತ' ಎಂದು ಕರುಣೆ - ಶಾಂತಿ ಬಯಸುವ ಹೆಣ್ಣಿನ ಮನೋಸ್ಥಿತಿ, ಯುದ್ಧದ ಪರಿಣಾಮವನ್ನು ಕಾವ್ಯಶ್ರೀ ಕವಿತೆಯಲ್ಲಿ ವ್ಯಕ್ತವಾಯಿತು.

ಖ್ಯಾತ ಸಾಹಿತಿ ಚಿತ್ರಶೇಖರ ಕಂಠಿ ಅವರು ''ಧರೆ ಹತ್ತಿ ಉರಿದೊಡೆ ಅಲ್ಲಲ್ಲ ಉರಿದರೆ, ಪುಣ್ಯಕೋಟಿ ಗತಿಯೇನು?'' ಎನ್ನುವ ಮೂಲಕ ಯುದ್ಧದ ಘೋರ ಪರಿಣಾಮವನ್ನು ಪ್ರಶ್ನಿಸಿದರೆ, ಯುವ ಕವಿ ರಾಜಶೇಖರ ಮಾಂಗ ಸತ್ಯ ಶಾಂತಿ ನೆಲಕಚ್ಚಿ ನಿತ್ಯ ಸಾಯುತ್ತಿವೆ ನೂರಾರು ಜೀವಗಳು' ಎಂಬ ಕಳಕಳಿ ವ್ಯಕ್ತಪಡಿಸಿದರು, ಯುದ್ಧ ಮಾಡುತ್ತಿರುವ ಅಮೆರಿಕಾ ಅಧ್ಯಕ್ಷ ಬುಷ್ ಮನೆಗೆ ಬುದ್ಧ ಬರಲಿ ನಿಮಗೆ ಶಾಂತಿ ಬಯಸಿ' ಎನ್ನುವ ಮೂಲಕ ಯುದ್ಧ ನಿಲ್ಲಿಸಿ ಶಾಂತಿ ನೆಲೆಸಲಿ ಎಂಬ ಆಶಯ ವ್ಯಕ್ತಪಡಿಸಿದವರು ಎಸ್. ಪಿ. ಸುಳ್ಳದ.

ಜನವಾದಿ ಮಹಿಳಾ ಸಂಘಟನೆ, ಪ್ರಜ್ಞಾ ಕಾನೂನು ಸಲಹ ಸಮಿತಿ, ಸಮುದಾಯ, ಭಾರತ ಜ್ಞಾನ ವಿಜ್ಞಾನ ಸಮಿತಿ ಹಾಗೂ ಕನ್ನಡ ಸಾಹಿತ್ಯ ಪರಿಷತ್ ಸಂಯುಕ್ತವಾಗಿ ಗುಲ್ಬರ್ಗಾದಲ್ಲಿ ಹಮ್ಮಿಕೊಂಡಿದ್ದ ಅಂತಾರಾಷ್ಟ್ರೀಯ ಮಹಿಳಾ ದಿನಾಚರಣೆ ಅಂಗವಾಗಿ 'ಯುದ್ಧ ವಿರೋಧಿ' ಕವಿ ಗೋಷ್ಠಿಯಲ್ಲಿ ಕವಿಗಳ ಕವಿತೆಯಲ್ಲಿ ವ್ಯಕ್ತವಾದ ವಿಚಾರಗಳಿವು.

'ಜಗದ ಕತ್ತಲೆ ಕಳೆಯುವ ದೀಪವಾಗ ಬಹುದೆಂದು ಊಹಿಸಿದ್ದ ತಾಯಿಗೆ ವಿಶ್ವದ ವಿಷವಾಗಿರುವ ಮಗನನ್ನು ಹುಟ್ಟಿದಾಗಲೇ ಕತ್ತು ಹಿಸುಕಬೇಕಿತ್ತು ಎಂದು ಪ್ರೊ. ಆರ್. ಕೆ. ಹುಡಗಿ ಬುಷ್ ಅವ್ವನ ಆತ್ಮ ಉವಾಚ ಹೇಳಿದರು.

ಯುವ ಸಾಹಿತಿ ಮಹಿಪಾಲ ರೆಡ್ಡಿ ಮನ್ನೂರ, 'ಯುದ್ಧಕ್ಕೆ ಎಲ್ಲವೂ ಗೊತ್ತಿದೆ.' ಕವಿತೆಯಲ್ಲಿ ಭಯೋತ್ಪಾದಕತೆ ವಿರೋಧಿಸುವ ನೆಪದಲ್ಲಿ ಭಯೋತ್ಪಾದಿಸುತ್ತಿದೆ ಎಂದು ಅಮೇರಿಕಾದ ರಾಜಕೀಯ ತಂತ್ರವನ್ನು ಟೀಕಿಸಿದರು.

ಶ್ರೀಮಂತ ರಾಷ್ಟ್ರಗಳ ಸ್ವಾರ್ಥ ಹಿತಾಸಕ್ತಿಗಳ ಅಟ್ಟಹಾಸಕ್ಕೆ ಜಗತ್ತಿನ ತೃತೀಯ ರಂಗದ ದೇಶಗಳು ಬಲಿಯಾಗುತ್ತಿವೆ ಎನ್ನುವ ವಿಷಯ ಕವಿಗಳ ಕವಿತೆಯಲ್ಲಿ ಮೂಡಿಬಂದಿತು.

ಡಾ. ಕಾಶೀನಾಥ ಅಂಬಲಗಿ, ಜಗನ್ನಾಥ, ವಿ.ಎಸ್.ಕೋದಂಡರಾಮ, ಡಾ। ಸೂರ್ಯಕಾಂತ ಸುಜ್ಯಾತ, ಮಸ್ತಾನ ಬಿರಾದಾರ, ಚನ್ನಬಸಪ್ಪ ಮಂಗಲಗಿ, ಸಂಧ್ಯಾ ಹೊನಗುಂಟಿಕರ್, ಶಿವಲೀಲಾ ರೆಡ್ಡಿ ಡಿ.ಎಂ. ನದಾಫ್, ಭಾಗ್ಯಲತಾ ಶಾಸ್ತ್ರಿ... ವಾಸುದೇವ ಸೇಡಂ ಕವನ ವಾಚಿಸಿದರು.

ಗುಲ್ಬರ್ಗಾದಲ್ಲಿ ವಿಶಿಷ್ಟ ಕಾರ್ಯಕ್ರಮ

ಹಿರಿಯ ಲೇಖಕಿ ಡಾ। ವಿಜಯಾ ... ಅತಿಥಿಗಳಾಗಿ ಭಾಗವಹಿಸಿದ್ದರು. ಡಾ... ಖಾನಾಪುರೆ ಅಧ್ಯಕ್ಷತೆ ವಹಿಸಿದ್ದರು.

ಅಂದೇ ಯುದ್ಧ ವಿರೋಧಿಸಿ ಶಾಂತಿ ಬ... ಹೊತ್ತಿದ ದೀಪ ಹಿಡಿದು ನಗರದಲ್ಲಿ ಆಕ... ಮೆರವಣಿಗೆ ನಡೆಯಿತು. ಕೆ.... ಮುಂತಾದವರು ಮಾತನಾಡಿದರು. ಅ... 'ಅಸ್ತಿತ್ವ' ಸಿನಿಮಾದ (ಮಹಿಳಾ ಪ್ರ... ಪ್ರದರ್ಶನ- ಸಂವಾದವೂ ರಾತ್ರಿಯವ... ನಡೆಯಿತು.

PRB DECR 319-79/79 AIKYARANGA WEEKLY Reg. No. 17015/64 CPM(G) / KA /BGS-119/2003-05
ಭಾರತ ಕಮ್ಯುನಿಸ್ಟ್ ಪಕ್ಷ(ಮಾರ್ಕ್ಸ್‌ವಾದಿ), ಕರ್ನಾಟಕ ರಾಜ್ಯ ಸಮಿತಿಯ ಪರವಾಗಿ ಮುದ್ರಣ ಮತ್ತು ಪ್ರಕಾಶನ: ಜಿ.ಎನ್.ನಾಗರಾಜ್
ಸಂಪಾದಕರು: ಎಸ್.ವೈ.ಗುರುಶಾಂತ್ ಸಂಪಾದಕೀಯ ಕಛೇರಿ: ನಂ.12, 18ನೇ ಅಡ್ಡರಸ್ತೆ, ಸಂಪಂಗಿರಾಮನಗರ, ಬೆಂಗಳೂರು-27 ಫೋನ್ ನಂ. 2236462.
ಮುದ್ರಣ: ಹನಿ ಪ್ರಿಂಟರ್ಸ್, ಕ್ವೀನ್ ರಸ್ತೆ, ಬೆಂಗಳೂರು.
Printed & Published by Communist Party of India(Marxist), Karnataka State Committee. Editor : S.Y.GURUSHANTH